ಸಂಪುಟ: 05 ಸಂಚಿಕೆ: 168 ಪುಟಗಳು: 08 ಸೋಮವಾರ 01 ಸೆಪ್ಟೆಂಬರ್ 2025 www.udayavahini.in epaper.udayavahini.in Udayavahini news Udayavahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 +91 8035841833 ₹5

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

**ಮುಂಜಾನೆ ಮಾತು**

ಮುಂದಿನ ಕಾಲಿಗೆ ಗರ್ವವಿಲ್ಲ ಹಿಂದಿನ ಕಾಲಿಗೆ ಬೇಸರವಿಲ್ಲ ಯಾಕೆಂದರ ಅವುಗಳಿಗೆ ಗೊತ್ತು ಇದು ಕ್ಷಣಾರ್ಧದಲ್ಲಿ ಬದಲಾಗುವುದಿದೆ ಅಂತ ಜೀವನವು ಹೀಗೆ ಯಾವಗಲೂ ಸ್ತಿರವಾಗಿರುವುದಿಲ್ಲ

## ಸ್ಫೋಟಕ ಮಾಹಿತಿ ಬಹಿರಂಗಗೊಳಿಸಲಿದ್ದಾರಂತೆ ಹೆಚ್‌ಡಿಕೆ

**ಧರ್ಮಸ್ಥಳದ ವಿರುದ್ಧ ಷಡ್ಯಂತ್ರ**

• ಉದಯವಾಹಿನಿ, ಬೆಂಗಳೂರು

ಧರ್ಮಸ್ಥಳದ ವಿರುದ್ಧ ಷಡ್ಯಂತ್ರ ರೂಪಿಸಿರುವುದರ ಹಿಂದೆ ಪ್ರಭಾವಿಗಳ ಕೈವಾಡವಿದ್ದು, ನಾಳೆ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ದೆಹಲಿಯಲ್ಲಿ ಪತ್ರಿಕಾಗೋಷ್ಠಿ ನಡೆಸಿ ಮಹತ್ವದ ಮಾಹಿತಿಯನ್ನು ಬಹಿರಂಗಗೊಳಿಸಲಿದ್ದಾರೆ.

ತಮಿಳುನಾಡಿನ ಸತ್ಯಮಂಗಲದಲ್ಲಿ ನೆಲೆಯೂರಿದ್ದ ಚಿನ್ನಯ್ಯ ಅವರನ್ನು ಸಂಪರ್ಕಿಸಿದ ಕೆಲವು ವ್ಯಕ್ತಿಗಳು ಆತನನ್ನು ವಾಪಸ್ ಕರೆ ತಂದು ತಯಾರು ಮಾಡಿದ್ದರು ಎನ್ನಲಾಗಿದೆ. ಜೊತೆಗೆ ಸುಜಾತಾ ಭಟ್ ಅವರನ್ನು ಒಟ್ಟು ಸೇರಿಸಿಕೊಂಡು ಯೋಜನೆ ರೂಪಿಸಲಾಗಿತ್ತು. ಗಿರೀಶ್ ಮಟ್ಟಣ್ಣನವರ್ ಅವರು ಪೊಲೀಸ್ ಇಲಾಖೆಯಲ್ಲಿ ಸೇವೆ ಸಲ್ಲಿಸಿದ್ದರಿಂದ ತಮ ಅನುಭವದ ಆಧಾರದ ಮೇಲೆ ಒಂದಿಷ್ಟು ದಾಖಲಾತಿಗಳನ್ನು ಕಲೆ ಹಾಕಿದ್ದರು.

ಸೌಜನ್ಯ ಪ್ರಕರಣದಲ್ಲಿ ಹಲವಾರು ವರ್ಷಗಳಿಂದಲೂ ಹೋರಾಟ ನಡೆಸುತ್ತಿದ್ದ ಮಹೇಶ್‌ಶೆಟ್ಟಿ ತಿಮರೋಡಿ ಮುಂದಾಳತ್ವ ವಹಿಸಿದ್ದರು. ಜಯಂತ್ ಟಿ. ಬೆಂಗಳೂರಿನ ಆಗು -ಹೋಗುಗಳ ಮೇಲೆ ನಿಗಾ ಇಟ್ಟಿದ್ದರು. ಇದಕ್ಕೆ ತಕ್ಕ ಹಾಗೆ ಯೂಟ್ಯೂಬರ್ ಸಮೀರ್ ಎಐ ಬಳಸಿ ವೀಡಿಯೋ ಮಾಡುವ ಮೂಲಕ ವ್ಯಾಪಕ ಪ್ರಚಾರ ನೀಡಿ ಜನಾಭಿಪ್ರಾಯ ರೂಢಿಸುತ್ತಿದ್ದರು ಎಂದು ಹೇಳಲಾಗಿದೆ.

ಮಹೇಶ್‌ಶೆಟ್ಟಿ ತಿಮರೋಡಿ, ಗಿರೀಶ್ ಮಟ್ಟಣ್ಣನವರ್, ಜಯಂತ್ ಟಿ., ಸಮೀರ್ ಅವರಿಗೆ ದೆಹಲಿಯಲ್ಲಿನ ಖ್ಯಾತ ವಕೀಲರೊಬ್ಬರು ಕಾನೂನು ನೆರವು ನೀಡಿದ್ದರು.

ದೆಹಲಿಯಲ್ಲಿ ಸಭೆ ನಡೆಸಿದ ಬಳಿಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಆಪ್ತ ಬಳಗದಲ್ಲಿ ಗುರುತಿಸಿಕೊಂಡಿದ್ದ ಕೆಲವರು ಎಸ್‌ಐಟಿ ರಚಿಸಿದ್ದರೆ, ವಿಸ್ತೃತ ತನಿಖೆ ಸಾಧ್ಯ ಎಂಬ ಸಲಹೆ ನೀಡಿದ್ದರು ಎಂದು ಹೇಳಲಾಗಿದೆ.



ಎಸ್‌ಐಟಿ ತನಿಖೆಯ ಬಗ್ಗೆ ಹೆಚ್ಚಿನ ಗಮನ ಸೆಳೆಯಲು ಕೆಲ ಸ್ಥಳಗಳನ್ನು ಗುರುತಿಸಿ ಉತ್ಖನನ ನಡೆಸುವಂತೆ ಮಾಡಲು ಬೆಂಗಳೂರಿನಲ್ಲಿ ಯೋಜನೆ ಸಿದ್ಧವಾಗಿತ್ತು. ಒಂದು ವೇಳೆ ಉತ್ಖನನದಲ್ಲಿ ಯಾವ ವಸ್ತುಗಳೂ ಸಿಗದೇ ಇದ್ದರೇ ವಿಷಯಾಂತರ ಮಾಡುವುದು ಹೇಗೆ? ಹೆಚ್ಚಿನ ಸಂಖ್ಯೆಯಲ್ಲಿ ಅಸ್ಥಿಪಂಜರ ಸಿಕ್ಕರೆ ಅದನ್ನು ಬಳಸಿಕೊಂಡು ಮುಂದಿನ ಹೋರಾಟ ನಡೆಸುವ ವಿಚಾರವಾಗಿಯೂ ಚರ್ಚೆಗಳಾಗಿದ್ದವು.

ಎಸ್‌ಐಟಿ ತನಿಖೆ ಒಂದೇ ಮಾರ್ಗವಾಗಿ ಮುನ್ನಡೆಯುವಂತಹ ಒತ್ತಡದ ವಾತಾವರಣ ನಿರ್ಮಿಸಲು ಎಲ್ಲಾ ರೀತಿಯ ಸಂಚುಗಳು ರೂಪುಗೊಂಡಿದ್ದವು ಎಂದು ಮೂಲಗಳು ತಿಳಿಸಿವೆ.

ನಾಳೆ ದೆಹಲಿಯಲ್ಲಿ ಕುಮಾರಸ್ವಾಮಿ ಅವರು ಪತ್ರಿಕಾಗೋಷ್ಠಿ ನಡೆಸಿ, ಸಂಚಿನ ರೂವಾರಿಗಳು ಹಾಗೂ ಉನ್ನತ ಮಟ್ಟದಲ್ಲಿ ಕುಳಿತು ಸೂತ್ರ ಆಡಿಸುತ್ತಿರುವವರ ಬಗ್ಗೆ ಮಹತ್ವದ ಮಾಹಿತಿಯನ್ನು ಹೊರಹಾಕಲಿದ್ದಾರೆ ಎಂದು ತಿಳಿದು ಬಂದಿದೆ.

## ಧರ್ಮಸ್ಥಳ ಬಳಿಕ ಚಾಮುಂಡೇಶ್ವರಿ ಚಲೋ: ಆರ್ ಅಶೋಕ್

• ಉದಯವಾಹಿನಿ, ಬೆಂಗಳೂರು

ಚಾಮುಂಡೇಶ್ವರಿ ದೇವಾಲಯದ ಪಾವಿತ್ರ್ಯತೆಗೆ ಧಕ್ಕೆಯಾದರೆ 'ಧರ್ಮಸ್ಥಳ ಚಲೋ' ಮಾದರಿಯಲ್ಲಿ 'ಚಾಮುಂಡೇಶ್ವರಿ ಚಲೋ' ಹೋರಾಟ ಮಾಡಲಾಗುವುದು ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ್‌ಸರ್ಕಾರಕ್ಕೆ ಎಚ್ಚರಿಕೆ ನೀಡಿದರು.

ಚಾಮುಂಡಿ ಬೆಟ್ಟದ ದೇವಾಲಯಕ್ಕೆ ಭೇಟಿ ನೀಡಿ, ದೇವರ ದರ್ಶನ ಪಡೆದ ಬಳಿಕ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು. ಕಾಂಗ್ರೆಸ್ ಸರ್ಕಾರಕ್ಕೆ ಚಾಮುಂಡೇಶ್ವರಿ ತಾಯಿ ಒಳ್ಳೆಯ ಬುದ್ಧಿಯನ್ನು ನೀಡಲಿ. ಹಿಂದೂಗಳ ಶ್ರದ್ಧಾ ಕೇಂದ್ರವನ್ನು ಟಾರ್ಗೆಟ್ ಮಾಡುವ ಮನಸ್ಥಿತಿಯನ್ನು ನಿವಾರಿಸಲಿ. ಹಿಂದೂಗಳ ಧಾರ್ಮಿಕ ಕೇಂದ್ರ ಯಾವಾಗಲೂ ರಕ್ಷಣೆಯಾಗಬೇಕು, ಪವಿತ್ರವಾಗಿ ಇರಬೇಕು. ಹಿಂದೂಗಳ ಭಾವನೆಗೆ ಧಕ್ಕೆಯಾಗಬಾರದು ಎಂದು ತಾಯಿಯಲ್ಲಿ ಪ್ರಾರ್ಥಿಸಿದ್ದೇನೆ ಎಂದರು. ಮೈಸೂರಿನ ಒಡೆಯರ್ ರಾಜವಂಶಸ್ಥರು ನೂರಾರು ವರ್ಷಗಳಿಂದಲೂ ದಸರಾ ಆಚರಿಸಿಕೊಂಡು ಬಂದಿದ್ದಾರೆ. ಇಂತಹ ಪವಿತ್ರವಾದ ಹಬ್ಬವನ್ನು ಕಾಂಗ್ರೆಸ್ ಸರ್ಕಾರ ಅಪವಿತ್ರ ಮಾಡಬಾರದು. ಇದು ಹಿಂದೂಗಳ ದೇವಾಲಯ ಅಲ್ಲ ಎಂದು ಕಾಂಗ್ರೆಸ್ ನಾಯಕರು ಹೇಳಿದ್ದಾರೆ. ಅಂದಮೇಲೆ ಇದು ಯಾರದ್ದು? ಇವರಿಗೆ ಧೈರ್ಯವಿದ್ದರೆ ಮಸೀದಿ ಮುಂದೆ ಹೋಗಿ ಇದು ಮುಸ್ಲಿಮರದ್ದಲ್ಲ ಎಂದು ಹೇಳಲಿ. ಶಬರಿಮಲೆ ಅಯ್ಯಪ್ಪ, ತಿರುಪತಿ ನಂತರ ಧರ್ಮಸ್ಥಳ ಹಾಗೂ ಚಾಮುಂಡೇಶ್ವರಿ ದೇವಾಲಯಗಳನ್ನು ಗುರಿ ಮಾಡಲಾಗಿದೆ ಎಂದು ದೂರಿದರು.

### ಬಿಜೆಪಿಯವರು ಧರ್ಮಸ್ಥಳ ಬದಲು ದೆಹಲಿಯಲ್ಲಿ ಹೋರಾಟ ಮಾಡಲಿ: ಡಿಕೆಶಿ

• ಉದಯವಾಹಿನಿ, ಬೆಂಗಳೂರು

ಬಿಜೆಪಿ ಧರ್ಮಸ್ಥಳ ಯಾತ್ರೆಗೆ ಡಿಸಿಎಂ ಡಿಕೆಶಿ ಟೀಕಿಸಿದ್ದಾರೆ. ಬಿಜೆಪಿಯವರಿಗೆ ರಾಜಕೀಯ ಇಚ್ಛಾಶಕ್ತಿಯಿದ್ದರೆ ಭದ್ರಾ ಮೇಲ್ದಂಡೆಗೆ, ಬೆಂಗಳೂರು ಅಭಿವೃದ್ಧಿಗೆ ಹಣ ಕೊಡಿಸಲಿ. ಮೇಕೆದಾಟು, ಮಹದಾಯಿಗೆ ಅನುಮತಿ ಕೊಡಿಸಲಿ ಎಂದಿದ್ದಾರೆ. ಈ ಕುರಿತು ಬೆಂಗಳೂರಿನಲ್ಲಿ ಮಾತನಾಡಿದ ಅವರು, ಬಿಜೆಪಿಯವರು ಧರ್ಮಸ್ಥಳಕ್ಕೆ ಹೋಗಿ ತಮ್ಮ ವೈಯಕ್ತಿಕ ಲಾಭಕ್ಕೆ ಪ್ರಾರ್ಥನೆ ಮಾಡಿಕೊಂಡು ಬರುತ್ತಾರೆಯೇ ಹೊರತು ಬೇರೇನೂ ಇಲ್ಲ. ಇವರ ಹೋರಾಟ ಧರ್ಮಸ್ಥಳದಲ್ಲಿ ಅಲ್ಲ, ಎಲ್ಲಾ ಸಂಸದರು, ಶಾಸಕರನ್ನು ಕರೆದುಕೊಂಡು ಹೋಗಿ ದೆಹಲಿಯಲ್ಲಿ ಹೋರಾಟ ಮಾಡಬೇಕು. ರಾಜ್ಯಕ್ಕೆ ಅನುದಾನ ತರಬೇಕು ಎಂದು ಛೇಡಿಸಿದರು.

**ಸಗಣಿ ಮೇಲೆ ಕಲ್ಲು ಹಾಕಲ್ಲ:** ಶಿವಕುಮಾರ್‌ಗೆ ಶಾಸಕರ ಬೆಂಬಲ ಇಲ್ಲದೇ ಇರುವ ಕಾರಣಕ್ಕೆ ಬಿಜೆಪಿ ಕರೆದುಕೊಳ್ಳುತ್ತಿಲ್ಲ ಎನ್ನುವ ಯತ್ನಾಳ್ ಹೇಳಿಕೆ ಬಗ್ಗೆ ಕೇಳಿದಾಗ, 'ಕಸ, ಸಗಣಿ ಮೇಲೆ ಕಲ್ಲನ್ನು ಹಾಕುವುದಕ್ಕೆ ನಾನು ಇಷ್ಟಪಡುವುದಿಲ್ಲ' ಎಂದು ತಿರುಗೇಟು ನೀಡಿದರು.

## ರಾಜ್ಯ ಸರ್ಕಾರ ದಿವಾಳಿ:ಜೋಶಿ

• ಉದಯವಾಹಿನಿ, ಹುಬ್ಬಳ್ಳಿ

ರಾಜ್ಯ ಸರ್ಕಾರ ದಿವಾಳಿ ಆಗಿದೆ, ಆದರೆ ಈ ರೀತಿ ಹೇಳಿದರೆ ಸಿಎಂ ಸಿದ್ದರಾಮಯ್ಯ ಗೆ ಬೇಗನೇ ಸಿಟ್ಟು ಬರುತ್ತದೆ. ಅವರು ಆದಷ್ಟು ಬೇಗ ವ್ಯಗ್ರರಾಗುತ್ತಾರೆ ಎಂದು ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಕುಟುಕಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು. ರಾಜ್ಯ ಸರಕಾರ. ಆಸ್ತಿ ನೋಂದಣಿ, ಬಾಂಡ್ ಸೇರಿದಂತೆ ಎರಡನೇ ಬಾರಿ ಶುಲ್ಕ ಹೆಚ್ಚಳ ಮಾಡುತ್ತಿದ್ದು, ಇಲ್ಲಿಯವರೆಗೆ 48 ಬೇರೆ ಬೇರೆ ರೀತಿಯ ಶುಲ್ಕ ಹೆಚ್ಚಳ ಮಾಡಿದ್ದಾರೆ ಎಂದು ನುಡಿದರು. ಇನ್ನು ಐದು ಗ್ಯಾರಂಟಿಗಳಲ್ಲಿ ಕೇವಲ ಮೂರು ಕೊಡುತ್ತಿದ್ದಾರೆ. ಈ ಪೈಕಿ ಶಕ್ತಿ ಯೋಜನೆಯಡಿ ಬಸ್ ಸರಿಯಾಗಿ ಓಡುತ್ತಾ ಇಲ್ಲ ವಿದ್ಯುತ್ ಸಹ ಸರಿಯಾಗಿ ಕೊಡುತ್ತಿಲ್ಲ. ಅನ್ನ ಭಾಗ್ಯ ಸಹ ಕೊಡುತ್ತಿಲ್ಲ. ಅಕ್ಕಿ ಸಹ ನಾವೇ ಕೊಡುತ್ತಿದ್ದು ಇದನ್ನೇ ಅನ್ನಭಾಗ್ಯ ಎನ್ನುತ್ತಾರೆ. ರಾಜ್ಯ ಸರ್ಕಾರಕ್ಕೆ ನಾಚಿಕೆ ಆಗಬೇಕು ಎಂದು ಅವರು ಕಿಡಿಕಾರಿದರು. ರಾಜ್ಯ ಸರ್ಕಾರ ದಿವಾಳಿ ಆಗಿದೆ.ಆರ್ ಟಿಓ ಕಂದಾಯ, ಸಬ್ ರಿಜಿಸ್ಟರ್ ಕಚೇರಿ ಮುಂತಾದ ಕಡೆಗಳಲ್ಲಿ ಭ್ರಷ್ಟಾಚಾರ ತಾಂಡವಾಡುತ್ತಿದೆ ಎಂದು ಅವರು ಆರೋಪಿಸಿದರು.

## ಡಿಜೆ ನಿರ್ಬಂಧಕ್ಕೆ ಬಿವೈವಿ ಆಕ್ರೋಶ

• ಉದಯವಾಹಿನಿ, ಬೆಂಗಳೂರು

ಗಣೇಶೋತ್ಸವದಲ್ಲಿ ಡಿಜೆ ನಿರ್ಬಂಧಿಸಿರುವ ರಾಜ್ಯಸರ್ಕಾರದ ತೀರ್ಮಾನಕ್ಕೆ ಆಕ್ರೋಶ ವ್ಯಕ್ತಪಡಿಸಿರುವ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ ವಿಜಯೇಂದ್ರ, ರಾಜ್ಯಸರ್ಕಾರ ಸಾಂಸ್ಕೃತಿಕ ಚಟುವಟಿಕೆಗಳನ್ನು ಹತ್ತಿಕ್ಕುತ್ತಿದೆ ಎಂದು ದೂರಿದ್ದಾರೆ.

ಈ ಬಗ್ಗೆ ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಟ್ವೀಟ್‌ಮಾಡಿರುವ ಅವರು, ರಾಜ್ಯದಲ್ಲಿ ಪೊಲೀಸ್ ವ್ಯವಸ್ಥೆ ಸಂಪೂರ್ಣ ದಿಕ್ಕು ತಪ್ಪುತ್ತಿದೆ. ಹಿಂದೂ ಉತ್ಸವಗಳು, ಧಾರ್ಮಿಕ ಆಚರಣೆಗಳನ್ನು ಅಪಮಾನಿಸುತ್ತಿರುವ ಪ್ರಕರಣಗಳು ಮೇಲಿನಿಂದ ಮೇಲೆ ವರದಿಯಾಗುತ್ತಿವೆ ಎಂದು ಅವರು ತಿಳಿಸಿದ್ದಾರೆ. ಗಣೇಶೋತ್ಸವದ ಸಾಂಪ್ರಾದಾಯಿಕ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಹೆಚ್ಚುವರಿ ಅವಧಿಯನ್ನು ವಿಸ್ತರಿಸಬೇಕು ಎಂದು ಕಳೆದ ವಿಧಾನಸಭಾ ಅಧಿವೇಶನದಲ್ಲಿಯೇ ಚರ್ಚೆಯಾಗಿ ಸರ್ಕಾರ ಸಮ್ಮತಿಯನ್ನೂ ವ್ಯಕ್ತಪಡಿಸಿದೆ. ಆದರೂ ಪೊಲೀಸರು ಗಣೇಶೋತ್ಸವದ ಮೇಲೆ ಕೆಂಗಣ್ಣು ಬೀರುತ್ತಿರುವುದು ಅತ್ಯಂತ ಖಂಡನೀಯ ಎಂದಿದ್ದಾರೆ.

ಹಿಂದೂ ಧಾರ್ಮಿಕ ಶ್ರದ್ಧೆ ಹಾಗೂ ನಾಡಿನ ಸಂಸ್ಕೃತಿಯನ್ನು ಅವಮಾನಿಸುವುದು ಕಾಂಗ್ರೆಸ್ ಸರ್ಕಾರದ ಒಂದು ಭಾಗವಾಗಿದೆ ಎಂದು ಅವರು ದೂರಿದ್ದಾರೆ.



# ಮನ್ ಕಿ ಬಾತ್‌ನಲ್ಲಿ ಪ್ರಧಾನಿ ಮೋದಿ ಸ್ವದೇಶಿ ಜಪ

• ಉದಯವಾಹಿನಿ, ಹೊಸದಿಲ್ಲಿ

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ತಮ್ಮ ಮಾಸಿಕ ರೇಡಿಯೊ ಕಾರ್ಯಕ್ರಮ ಮನ್ ಕಿ ಬಾತ್‌ನ 125 ನೇ ಸಂಚಿಕೆಯಲ್ಲಿ, ಮುಂಬರುವ ಹಬ್ಬದ ಋತುವಿನಲ್ಲಿ ಜನರು ಸ್ವದೇಶಿ ಉತ್ಪನ್ನಗಳಿಗೆ ಆದ್ಯತೆ ನೀಡುವಂತೆ ಕರೆ ನೀಡಿದರು. ವೋಕಲ್ ಫಾರ್ ಲೋಕಲ್ (ಸ್ಥಳೀಯ ಉತ್ಪನ್ನಗಳಿಗೆ ದನಿ), ಆತ್ಮನಿರ್ಭರ ಭಾರತ (ಸ್ವಾವಲಂಬಿ ಭಾರತ) ಮತ್ತು ಅಭಿವೃದ್ಧಿ ಹೊಂದಿದ ಭಾರತ – ಇವು ದೇಶದ ಪ್ರಗತಿಗೆ ಅತ್ಯಗತ್ಯ ಮಂತ್ರಗಳು ಮತ್ತು ಮಾರ್ಗಗಳು ಎಂದು ಅವರು ಒತ್ತಿ ಹೇಳಿದರು.

ಪ್ರಧಾನಿ ನರೇಂದ್ರ ಮೋದಿ ಅವರು 'ಮನ್ ಕಿ ಬಾತ್' ಕಾರ್ಯಕ್ರಮದಲ್ಲಿ ಮುಂಬರುವ ಹಬ್ಬಗಳಲ್ಲಿ ಸ್ವದೇಶಿ ಉತ್ಪನ್ನಗಳಿಗೆ ಆದ್ಯತೆ ನೀಡುವಂತೆ ಜನರಿಗೆ ಕರೆ ನೀಡಿದರು. 'ವೋಕಲ್ ಫಾರ್ ಲೋಕಲ್' ಮತ್ತು 'ಆತ್ಮನಿರ್ಭರ ಭಾರತ' ದೇಶದ ಪ್ರಗತಿಗೆ ಮುಖ್ಯವೆಂದು ಅವರು ಪ್ರತಿಪಾದಿಸಿದರು. ರಾಮಾಯಣ ಮತ್ತು ಭಾರತೀಯ ಸಂಸ್ಕೃತಿಯ ಮೇಲಿನ ಪ್ರೀತಿ ಜಗತ್ತಿನಾದ್ಯಂತ ಹರಡುತ್ತಿರುವುದಕ್ಕೆ ಸಂತಸ ವ್ಯಕ್ತಪಡಿಸಿದ ಅವರು, ನೈಸರ್ಗಿಕ ವಿಕೋಪಗಳಿಂದಾದ ಹಾನಿಗೆ ವಿಷಾದ ವ್ಯಕ್ತಪಡಿಸಿದರು. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಭಾರತೀಯ ಸರಕುಗಳ ಮೇಲೆ ಶೇಕಡಾ 50 ರಷ್ಟು ಸುಂಕವನ್ನು ವಿಧಿಸಿರುವುದರಿಂದ ಮೋದಿ ಅದಕ್ಕೆ ಪ್ರತಿಯಾಗಿ ಸ್ವದೇಶಿ ವಸ್ತುಗಳ ಬಳಕೆಗೆ ಆದ್ಯತೆ ನೀಡುವಂತೆ ಕರೆ ನೀಡಿದ್ದಾರೆ.

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಭಾರತೀಯ ಸರಕುಗಳ ಮೇಲೆ ಶೇಕಡಾ 50 ರಷ್ಟು ಸುಂಕವನ್ನು ವಿಧಿಸಿದ ನಂತರ ಅಮೆರಿಕದೊಂದಿಗಿನ ಸಂಬಂಧದಲ್ಲಿನ ಬಿರುಕಿನ ಮಧ್ಯೆ ದೇಶವು ಸ್ವಾವಲಂಬಿಯಾಗುವ ಅಗತ್ಯವನ್ನು ಮೋದಿ ಅವರು ತಮ್ಮ ಮನಕೀಬಾತ್‌ನಲ್ಲಿ ಪ್ರತಿಪಾದಿಸಿದ್ದಾರೆ.

1 ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ತಮ್ಮ ಮಾಸಿಕ ರೇಡಿಯೊ ಕಾರ್ಯಕ್ರಮ 'ಮನ್ ಕಿ ಬಾತ್' ನಲ್ಲಿ ಜನರಿಗೆ 'ಸ್ವದೇಶಿ' ಉತ್ಪನ್ನಗಳಿಗೆ ಆದ್ಯತೆ ನೀಡಲು ಕರೆ ನೀಡಿದರು.

2 ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಭಾರತೀಯ ಸರಕುಗಳ ಮೇಲೆ 50% ಸುಂಕವನ್ನು ವಿಧಿಸಿದ ನಂತರ, ಪ್ರಧಾನಿ ಮೋದಿ 'ಆತ್ಮನಿರ್ಭರ ಭಾರತ' ಮತ್ತು 'ವೋಕಲ್ ಫಾರ್ ಲೋಕಲ್' ಎಂಬ ಉದ್ದೇಶಗಳನ್ನು ಒತ್ತಿಸಿದರು.

3 ನೈಸರ್ಗಿಕ ವಿಕೋಪದಿಂದ ಉಂಟಾದ ಹಾನಿಯ ಬಗ್ಗೆ ಪ್ರಧಾನಿ ನೋವು ವ್ಯಕ್ತಪಡಿಸಿದ್ದು , ತುರ್ತು ಕಾರ್ಯಗಳಿಗೆ ಆಧುನಿಕ ತಂತ್ರಜ್ಞಾನಗಳನ್ನು ಬಳಸಿರುವ ಕುರಿತು ಮಾಹಿತಿ ನೀಡಿದರು.

### ನೈಸರ್ಗಿಕ ವಿಕೋಪ ಮತ್ತು ವಿಪತ್ತು ನಿರ್ವಹಣೆ

ಮಳೆಗಾಲದಲ್ಲಿ ಸಂಭವಿಸಿದ ನೈಸರ್ಗಿಕ ವಿಕೋಪಗಳಿಂದ ಉಂಟಾದ ಹಾನಿಯ ಬಗ್ಗೆ ಪ್ರಧಾನಿ ಅವರು ನೋವು ವ್ಯಕ್ತಪಡಿಸಿದರು. ಪ್ರವಾಹ ಮತ್ತು ಭೂಕುಸಿತಗಳಿಂದಾಗಿ ಅನೇಕ ಮನೆಗಳು ಮತ್ತು ಹೊಲಗಳು ನಾಶವಾಗಿವೆ, ಕುಟುಂಬಗಳು ದುಃಖಕ್ಕೀಡಾಗಿವೆ ಎಂದು ಅವರು ತಿಳಿಸಿದರು. ರಾಷ್ಟ್ರೀಯ ಮತ್ತು ರಾಜ್ಯ ತುರ್ತು ಪಡೆಗಳು ಹಗಲು-ರಾತ್ರಿ ದುಡಿದು ಜನರಿಗೆ ಸಹಾಯ ಮಾಡಿವೆ ಎಂದು ಅವರು ಹೇಳಿದರು. ರಕ್ಷಣೆ ಮತ್ತು ಪರಿಹಾರ ಕಾರ್ಯಗಳಲ್ಲಿ ಥರ್ಮಲ್ ಕ್ಯಾಮೆರಾಗಳು, ಲೈಫ್ ಡಿಟೆಕ್ಟರ್‌ಗಳು, ಸ್ನಿಫರ್ ನಾಯಿಗಳು ಮತ್ತು ಡ್ರೋನ್ ಕಣ್ಗಾವಲುಗಳಂತಹ ಆಧುನಿಕ ತಂತ್ರಜ್ಞಾನಗಳನ್ನು ಬಳಸಲಾಗಿದೆ ಎಂದು ಅವರು ವಿವರಿಸಿದರು.

### ರಾಮಾಯಣ ಮತ್ತು ಭಾರತೀಯ ಸಂಸ್ಕೃತಿ

ಮನ್ ಕಿ ಬಾತ್ ನಲ್ಲಿ, ಪ್ರಧಾನಿ ಮೋದಿ ಅವರು ರಾಮಾಯಣ ಮತ್ತು ಭಾರತೀಯ ಸಂಸ್ಕೃತಿಯ ಮೇಲಿನ ಪ್ರೀತಿ ಈಗ ಜಗತ್ತಿನ ಮೂಲೆ ಮೂಲೆಗೂ ತಲುಪುತ್ತಿದೆ ಎಂದು ಸಂತಸ ವ್ಯಕ್ತಪಡಿಸಿದರು. ಇತ್ತೀಚೆಗೆ ಕೆನಡಾದ ಮಿಸ್ಸಿಸಾಗಾದಲ್ಲಿ 51 ಅಡಿ ಎತ್ತರದ ಭಗವಾನ್ ರಾಮನ ಪ್ರತಿಮೆಯನ್ನು ಅನಾವರಣಗೊಳಿಸಿರುವುದನ್ನು ಮತ್ತು ರಷ್ಯಾದ ವ್ಲಾಡಿವೋಸ್ಟಾಕ್ ನಲ್ಲಿ ರಾಮಾಯಣದ ವಿವಿಧ ವಿಷಯಗಳ ಮೇಲೆ ರಷ್ಯಾದ ಮಕ್ಕಳು ರಚಿಸಿದ ಚಿತ್ರಗಳ ಪದರ್ಶನವನ್ನು ಅವರು ಉಲ್ಲೇಖಿಸಿದರು. ಪ್ರಪಂಚದಾದ್ಯಂತ ಭಾರತೀಯ ಸಂಸ್ಕೃತಿಯ ಕುರಿತು ಬೆಳೆಯುತ್ತಿರುವ ಜಾಗೃತಿಯನ್ನು ಕಂಡು ಹರ್ಷಗೊಂಡಿರುವುದಾಗಿ ಅವರು ತಿಳಿಸಿದರು.



**ಸ್ಥಳೀಯ ಉತ್ಪನ್ನಗಳಿಗೆ ದನಿ**

ದೇಶದ ವಿವಿಧ ಭಾಗಗಳು ಗಣೇಶ ಹಬ್ಬವನ್ನು ಆಚರಿಸುತ್ತಿರುವಾಗ ಮತ್ತು ದುರ್ಗಾ ಪೂಜೆ ಮತ್ತು ದೀಪಾವಳಿ ಸಮೀಪಿಸುತ್ತಿರುವಾಗ, ಉಡುಗೊರೆಗಳು, ಬಟ್ಟೆಗಳು, ಅಲಂಕಾರಿಕ ವಸ್ತುಗಳು ಅಥವಾ ಬೇರೆ ಯಾವುದನ್ನಾದರೂ ಖರೀದಿಸುವ ಹಬ್ಬಗಳ ಸಮಯದಲ್ಲಿ ಜನರು ಸ್ವದೇಶಿ ಉತ್ಪನ್ನಗಳನ್ನು ಎಂದಿಗೂ ಮರೆಯಬಾರದು ಎಂದು ಅವರು ಹೇಳಿದರು.

### ಇದು ಸ್ವದೇಶಿ ಎಂದು ಹೆಮ್ಮೆಯಿಂದ ಹೇಳಿ

ಈಗ ದೇಶಾದ್ಯಂತ ಗಣೇಶ ಹಬ್ಬದ ಸಂಭ್ರಮವಿದೆ. ಮುಂಬರುವ ದಿನಗಳಲ್ಲಿ ಅನೇಕ ಹಬ್ಬಗಳು ಬರಲಿವೆ. ಈ ಹಬ್ಬಗಳನ್ನು ಆಚರಿಸುವಾಗ ನೀವು ಸ್ವದೇಶೀ ಮಾತನ್ನು ಮರೆಯಲೇ ಬಾರದು. ನೀಡುವ ಉಡುಗೊರೆಗಳು ಭಾರತದಲ್ಲೇ ತಯಾರಾಗಿರಬೇಕು, ತೊಡುವ ಉಡುಗೆಗಳನ್ನು ಭಾರತದಲ್ಲೇ ನೇಯ್ದಿರಬೇಕು, ಭಾರತದಲ್ಲೇ ತಯಾರಿಸಲಾದ ಸಾಮಗ್ರಿಗಳಿಂದಲೇ ಅಲಂಕರಿಸಬೇಕು, ಭಾರತದಲ್ಲೇ ತಯಾರಿಸಿದ ದೀಪಗಳಿಂದಲೇ ಜ್ಯೋತಿ ಬೆಳಗಬೇಕು ಮತ್ತು ಹೀಗೆಯೇ ಜೀವನಕ್ಕೆ ಬೇಕಾದ ಪ್ರತಿಯೊಂದು ಅಗತ್ಯತೆಯೂ ಸ್ವದೇಶದ್ದೇ ಆಗಿರಬೇಕು. ಹೆಮ್ಮೆಯಿಂದ ಹೇಳಿ 'ಇದು ಸ್ವದೇಶದ್ದು, ಎಂದು. ಈ ಮನೋಭಾವನೆಯೊಂದಿಗೆ ನಾವು ಮುಂದೆ ಸಾಗಬೇಕು. ಒಂದೇ ಮಂತ್ರ ಅದುವೇ 'ವೋಕಲ್ ಫಾರ್ ಲೋಕಲ್', ಒಂದೇ ಹಾದಿ 'ಆತ್ಮನಿರ್ಭರ ಭಾರತ, ಒಂದೇ ಗುರಿ ಅದುವೇ 'ಅಭಿವೃದ್ಧಿ ಹೊಂದಿದ ಭಾರತ ಎಂದು ಹೇಳಿದರು.

# ಡಿಕೆಶಿ ಬಿಜೆಪಿ ಸೇರ್ಪಡೆ ಬಗ್ಗೆ ದಿಲ್ಲಿಯಲ್ಲಿ ಚರ್ಚೆಯಾಗಿತ್ತು

• ಡಿಕೆಶಿ ಸಿಎಂ, ವಿಜಯೇಂದ್ರ ಡಿಸಿಎಂ ಮಾಡಲು ಮಾತುಕತೆಯಾಗಿತ್ತು: ಬಸನಗೌಡ ಪಾಟೀಲ್ ಯತ್ನಾಳ್

**ಯತ್ನಾಳ್ ಸ್ಫೋಟಕ ಹೇಳಿಕೆ**

• ಉದಯವಾಹಿನಿ, ಬೆಂಗಳೂರು

ಹಾಲಿ ಉಪ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರು ಕೆಲವು ತಿಂಗಳುಗಳ ಹಿಂದೆ ಬಿಜೆಪಿ ಸೇರುವುದಕ್ಕೆ ತೆರೆಮರೆಯಲ್ಲಿ ಪ್ರಯತ್ನ ನಡೆಸಿದ್ದದರು ಎಂದು ಬಿಜೆಪಿಯ ಮಾಜಿ ನಾಯಕ ಹಾಗೂ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಹೇಳಿದ್ದಾರೆ. ಕೆಲವು ತಿಂಗಳುಗಳ ಹಿಂದೆಯೇ ನವದೆಹಲಿಯಲ್ಲಿ ಬಿಜೆಪಿ ಹೈಕಮಾಂಡ್ ಭೇಟಿಯಾಗಿದ್ದ ಡಿಕೆಶಿ ಆ. 31ರಂದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಡಿಕೆಶಿಯವರು ಈಗಾಗಲೇ ಒಂದು ಕಾಲು ಕಾಂಗ್ರೆಸ್ಸಿನಲ್ಲಿ ಮತ್ತೊಂದು ಕಾಲು ಬಿಜೆಪಿಯಲ್ಲಿ ಇಟ್ಟಿದ್ದಾರೆ. ಈಗಾಗಲೇ ಕೆಲವು ತಿಂಗಳುಗಳ ಹಿಂದೆ, ಅವರು ದೆಹಲಿಯಲ್ಲಿ ಬಿಜೆಪಿ ಹೈಕಮಾಂಡ್ ಜೊತೆಗೆ ಮಾತುಕತೆ ನಡೆಸಿದ್ದರು. ಆಗಲೇ ಅವರು ತಮ್ಮ ಬೆಂಬಲಿಗರೊಂದಿಗೆ ಬಿಜೆಪಿ ಸೇರುವ ಬಗ್ಗೆ ಚರ್ಚಿಸಿದ್ದರು. ತಾವು ಬಿಜೆಪಿಗೆ ಬಂದರೆ ತಮ್ಮೊಂದಿಗೆ 60-70 ಶಾಸಕರನ್ನು ಕರೆತರುವುದಾಗಿ ಅವರು ಬಿಜೆಪಿಗೆ ಹೇಳಿದ್ದರು ಎಂದು ಯತ್ನಾಳ್ ತಿಳಿಸಿದ್ದಾರೆ.

- ಕೆಲವು ತಿಂಗಳುಗಳ ಹಿಂದೆಯೇ ಉಪ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಬಿಜೆಪಿಗೆ ಸೇರಲು ಯತ್ನ.
- ದೆಹಲಿಯಲ್ಲಿ ಬಿಜೆಪಿ ಹೈಕಮಾಂಡ್ ನಾಯಕರನ್ನು ಭೇಟಿ ಮಾಡಿದ್ದರು ಡಿಕೆಶಿ - ಯತ್ನಾಳ್ ಸ್ಫೋಟಕ ಹೇಳಿಕೆ.
- ಆನಂತರ ಎಲ್ಲವೂ ಠುಸ್ ಪಟಾಕಿ ಆಯ್ತು ಎಂದ ಯತ್ನಾಳ್.

ಆದರೆ, ಡಿಕೆಶಿಯವರ ಹಿಂದೆ 60-70 ಶಾಸಕರು ಇರಲಿಲ್ಲ. ಅವರ ಹಿಂದಿದ್ದಿದ್ದು ಬರೀ 10-13 ಶಾಸಕರಷ್ಟೇ. ಇದು ಆನಂತರ ಬಿಜೆಪಿಯವರಿಗೆ ಗೊತ್ತಾಯ್ತು. ನಾನು ದೆಹಲಿಯಲ್ಲಿದ್ದಾಗ, ಬಿಜೆಪಿಯ ಹಿರಿಯರೊಬ್ಬರು ನನ್ನನ್ನು ಕೇಳಿದ್ದರು. ಡಿಕೆಶಿಯವರು ಹಿಂದೆ ಅಸಲಿಗೆ ಎಷ್ಟು ಜನ ಕಾಂಗ್ರೆಸ್ ಶಾಸಕರಿದ್ದಾರೆ ಎಂದು ಕೇಳಿದ್ದರು. ಅದಕ್ಕೆ ನಾನು ಸುಮಾರು 10-12 ಶಾಸಕರು ಎಂದು ಹೇಳಿದ್ದೆ. ಆಗ ಅವರು, ನೀವು ಹೇಳಿದ್ದೀರೆಂದರೆ ಅದು ಸರಿಯಾಗೇ ಇರುತ್ತೆ ಎಂದು ಅವರು ಹೇಳಿದರು ಎಂದು ಯತ್ನಾಳ್ ವಿವರಿಸಿದರು. ಅಷ್ಟೇ ಅಲ್ಲ, ನವದೆಹಲಿಯಲ್ಲಿ ನಡೆದ ಮಾತುಕತೆ ವೇಳೆ, ಡಿಕೆಶಿಯವರು 60-70 ಶಾಸಕರನ್ನು ತಮ್ಮೊಂದಿಗೆ ಕರೆತಂದರೆ, ಬಿಜೆಪಿ ಅಧಿಕಾರಕ್ಕೆ ಬಂದರೆ ಡಿಕೆಶಿಯವರು ಸಿಎಂ ಆಗಬೇಕು, ನಮ್ಮ ಮಹಾಮಹಿಮರಾದ ಬಿಜೆಪಿ ರಾಜ್ಯಾಧ್ಯಕ್ಷರಾದ ಬಿ.ವೈ. ವಿಜಯೇಂದ್ರ ಅವರು ಉಪ ಮುಖ್ಯಮಂತ್ರಿಯಾಗಬೇಕು ಎಂಬುದು ತೀರ್ಮಾನವಾಗಿತ್ತು ಎಂದು ತಿಳಿಸಿದರು. ಡಿಕೆ ಶಿವಕುಮಾರ್ ಅಪ್ಪಟ ಹಿಂದೂ ಮನಸ್ಥಿತಿ - ದಿನೇಶ್ ಗುಂಡೂರಾವ್ ಡಿಕೆಶಿಯವರು ಹಿಂದೂ ವಿರೋಧಿ ಎಂದು ಹೇಳಿರುವ



### ಡಿಕೆಶಿ ಧ್ಯೇಯಗೀತೆಗೆ ವಿರೋಧ

ಇತ್ತೀಚೆಗೆ, ರಾಜ್ಯ ವಿಧಾನಸಭೆಯಲ್ಲಿ ಡಿಕೆ ಶಿವಕುಮಾರ್ ಅವರು ಆರ್ ಎಸ್‌ಎಸ್ ಧೇಯ ಗೀತೆಯನ್ನು ಹಾಡಿದ್ದು ಭಾರೀ ಚರ್ಚೆಗೆ ಕಾರಣವಾಗಿತ್ತು. ಕಾಂಗ್ರೆಸ್ ಸಚಿವರು ಈ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರೆ, ಬಿಜೆಪಿ ನಾಯಕರು ಡಿಕೆಶಿಯವರು ಹಾಡು ಹಾಡಿದ್ದನ್ನು ಸ್ವಾಗತಿಸಿದ್ದರು. ಇದೇ ವೇಳೆ, ಕಾಂಗ್ರೆಸ್ಸಿನಲ್ಲೇ ಇರುವ ಡಿಕೆಶಿಯವರ ವಿರೋಧಿ ಬಣವು ಅವರು ಈ ಕೂಡಲೇ ಕ್ಷಮೆ ಕೇಳಬೇಕೆಂದು ಒತ್ತಡ ಹಾಕಿದ್ದರು.

ಬಿಜೆಪಿ ನಾಯಕರ ವಿರುದ್ಧ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರು ಕಿಡಿಕಾರಿದ್ದರು. ಡಿಕೆಶಿ ಓರ್ವ ಹಿಂದೂ ಎಂದು ಹೇಳಿದ್ದಾರೆ. ಅಲ್ಲದೆ, ದಸರಾ ಉದ್ಘಾಟನೆಗೆ ಸಂಬಂಧಪಟ್ಟಂತೆ ಬಿಜೆಪಿಯವರು ಕೋಮು ರಾಜಕಾರಣ ಮಾಡಿ ಅನಗತ್ಯ ವಿವಾದ ಸೃಷ್ಟಿಸಿದ್ದಾರೆ ಎಂದು ಹೇಳಿದ್ದರು. ಬಾನು ಮುಷ್ತಾಕ್ ಅವರು ದಸರಾ ಉದ್ಘಾಟನೆಗೆ ಕರೆದಿದ್ದಕ್ಕೆ ಬಿಜೆಪಿಯವರು ಅನಗತ್ಯವಾಗಿ ವಿವಾದ ಸೃಷ್ಟಿಸಿದ್ದಾರೆ ಎಂದು ತಿಳಿಸಿದ್ದಾರೆ.

**ಈ ದಿನದ ದರ** ಪೆಟ್ರೋಲ್: 103.50 ₹/L | ಡೀಸೆಲ್ : 90.03 ₹/L | ಬಂಗಾರ: ₹10,495 /Gram(24ct) ₹9,620/Gram(22ct) | ಬೆಳ್ಳಿ: ₹125.00/Gram

# ರಾಜಣ್ಣ ಸಚಿವ ಸಂಪುಟದಿಂದ ಕೈ ಬಿಟ್ಟಿರುವುದನ್ನು ವಿರೋಧಿಸಿ ವಿವಿಧ ಸಂಘಟನೆಗಳು ಪ್ರತಿಭಟನೆ

• ಉದಯವಾಹಿನಿ ಗೌರಿಬಿದನೂರು

ಕೆ.ಎನ್.ರಾಜಣ್ಣ ಅವರನ್ನು ಸಚಿವ ಸಂಪುಟದಿಂದ ವಜಾ ಮಾಡಿರುವುದನ್ನು ಖಂಡಿಸಿ, ಅವರನ್ನು ಸಂಪುಟಕ್ಕೆ ಮರುಸೇರ್ಪಡೆ ಮಾಡುವಂತೆ ಒತ್ತಾಯಿಸಿ ದಲಿತ ಪರ ಸಂಘಟನೆ, ವಾಲ್ಮೀಕಿ ಸಮುದಾಯ, ಮಹಿಳಾ ಸಂಘಟನೆ, ಹಿಂದುಳಿದ ವರ್ಗಗಳ ಸಂಘಟನೆ, ಕೆ.ಎನ್.ರಾಜಣ್ಣ ಅಭಿಮಾನಿಗಳ ಬಳಗದಿಂದ ಪ್ರತಿಭಟನೆ ನಡೆಯಿತು.ಡಾ.ಬಿ.ಆರ್.ಅಂಬೇಡ್ಕರ್ ವೃತ್ತದಿಂದ ವಾಲ್ಮೀಕಿ ವೃತ್ತ ಮಾರ್ಗವಾಗಿ ತಹಶೀಲ್ದಾರ್ ಕಚೇರಿವರೆಗೆ ಮೆರವಣಿಗೆ ನಡೆಸಲಾಯಿತು.

ವಾಲ್ಮೀಕಿ ಸಮುದಾಯದ ಮುಖಂಡ ಆರ್.ಅಶೋಕ್ ಮಾತನಾಡಿ, 'ಹಿಂದುಳಿದ ವರ್ಗಕ್ಕೆ ಸೇರಿದ ಮತ್ತು ನಿಷ್ಠೂರವಾದಿ ರಾಜಣ್ಣ


ಉದಯವಾಹಿನಿ ಚಿತ್ರ

ಅವರನ್ನು ಕೆಲವರು ರಾಜಕೀಯ ಕುತಂತ್ರದಿಂದ ತುಳಿಯುತ್ತಿದ್ದಾರೆ. ಸಚಿವ ಸಂಪುಟದಿಂದ ರಾಜಣ್ಣ ಅವರನ್ನು ಕೈಬಿಟ್ಟಿರುವುದು ದಲಿತ ಸಮುದಾಯಕ್ಕೆ ನೋವನ್ನು ಉಂಟುಮಾಡಿದೆ. ಮತ್ತೆ ಅವರನ್ನು ಸಚಿವ ಸಂಪುಟಕ್ಕೆ ಸೇರ್ಪಡೆ ಮಾಡಿಕೊಳ್ಳಬೇಕು. ಇಲ್ಲವಾದಲ್ಲಿ ಮುಂದಿನ ದಿನಗಳಲ್ಲಿ ಸರ್ಕಾರಕ್ಕೆ ತಕ್ಕಪಾಠ ಕಲಿಸಲಾಗುವುದು' ಎಂದು ಎಚ್ಚರಿಕೆ ನೀಡಿದರು.

ಬಾಲಕುಂಟಹಳ್ಳಿ ಗಂಗಾಧರ್ ಮಾತನಾಡಿ, ಸರ್ಕಾರ ನಡೆಸುವವರಿಗೆ ಎಸ್‌ಸಿ. ಎಸ್‌ಟಿ ಜನರ ಮತ ಮಾತ್ರ ಬೇಕಾಗಿವೆ. ಅಧಿಕಾರ ಮಾತ್ರ ಬೇರೆಯವರಿಗೆ ಬೇಕಾಗಿದೆ. ಇಂಥ ಪರಿಸ್ಥಿತಿ ರಾಜ್ಯದಲ್ಲಿ ನಡೆಯುತ್ತಿದೆ. ಸಿದ್ದರಾಮಯ್ಯ ಹಿಂದುಳಿದ ಮತ್ತು ಸಮಾಜವಾದಿ ನಾಯಕನೆಂದು ಹೆಸರು ಪಡೆದಿದ್ದಾರೆ. ಅವರ ಬೆಂಬಲಕ್ಕೆ ನಿಲ್ಲುವ ದಲಿತ ನಾಯಕರನ್ನು ಷಡ್ಯಂತ್ರ ಮಾಡಿ ಮಟ್ಟಹಾಕುವ ಪರಿಸ್ಥಿತಿ ಆಗುತ್ತಿದೆ. ರಾಜಣ್ಣ ಅವರನ್ನು ಮತ್ತೆ ಸಚಿವ ಸಂಪುಟಕ್ಕೆ ಸೇರ್ಪಡೆ ಮಾಡಿಕೊಳ್ಳಬೇಕು ಎಂದು ಒತ್ತಾಯಿಸಿದರು.

ವಕೀಲ ಎಚ್‌ಎಲ್ ವೆಂಕಟೇಶ್ ಮಾತನಾಡಿ, 'ದಲಿತರನ್ನ ಸುಟ್ಟ ಬೆಂಕಿ, ದೇಶವನ್ನೇ ಸುಡುತ್ತದೆ, ಎಂದು ಅಂಬೇಡ್ಕರ್ ಹೇಳಿದ್ದಾರೆ. ದಲಿತ ವರ್ಗಕ್ಕೆ ಸೇರಿದ ರಾಜಣ್ಣ ಅವರನ್ನು ಸಚಿವ ಸಂಪುಟದಿಂದ ತೆಗೆದು ಹಾಕಿರುವುದು, ಕರ್ನಾಟಕದಲ್ಲಿ ಮುಂದಿನ ದಿನಗಳಲ್ಲಿ ಬೆಂಕಿಯಾಗಿ ಉರಿಯುತ್ತದೆ. ಈ ಹೋರಾಟದಲ್ಲಿ ಜಾತಿ ರಹಿತವಾಗಿ ಎಲ್ಲರೂ ಭಾಗವಹಿಸಿದ್ದಾರೆ. ಇನ್ನು ಮುಂದೆ ದಲಿತ ವಿರೋಧಿ ಪಿತೂರಿಗಳು ನಡೆದರೆ ಸುಮ್ಮನೆ ಇರುವುದಿಲ್ಲ' ಎಂದರು.

# ಬಾನು ಮುಷ್ತಾಕ್ ಆಯ್ಕೆ ಬಗ್ಗೆ ಸಿಎಂ ಸಮರ್ಥನೆ


## ಬಾನು ಮುಷ್ತಾಕ್ ಅವರಿಂದ ದಸರಾ ಉದ್ಘಾಟಿಸಬಾರದೆಂದು ಸಿಡಿದೆದ್ದಿರುವ ಬಿಜೆಪಿ

• ಉದಯವಾಹಿನಿ ಮೈಸೂರು

ಮೈಸೂರು ದಸರಾ ಹಬ್ಬವು ನಾಡಹಬ್ಬವನ್ನಾಗಿ ಆಚರಿಸಲಾಗುತ್ತದೆ. ನಾಡ ಹಬ್ಬದಲ್ಲಿ ಜಾತಿ- ಮತಗಳ ಭೇದವಿಲ್ಲದೆ ಎಲ್ಲರೂ ಆಚರಿಸುತ್ತಾರೆ. ಹಾಗಾಗಿ, ಆ ಹಬ್ಬಕ್ಕೆ ಜಾತಿ, ಮತದ ಬಣ್ಣ ಹಚ್ಚುವುದು ಸರಿಯಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ. ಮೈಸೂರಿನಲ್ಲಿ ಆ. 31ರಂದು ಸುದ್ದಿಗಾರರೊದಿಗೆ ಮಾತನಾಡಿದ ಅವರು ಈ ರೀತಿಯಾಗಿ ಹೇಳಿದರು.

ಹಿರಿಯ ಲೇಖಕಿ, ಬೂಕರ್ ಪ್ರಶಸ್ತಿ ವಿಜೇತೆಯಾದ ಬಾನು ಮುಷ್ತಾಕ್ ಅವರು ಹಿಂದೂಯೇತರ ವ್ಯಕ್ತಿಯಾಗಿರುವುದರಿಂದ ದಸರಾ ಉದ್ಘಾಟನೆ ಮಾಡಿಸಬಾರದು ಎಂದು ಪ್ರತಿಪಕ್ಷವಾದ ಬಿಜೆಪಿ ಪಟ್ಟು ಹಿಡಿದಿದೆ. ವಿಧಾನಸಭೆಯ ವಿಪಕ್ಷಗಳ ನಾಯಕರಾದ ಆರ್. ಅಶೋಕ್, ಬಾನು ಮುಷ್ತಾಕ್ ಅವರು ಗೋ ಮಾಂಸ ತಿನ್ನುತ್ತಾರೆ, ಅಂಥವರು ದಸರಾದಲ್ಲಿ ಹೇಗೆ ಗೋವುಗಳ ಪೂಜೆ ಮಾಡುತ್ತಾರೆ ಎಂದು ಪ್ರಶ್ನಿಸಿದ್ದಾರೆ. ಇದರ ನಡುವೆಯೇ ಸಿಎಂ ಅವರಿಂದ ಈ ಸ್ಪಷ್ಟನೆ ಹೊರಬಿದ್ದಿದೆ.

**ಟ್ವಿಟರ್‌ನಲ್ಲಿ ವಾಗ್ದಾಳಿ:** ಮೈಸೂರು ದಸರಾ ಉದ್ಘಾಟಕರ ಆಯ್ಕೆಗೆ ಸಂಬಂಧಿಸಿದಂತೆ ಉನ್ನತ ಮಟ್ಟದ ಸಮಿತಿಯಲ್ಲಿ ನನಗೆ ಅಧಿಕಾರ ನೀಡಲಾಗಿತ್ತು. ಬೂಕರ್ ಪ್ರಶಸ್ತಿ ವಿಜೇತರಾದ ಬಾನು ಮುಷ್ತಾಕ್ ಅವರಿಗೆ ದಸರಾ ಉದ್ಘಾಟನೆಗೆ ಅವಕಾಶ ನೀಡಬೇಕೆಂದು ತೀರ್ಮಾನಿಸಲಾಯಿತು. ಹಿಂದೆಯೂ ಕವಿ ನಿಸಾರ್ ಅಹಮದ್ ಅವರು ದಸರಾ ಉದ್ಘಾಟಿಸಿದ್ದಾರೆ. ದಸರಾ ನಾಡ ಹಬ್ಬ, ಸಾಂಸ್ಕೃತಿಕ ಆಚರಣೆಯಾಗಿದೆ. ನಾಡ ಹಬ್ಬವನ್ನು ಇಂಥ ಧರ್ಮದವರೇ ಉದ್ಘಾಟಿಸಬೇಕೆಂದು ಇಲ್ಲ. ನಾಡ ಹಬ್ಬ ಎಲ್ಲರಿಗೂ ಹಬ್ಬವೇ. ಹಿಂದೂ, ಕ್ರಿಶ್ಚಿಯನ್, ಬೌದ್ಧ, ಜೈನರಿಗೂ ಇದು ಹಬ್ಬ. ಮಹಾರಾಜರ ಆಡಳಿತ ಇಲ್ಲದಿರುವಾಗ ಹೈದರಾಲಿ, ಟಿಪ್ಪು ಸುಲ್ತಾನ್ ಕೂಡ ದಸರಾ ಆಚರಿಸುತ್ತಿದ್ದರು. ದಿವಾನರಾಗಿದ್ದ ಮಿರ್ಜಾ ಇಸ್ಮಾಯಿಲ್ ಅವರು ದಸರಾ ಆಚರಿಸಿದ್ದಾರೆ. ಇದೊಂದು ಧರ್ಮಾತೀತ, ಜಾತ್ಯಾತೀತ ಹಬ್ಬ. ಕರ್ನಾಟಕದಲ್ಲಿ ಬೂಕರ್ ಪ್ರಶಸ್ತಿ ಪಡೆದ ಸಾಹಿತಿಗಳು ಬಹಳ ಕಡಿಮೆ. ಬಾನು ಮುಷ್ತಾಕ್ ಅವರನ್ನು ದಸರಾ ಉದ್ಘಾಟಕರಾಗಿ ಆಯ್ಕೆ ಮಾಡಿರುವ ಬಗ್ಗೆ ಧರ್ಮಾಂಧರು ಮಾತ್ರ ಮಾತನಾಡುತ್ತಾರೆ. ಅವರಿಗೆ ಇತಿಹಾಸ ತಿಳಿದಿಲ್ಲ, ಇತಿಹಾಸವನ್ನು ತಿಳಿದುಕೊಳ್ಳುವುದು ಒಳ್ಳೆಯದು.



ಬಿಜೆಪಿಯವರು ರಾಜಕೀಯವಾಗಿ ಮಾತನಾಡುತ್ತಾರೆಯೇ ಹೊರತಾಗಿ ಜಾತ್ಯಾತೀತವಾಗಿ ಮಾತನಾಡುವುದಿಲ್ಲ.

ಬಾನು ಮುಷ್ತಾಕ್ ಅವರಿಗೆ ಕನ್ನಡ ತಾಯಿಯ ಬಗ್ಗೆ ಗೌರವ, ಅಭಿಮಾನ, ಪ್ರೀತಿ ಇಲ್ಲದೆ ಇದ್ದರೆ ಕನ್ನಡದಲ್ಲಿ ಬರೆಯುತ್ತಾರೆಯೇ ಬಿಜೆಪಿಯವರು ಕುಂಟು ನೆಪವನ್ನು ಹುಡುಕುತ್ತಿದ್ದಾರೆ. ಎದೆಯ ಹಣತೆ' ಕೃತಿಯನ್ನು ಭಾಷಾಂತರ ಮಾಡಿದ ದೀಪಾ ಭಾಸ್ತಿಯವರನ್ನೂ ನಾವು ಮರೆತಿಲ್ಲ. ಸರ್ಕಾರ ಈಗಾಗಲೇ ದೀಪಾ ಭಾಸ್ತಿ ಹಾಗೂ ಬಾನು ಮುಷ್ತಾಕ್ ಅವರಿಗೆ ತಲಾ ಹತ್ತು ಲಕ್ಷ ರೂ.ಗಳನ್ನು ನೀಡಿ, ಸನ್ಮಾನಿಸಿ, ಗೌರವಿಸಿದ್ದೇವೆ.

ನಾಡಹಬ್ಬ ಧರ್ಮಾತೀತ ಹಬ್ಬ

ನಾಡಹಬ್ಬ ದಸರಾ ಸಿದ್ಧತೆ ಕುರಿತಂತೆ ನಾವು ಸಮಿತಿಯನ್ನು ರಚಿಸಿದ್ದೆವು. ಯಾರಿಂದ ದಸರಾ ಉದ್ಘಾಟಿಸಬೇಕು ಎಂಬುದನ್ನು ಸಮಿತಿಯ ವಿವೇಚನೆಗೆ ಬಿಟ್ಟಿದ್ದೆವು. ಅವರು, ಕನ್ನಡಕ್ಕೆ ಬೂಕರ್ ಪ್ರಶಸ್ತಿ ಮೂಲಕ ಅಂತಾರಾಷ್ಟ್ರೀಯ ಮನ್ನಣೆ ತಂದ ಬಾನು ಮುಷ್ತಾಕ್ ಅವರನ್ನು ಈ ಬಾರಿಯ ದಸರಾ ಉದ್ಘಾಟಕರಾಗಿ ಆಯ್ಕೆ ಮಾಡಿದ್ದಾರೆ. ಅವರ ಆಯ್ಕೆಯನ್ನು ಸರ್ಕಾರವೂ ಒಪ್ಪಿದೆ. ಜಾತಿ, ಮತ ಭೇದವಿಲ್ಲದೆ ನಾಡಹಬ್ಬವನ್ನು ಆಚರಿಸುವಾಗ ನಾವು ಅದರ ಉದ್ಘಾಟಕರ ವಿಚಾರವನ್ನು ಸಹ ಜಾತ್ಯಾತೀತವಾಗಿ ಆಲೋಚಿಸಬೇಕು. ಕೇವಲ ಹಿಂದು, ಮುಸ್ಲಿಂ ಮಾತ್ರವಲ್ಲ ಜೈನರು, ಸಿಖ್ಖರು, ಕ್ರೈಸ್ತರು ಹೀಗೆ ಯಾರು ಬೇಕಾದರೂ ದಸರಾ ಉದ್ಘಾಟಿಸಬಹುದು ಎಂದು ಹೇಳಿದರು.

## ಈರುಳ್ಳಿ ಖರೀದಿಸಿ ರೈತರಿಗೆ ಮೋಸ ಮಾಡಿದ್ದ ಕಂಪನಿ

• ಉದಯವಾಹಿನಿ, ಚಿಕ್ಕಬಳ್ಳಾಪುರ

ರೈತರಿಂದ ಗುಲಾಬಿ ಈರುಳ್ಳಿ ಖರೀದಿಸಿ ಹಣ ನೀಡದ ಕಂಪನಿಗೆ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ ದಂಡ ವಿಧಿಸಿದೆ. ರೈತರಿಗೆ ಬರಬೇಕಾದ ಹಣವನ್ನೂ ದೊರಕಿಸಿಕೊಟ್ಟಿದೆ.

ಶಿಡ್ಲಘಟ್ಟ ತಾಲ್ಲೂಕು ಸಾದಲಿ ಹೋಬಳಿ ಗಂಡಲ್ ಚಿಟ್ಟೆ ಗ್ರಾಮದ ಸೀತಾರಾಮಪ್ಪ ಹಾಗೂ ಇತರ 15 ರೈತರು ರೈತ ಉತ್ಪಾದಕರ ಸಂಸ್ಥೆ ರಚಿಸಿದ್ದರು. ಬಿ.ಎಸ್.ಅಲುಮ್ ಸಿಇಪಿಎ ರಫ್ತು ಕಂಪನಿ ಜೊತೆ ಗುಲಾಬಿ ಈರುಳ್ಳಿ ಬೆಳೆಯಲು ನಿಗದಿತ ದರದಲ್ಲಿ ಒಪ್ಪಂದ ಮಾಡಿಕೊಂಡಿದ್ದರು.



ರೈತ ಉತ್ಪಾದಕರ ಸಂಸ್ಥೆ ಸದಸ್ಯರು ಬೆಳೆದ ಗುಲಾಬಿ ಈರುಳ್ಳಿಯನ್ನು ಕಂಪನಿ ಖರೀದಿಸಿತ್ತು. ಅರ್ಧದಷ್ಟು ಹಣ ನೀಡಿ ಉಳಿಕೆ ಹಣ ನೀಡಿರಲಿಲ್ಲ. ಈ ಬಗ್ಗೆ ರೈತರು ಚಿಕ್ಕಬಳ್ಳಾಪುರ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗಕ್ಕೆ ದೂರು ಸಲ್ಲಿಸಿದ್ದರು.

ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷ ಕುಮಾರ್ ಎನ್. ಮತ್ತು ಸದಸ್ಯ ಎಚ್.ಜನಾರ್ದನ್ ದೂರುಗಳನ್ನು ಪರಿಶೀಲಿಸಿ ರಫ್ತು ಕಂಪನಿಗೆ ನೋಟಿಸ್ ಜಾರಿಗೊಳಿಸಿ ವಿಚಾರಣೆ ನಡೆಸಿದ್ದರು.

## ಮಿನಿ ನ್ಯೂಸ್

### ವಿಜ್ಞಾನ ಕೇಂದ್ರ ಕೃಷಿ ಸಖಿಯರಿಗೆ ನೈಸರ್ಗಿಕ ಕೃಷಿ ತರಬೇತಿ

• ಉದಯವಾಹಿನಿ, ಮಾಗಡಿ

ತಾಲ್ಲೂಕಿನ ಚಂದೂರಾಯನಹಳ್ಳಿ ಕೃಷಿ ವಿಜ್ಞಾನ ಕೇಂದ್ರ, ಕೃಷಿ ವಿಶ್ವವಿದ್ಯಾನಿಲಯ ಬೆಂಗಳೂರು ಮತ್ತು ಕೃಷಿ ಇಲಾಖೆ ಸಹಯೋಗದಲ್ಲಿ ಕೃಷಿ ಸಖಿಯರಿಗೆ ಒಂದು ದಿನದ ನೈಸರ್ಗಿಕ ಕೃಷಿ ತರಬೇತಿ ಕಾರ್ಯಕ್ರಮ ನಡೆಯಿತು.ಇತ್ತೀಚಿನ ದಿನಗಳಲ್ಲಿ ಕೃಷಿ ಚಟುವಟಿಕೆಗಳಲ್ಲಿ ಹೆಚ್ಚು ರಾಸಾಯನಿಕ ಗೊಬ್ಬರವನ್ನು ಬಳಸಲಾಗುತ್ತಿದೆ. ಹಾಗಾಗಿ ನೈಸರ್ಗಿಕ ಕೃಷಿಯನ್ನು ಮುಖ್ಯವಾಹಿನಿಗೆ ತರಬೇಕೆಂಬ ಉದ್ದೇಶದಿಂದ ಈ ತರಬೇತಿಯನ್ನು ಆಯೋಜಿಸಲಾಗಿದೆ. ಇದನ್ನು ಸದುಪಯೋಗ ಪಡಿಸಿಕೊಳ್ಳಬೇಕೆಂದು ವಿಜ್ಞಾನಿ ಡಾ.ಬಿ.ಎಸ್.ಶ್ವೇತ ತಿಳಿಸಿದರು. ಮಣ್ಣು ವಿಜ್ಞಾನದ ವಿಜ್ಞಾನಿ ಡಿ.ಸಿ.ಪ್ರೀತು ಮಾತನಾಡಿ, ತರಬೇತಿಯಲ್ಲಿ ಕೃಷಿ ಸಖಿಯರಿಗೆ ನೈಸರ್ಗಿಕ ಕೃಷಿ ಮಹತ್ವ, ತತ್ವಗಳು, ಮಣ್ಣಿನ ಮಹತ್ವ, ಮಣ್ಣಿನ ಪೋಷಕಾಂಶಗಳ ನಿರ್ವಹಣೆಗಾಗಿ ಜೀವಾಮೃತ ಬಳಕೆ, ಹೊದಿಕೆಯ ಮಹತ್ವ, ಜೈವಿಕಗೊಬ್ಬರಗಳ ಬಳಕೆ, ನಿರ್ವಹಣೆ, ಸಮಗ್ರ ಕೀಟ ಮತ್ತು ರೋಗಗಳ ನಿರ್ವಹಣೆ, ನೀರಿನ ನಿರ್ವಹಣೆ, ಸಮಗ್ರ ಕೃಷಿ ಪದ್ಧತಿ, ಬೀಜ ಮತ್ತು ಸಸಿಗಳ ನಿರ್ವಹಣೆ ಮುಂತಾದವುಗಳ ಕುರಿತು ತಿಳಿಸಿದರು. ವಿಜ್ಞಾನಿ ಡಾ.ಎಂ.ಪ್ರಮೋದ್ ಮಾತನಾಡಿ, ನೈಸರ್ಗಿಕ ಕೃಷಿಯಲ್ಲಿ ಬಳಕೆ ಮಾಡುವ ಜೀವಾಮೃತ, ಘನಜೀವಾಮೃತ, ಬೀಜಾಮೃತ, ನೀಮಾಸ್ತ್ರ, ಅಗ್ನಿ ಅಸ್ತ್ರ, ಸಸ್ಯಸಂರಕ್ಷಣೆಗಾಗಿ ವಿವಿಧ ರೀತಿಯ ಮೋಹಕ ಬಲೆಗಳ ಬಳಕೆ ಮತ್ತು ದಶಪರ್ಣಿ ಕಷಾಯಗಳ ತಯಾರಿಕೆಯ ಪದ್ಧತಿ ಪ್ರಾತ್ಯಕ್ಷಿಕೆಗಳನ್ನು ನೀಡಲಾಯಿತು.

### ಕೆಎಸ್‌ಆರ್‌ಟಿಸಿ ಬಸ್‌ವೊಂದು ದ್ವಿಚಕ್ರ ವಾಹನಕ್ಕೆ ಡಿಕ್ಕಿ

• ಉದಯವಾಹಿನಿ ಚಿಂತಾಮಣಿ

ಚಿಂತಾಮಣಿ-ಬೆಂಗಳೂರು ಮಾರ್ಗದ ರಸ್ತೆಯ ವೈಜಕೂರು ಬಳಿ ರಾತ್ರಿ ಕೆಎಸ್‌ಆರ್‌ಟಿಸಿ ಬಸ್‌ವೊಂದು ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆದು. ಬೈಕ್‌ನಲ್ಲಿ ಸವಾರಿ ಮಾಡುತ್ತಿದ್ದ ಹಿಂಬದಿ ಸವಾರ ಮೃತಪಟ್ಟಿದ್ದಾನೆ. ಗಂಭೀರವಾಗಿ ಗಾಯಗೊಂಡಿರುವ ಬೈಕ್ ಸವಾರ ಬೆಂಗಳೂರಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ.ಬೆಂಗಳೂರಿನ ಮಹಾಲಕ್ಷ್ಮಿ ಲೇಔಟ್‌ನ ಕೊಲಂಬಸ್ (25) ಮೃತಪಟ್ಟ ಯುವಕ.

ಈ ಅಪಘಾತದಲ್ಲಿ ಬೈಕ್ ಸವಾರ ಬೈಕ್ ಸವಾರ ಮಾಗಡಿ ಸಮೀಪದ ತಾವರೆಕೆರೆ ಭರತೇಶ್‌ಗೆ ಕೈ, ಕಾಲು ಮುರಿದಿದ್ದು, ತೀವ್ರವಾಗಿ ಗಾಯಗೊಂಡಿದ್ದಾನೆ. ಆತನಿಗೆ ಮೊದಲಿಗೆ ಸ್ಥಳೀಯ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ, ಬಳಿಕ ಬೆಂಗಳೂರಿನ ಆಸ್ಪತ್ರೆಗೆ ಕಳುಹಿಸಲಾಯಿತು. ಚಿಂತಾಮಣಿಯಿಂದ ಬೆಂಗಳೂರಿಗೆ ತೆರಳುತ್ತಿದ್ದ ಸರ್ಕಾರಿ ಬಸ್, ಬೆಂಗಳೂರು ಕಡೆಯಿಂದ ಚಿಂತಾಮಣಿಗೆ ಬರುತ್ತಿದ್ದ ಬೈಕ್‌ಗೆ ಡಿಕ್ಕಿ ಹೊಡೆದಿದೆ. ಕೊಲಂಬಸ್ ಸ್ಥಳದಲ್ಲೇ ಮೃತಪಟ್ಟಿದ್ದಾನೆ. ಅಪಘಾತ ಸಂಭವಿಸುತ್ತಿದ್ದಂತೆ ಚಾಲಕ ಬಸ್ ಬಿಟ್ಟು ಪರಾರಿಯಾಗಿದ್ದಾನೆ. ಬೈಕ್ ಸಂಪೂರ್ಣ ಜಖಂಗೊಂಡಿದೆ.

ಬಸ್ ಚಾಲಕನ ಅತಿಯಾದ ವೇಗ ಮತ್ತು ಅಜಾಗರೂಕತೆಯೇ ಅಪಘಾತಕ್ಕೆ ಕಾರಣವೆಂದು ತಿಳಿದುಬಂದಿದೆ. ವಿಷಯ ತಿಳಿದು ಸ್ಥಳಕ್ಕೆ ಬಂದ ಪೊಲೀಸರು, ಸ್ಥಳ ಪರಿಶೀಲನೆ ನಡೆಸಿದರು.

### ದೇಶದಲ್ಲಿ 70 ಲಕ್ಷ ಮಾದಕ ವ್ಯಸನಿಗಳು: ನವೀನ್ ರಾಜ್ ಸಿಂಗ್

• ಉದಯವಾಹಿನಿ ತುಮಕೂರು

ದೇಶದಲ್ಲಿ ಪ್ರಸ್ತುತ ಶೇ 20ರಷ್ಟು ಯುವ ಸಮೂಹ ಮಾದಕ ವಸ್ತು ವ್ಯಸನಕ್ಕೆ ಒಳಗಾಗಿದೆ. ಇದರಿಂದ ಹೊರ ಬರಲು 70 ಲಕ್ಷ ಯುವ ಜನರು ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಯುವ ಸಬಲೀಕರಣ ಕ್ರೀಡಾ ಇಲಾಖೆ ಪ್ರಧಾನ ಕಾರ್ಯದರ್ಶಿ ನವೀನ್‌ರಾಜ್ ಸಿಂಗ್ ಹೇಳಿದರು. ಯುವ ಸಬಲೀಕರಣ, ಕ್ರೀಡಾ ಇಲಾಖೆ, ಪ್ರವಾಸೋದ್ಯಮ ಪೊಲೀಸ್ ಇಲಾಖೆ, ಎನ್‌ಎಸ್‌ಎಸ್, ಎನ್‌ಸಿಸಿ ವತಿಯಿಂದ ನಶೆ ಮುಕ್ತ ಭಾರತ' ಅಭಿಯಾನದ ಅಂಗವಾಗಿ ಬಂಡೀಪುರದಿಂದ ಬೀದರ್ ವರೆಗೆ ಹಮ್ಮಿಕೊಂಡಿರುವ ಬೈಕ್ ರ್ಯಾಲಿ ನಗರ ತಲುಪಿತು. ಇದರ ಪ್ರಯುಕ್ತ ನಗರದ ವಿದ್ಯೋದಯ ಕಾನೂನು ಕಾಲೇಜಿನಲ್ಲಿ ಆಯೋಜಿಸಿದ್ದ ಜಾಗೃತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಮಾದಕ ವಸ್ತು ಸಮಾಜದ ರಂಗದಲ್ಲಿಯೂ ಪರಿಣಾಮ ಬೀರುತ್ತಿದೆ.

ಇದರ ದುಷ್ಪರಿಣಾಮಗಳ ಕುರಿತು ಶಾಲಾ-ಕಾಲೇಜುಗಳಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ. ಮಾದಕ ವಸ್ತು ಸೇವನೆಯಿಂದ ದೈಹಿಕ, ಮಾನಸಿಕ ಸಾಮರ್ಥ್ಯ ಕುಂಠಿತವಾಗುತ್ತದೆ. ಇದು ದೇಶದ ಬೆಳವಣಿಗೆಗೆ ಮಾರಕವಾಗಿದೆ. ಯುವಕರು ಚಟಕ್ಕೆ ಬೀಳದೆ ಕುಟುಂಬ, ಸಮಾಜದ ಬೆಳವಣಿಗೆಗೆ ಶ್ರಮಿಸಬೇಕು ಎಂದು ಸಲಹೆ ಮಾಡಿದರು.

# ಸರ್ಕಾರಿ ಶಾಲೆಗಳಿಗೆ ಕಂಪ್ಯೂಟರ್ ಕೊಡುಗೆ

• ಉದಯವಾಹಿನಿ ರಾಮನಗರ

ರಾಜಸ್ಥಾನ ಯೂತ್ ಅಸೋಸಿಯೇಷನ್ ವತಿಯಿಂದ ಕನಕಪುರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಆರು ಸರ್ಕಾರಿ ಪ್ರಾಥಮಿಕ ಶಾಲೆ ಹಾಗೂ ಪ್ರೌಢಶಾಲೆಗಳಿಗೆ ಅಗತ್ಯವಾದ ಕಂಪ್ಯೂಟರ್ಗಳು, ಇತರ ಸಹಾಯಕ ಸಲಕರಣೆಗಳನ್ನು ನಗರದ ಜಿಲ್ಲಾ ಪಂಚಾಯಿತಿ ಭವನದಲ್ಲಿ ಬೆಂಗಳೂರು ಗ್ರಾಮಾಂತರ ಸಂಸದ ಡಾ. ಸಿ.ಎನ್. ಮಂಜುನಾಥ್ ಅವರ ಮೂಲಕ ಹಸ್ತಾಂತರಿಸಿದರು.

ಸಂಸದ ಡಾ. ಮಂಜುನಾಥ್ ಅವರ ಸೂಚನೆ ಮೇರೆಗೆ, ಕನಕಪುರದ ಕೋಟೆಯ ಮಂಗಳ ವಿದ್ಯಾಮಂದಿರ, ಕೋಟೆಕೊಪ್ಪದ ಸರ್ಕಾರಿ ಶಾಲೆ, ಗಂಗಯ್ಯನದೊಡ್ಡಿ ಸರ್ಕಾರಿ ಶಾಲೆ, ಅದನಕುಪ್ಪೆಯ ಸರ್ಕಾರಿ ಶಾಲೆ, ಕಲ್ಲಹಳ್ಳಿಯ ಸರ್ಕಾರಿ ಶಾಲೆ ಹಾಗೂ ಕೂತಗೊಂಡನಹಳ್ಳಿಯ ಸರ್ಕಾರಿ ಶಾಲೆಗೆ ಹಸ್ತಾಂತರ ಮಾಡಿದರು.

ಸಂಘದ ಅಧ್ಯಕ್ಷ ಶಾಂತು ಕೊಠಾರಿ. ಮಾಜಿ ಅಧ್ಯಕ್ಷ ಸಂಜಯ್ ಶಾ, ಟ್ರಸ್ಟ್ ಮುಖ್ಯಸ್ಥ ರಾಜೇಶ್ ಶಾ, ಕಾರ್ಯದರ್ಶಿ ಕಾಮೇಶ್ ಮಕಾನಾ, ಸಮಿತಿ ಸದಸ್ಯರು, ಶಾಲೆಗಳ ಮುಖ್ಯ ಶಿಕ್ಷಕರು, ಸ್ಥಳೀಯ ಮುಖಂಡರು ಹಾಗೂ ಗಣ್ಯರು ಇದ್ದರು.



ಉದಯವಾಹಿನಿ ಚಿತ್ರ

ತಂತ್ರಜ್ಞಾನ ಜ್ಞಾನವೂ ಮಕ್ಕಳಿಗೆ ಸಮಾನವಾಗಿ ಅಗತ್ಯ

ಇಂದಿನ ಡಿಜಿಟಲ್ ಯುಗದಲ್ಲಿ ಶಿಕ್ಷಣ ಎಂದರೆ, ಕೇವಲ ಪುಸ್ತಕಾಧಾರಿತ ಅಧ್ಯಯನವಲ್ಲ, ತಂತ್ರಜ್ಞಾನ ಜ್ಞಾನವೂ ಮಕ್ಕಳಿಗೆ ಸಮಾನವಾಗಿ ಅಗತ್ಯವಾಗಿದೆ. ಮಕ್ಕಳು ಭವಿಷ್ಯದಲ್ಲಿ ಯಾವುದೇ ಕ್ಷೇತ್ರದಲ್ಲಿ ಸ್ಪರ್ಧಾತ್ಮಕವಾಗಿ ಬೆಳೆಯಬೇಕಾದರೆ, ಕಂಪ್ಯೂಟರ್ ಹಾಗೂ ತಂತ್ರಜ್ಞಾನ ಆಧಾರಿತ ಅಧ್ಯಯನವೇ ಅವಶ್ಯಕ' ಎಂದರು. 'ಈ ಹಿನ್ನಲೆಯಲ್ಲಿ ಸರ್ಕಾರಿ ಶಾಲೆಗಳ ಮಕ್ಕಳಿಗೆ ಡಿಜಿಟಲ್ ಜ್ಞಾನವನ್ನು ತಲುಪಿಸುವುದೇ ಉದ್ದೇಶ ಎಂದು ತಿಳಿದು, ಸಾಮಾಜಿಕ ಜವಾಬ್ದಾರಿಯ ಅಂಗವಾಗಿ ಈ ಸೇವೆಯನ್ನು ಕೈಗೊಂಡಿರುವುದು ಮಾದರಿ ನಡೆಯಾಗಿದೆ' ಎಂದು ಹೇಳಿದರು.

ಮಂಜುನಾಥ್

# ಧ್ಯಾನ್‌ಚಂದ್ ಕ್ರೀಡಾದರ್ಶ ಪಾಲಿಸಿ: ಜ್ಞಾನೇಶ್ವರಿ

• ಉದಯವಾಹಿನಿ ರಾಮನಗರ

ಹಾಕಿ ಮಾಂತ್ರಿಕ ಮೇಜರ್ ಧ್ಯಾನ್‌ಚಂದ್ ಅವರು 1905ರಲ್ಲಿ ಉತ್ತರಪ್ರದೇಶದ ಅಲಹಾಬಾದ್‌ನಲ್ಲಿ ಜನಿಸಿದರು. ಕ್ರೀಡೆಗಳಿಗೆ ಉತ್ಸಾಹ ಹಾಗೂ ಪ್ರಾಮುಖ್ಯತೆ ನೀಡಲು ಅವರೇ ಕಾರಣಕರ್ತರಾಗಿದ್ದಾರೆ. ಅದಕ್ಕಾಗಿಯೇ ಅವರನ್ನು ಕ್ರೀಡೆಗಳ ಪಿತಾಮಹ ಎಂದು ಕರೆಯಲಾಗುತ್ತದೆ.

ಕ್ರೀಡಾಪಟುಗಳು ಧ್ಯಾನ್‌ಚಂದ್ ಆದರ್ಶಗಳನ್ನು ಪಾಲಿಸಬೇಕು ಎಂದು ಜಿಲ್ಲಾ ಉಪಯೋಜನಾ ಸಮನ್ವಯಾಧಿಕಾರಿ ಜ್ಞಾನೇಶ್ವರಿ ಅಭಿಪ್ರಾಯಪಟ್ಟರು.

ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಶಾಲಾ ಶಿಕ್ಷಣ ಇಲಾಖೆ ಸಹಯೋಗದಲ್ಲಿ ಮೇಜರ್ ಧ್ಯಾನ್ ಚಂದ್ ಜನ್ಮ ದಿನಾಚರಣೆ ಪ್ರಯುಕ್ತ ಆಯೋಜಿಸಿದ್ದ ರಾಷ್ಟ್ರೀಯ ಕ್ರೀಡಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಧ್ಯಾನ್‌ಚಂದ್ ಅವರು ದೇಶದ ಜನರಿಗೆ ಕ್ರೀಡೆಯಲ್ಲಿರುವ ಲಾಭಗಳು ಉಪಯೋಗಗಳನ್ನು ಮನವರಿಕೆ ಮಾಡಿಕೊಟ್ಟರು. ಅವರು ಹಾಕಿ ಕ್ರೀಡೆಯಲ್ಲಿ ಸಣ್ಣ ವಯಸ್ಸಿನಲ್ಲಿಯೇ ಸತತವಾಗಿ ಮೂರು ಬಾರಿ


ಉದಯವಾಹಿನಿ ಚಿತ್ರ

ರಾಷ್ಟ್ರೀಯ ಕ್ರೀಡಾ ದಿನಾಚರಣೆ ಕಾರ್ಯಕ್ರಮ

ಚಿನ್ನದ ಪದಕ ಗಳಿಸಿ ಹ್ಯಾಟ್ರಿಕ್ ಸಾಧನೆ ಮಾಡಿ ವಿಶ್ವಖ್ಯಾತಿಯಾದರು. ನಮ್ಮ ಜೀವನದಲ್ಲಿ ಕ್ರೀಡೆ ಬಹಳ ಮುಖ್ಯ. ಯಾವುದೇ ವ್ಯಾಯಾಮವಿಲ್ಲದೆಯೇ ಮನುಷ್ಯ ಆರೋಗ್ಯವಾಗಿರಲು ಸಾಧ್ಯವಿಲ್ಲ. ಆಹಾರ ಎಷ್ಟು ಮುಖ್ಯವೋ, ಕ್ರೀಡೆಯೂ ಅಷ್ಟೇ ಮುಖ್ಯ. ಸದೃಢ ಆರೋಗ್ಯಕ್ಕೆ ಕ್ರೀಡೆ ಮುಖ್ಯ ಎಂದರು. ಕ್ರೀಡೆಯು ಎಲ್ಲಾ ದೇಶ ವನ್ನು ಒಟ್ಟುಗೂಡಿಸುವ ಒಂದು ಮಾಧ್ಯಮ. ದೇಶಗಳ ಮಧ್ಯೆ ಭಾವೈಕ್ಯ ಮೂಡಿಸುವ ಸಾಧನ.

ವಿದ್ಯಾರ್ಥಿಗಳು ಶಿಕ್ಷಣದಿಂದ ಮಾತ್ರ ಪರಿಪೂರ್ಣರಾಗಲು ಸಾಧ್ಯವಿಲ್ಲ. ಶಿಕ್ಷಣದೊಂದಿಗೆ ಕ್ರೀಡೆಯೂ ಮುಖ್ಯ. ಇದನ್ನು ಹಿಂದಿನ ಕಾಲದಲ್ಲಿಯೇ ಮನವರಿಕೆ ಮಾಡಿಕೊಟ್ಟವರು ಧ್ಯಾನ್ ಚಂದ್ ಎಂದು ಬಣ್ಣಿಸಿದರು ಎಂದು ತಿಳಿಸಿದರು.

ಕ್ಷೇತ್ರ ಶಿಕ್ಷಣಾಧಿಕಾರಿ ಪಿ. ಸೋಮಲಿಂಗಯ್ಯ

'ಆಟವಾಡುವ ಸಂದರ್ಭದಲ್ಲಿ ಮನಸ್ಸು ಏಕಾಗ್ರತೆ ಹಾಗೂ ಸಂತೋಷ ನೀಡುತ್ತದೆ. ಮಹತ್ತರವಾದ ಕ್ರೀಡೆಗಳ ಬಗ್ಗೆ ಶಿಕ್ಷಕರು ಎಲ್ಲಾ ಹಂತಗಳಲ್ಲಿಯೂ ಸಹ ಅತ್ಯಂತ ವ್ಯವಸ್ಥಿತವಾಗಿ ಯಾವುದೇ ಕೊರತೆಯಾಗದಂತೆ ತಾಲ್ಲೂಕು ಹಾಗೂ ಜಿಲ್ಲಾ ಹಂತಗಳಲ್ಲಿ ಚಟುವಟಿಕೆಗಳನ್ನು ಮಾಡುತ್ತಿದ್ದಾರೆ ಎಂದು ತಿಳಿಸಿದರು.

ಮಾತನಾಡಿ, ಎಲ್ಲಾ ಮಕ್ಕಳು ಶಿಕ್ಷಣದ ಜೊತೆಗೆ ಕ್ರೀಡೆಗೂ ಮಹತ್ವ ನೀಡಬೇಕು.

ಆಟ-ಪಾಠಗಳಲ್ಲಿ ಭಾಗವಹಿಸಬೇಕು. ಆಟವಾಡುವ ದೈಹಿಕವಾಗಿ, ಮಾನಸಿಕವಾಗಿ ಆಗುವ ಬದಲಾವಣೆಗಳು ಅಪಾರ. ಯಾವುದೇ ಒಂದು ಕ್ರೀಡೆಯಲ್ಲಿ ಭಾಗವಹಿಸುವ ಸಂದರ್ಭದಲ್ಲಿ ಮಕ್ಕಳಿಗೆ ಉಲ್ಲಾಸ, ಸಂತೋಷಸಿಗುತ್ತದೆ ಎಂದು ಹೇಳಿದರು. ದೈಹಿಕ ಶಿಕ್ಷಣ ಶಿಕ್ಷಕ ಮಹೇಶ್ ಕ್ರೀಡಾ ಪ್ರತಿಜ್ಞೆ ಬೋಧಿಸಿದರು. ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕಿ ಅನಿತಾ ಸ್ವಾಗತಿಸಿದರು. ಅತಿಥಿಗಳು ಧ್ಯಾನ್ ಚಂದ್ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು.

# ಸರ್ವೆ ಇಲಾಖೆಯಲ್ಲಿ ಅವ್ಯವಹಾರ ಆರೋಪ: ರೈತರ ಪ್ರತಿಭಟನೆ

• ಉದಯವಾಹಿನಿ ಪಾವಗಡ

ಪಟ್ಟಣದ ಸರ್ವೆ ಇಲಾಖೆಯಲ್ಲಿ ನಡೆಯುತ್ತಿರುವ ಅವ್ಯವಹಾರ, ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಬೇಕು. ಅವ್ಯವಹಾರದಲ್ಲಿ ತೊಡಗಿರುವವರ ವಿರುದ್ಧ ಕೂಡಲೇ ಕ್ರಮ ಜರುಗಿಸಿ ವರ್ಗಾವಣೆ ಮಾಡಬೇಕು ಎಂದು ಒತ್ತಾಯಿಸಿ ರಾಷ್ಟ್ರೀಯ ಕಿಸಾನ್ ಸಂಘದ ನೇತೃತ್ವದಲ್ಲಿ ರೈತರು ಪಟ್ಟಣದಲ್ಲಿ ಪ್ರತಿಭಟನಾ ಮೆರವಣಿಗೆ ನಡೆಸಿದರು.

ಪಟ್ಟಣದ ಸರ್ವೆ ಕಚೇರಿಯಲ್ಲಿ ಅವ್ಯವಹಾರ, ಭ್ರಷ್ಟಾಚಾರ ಹೆಚ್ಚಿದೆ. ಸರ್ಕಾರಕ್ಕೆ ಸೋಲಾರ್ ಕಂಪನಿಯಿಂದ ಯಾವುದೇ ಶುಲ್ಕ ಪಾವತಿಸದಿದ್ದರೂ ರಜಾದಿನಗಳಲ್ಲಿ ಸೋಲಾರ್ ಕಂಪನಿಗೆ ನೀಡಿರುವ ಜಮೀನುಗಳ ಅಳತೆ ಮಾಡಿಕೊಟ್ಟು ಇಲಾಖೆಯ ಕೆಲವರು ಸರ್ಕಾರಕ್ಕೆ ನಷ್ಟ ಉಂಟುಮಾಡಿದ್ದಾರೆ. ಈ ಬಗ್ಗೆ ಅಧಿಕಾರಿಗಳಿಗೆ ದೂರು ನೀಡಿದ್ದರೂ ಯಾವುದೇ ಕ್ರಮ ತೆಗೆದುಕೊಂಡಿಲ್ಲ' ಎಂದು ಪ್ರತಿಭಟನಾ ನಿರತರು ಆರೋಪಿಸಿದರು.

ಕಚೇರಿಯ ದಾಖಲೆಗಳನ್ನು ಮಾರಿಕೊಳ್ಳಲಾಗುತ್ತಿದೆ. ರೈತರನ್ನು



ಉದಯವಾಹಿನಿ ಚಿತ್ರ

ಕೂಡಲೇ ತನಿಖೆ ನಡೆಸಿ ಖಾಸಗಿಯಾಗಿ ಅಳತೆ ನಡೆಸಿರುವ ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸಿ ಇಲ್ಲಿಂದ ಬೇರೆಡೆಗೆ ವರ್ಗಾವಣೆ ಮಾಡಬೇಕು. ಭ್ರಷ್ಟಾಚಾರದಲ್ಲಿ ತೊಡಗಿರುವವರ ವಿರುದ್ಧ ಲೋಕಾಯುಕ್ತ ಅಧಿಕಾರಿಗಳು ನಿಗಾವಹಿಸಿ ಕ್ರಮ ತೆಗೆದುಕೊಳ್ಳಬೇಕು. ಸಕಾಲಕ್ಕೆ ಕಚೇರಿಗೆ ಬರದೆ ಕರ್ತವ್ಯ ಲೋಪ ಎಸಗುವವರನ್ನು ಅಮಾನತು ಮಾಡಬೇಕು ಎಂದು ಒತ್ತಾಯಿಸಿದರು. ಬೇಡಿಕೆ ಈಡೇರಿಸದಿದ್ದರೆ ತಹಶೀಲ್ದಾರ್ ಕಚೇರಿ ಮುಂಭಾಗ ಶಾಮಿಯಾನ ಹಾಕಿ ಧರಣಿ ನಡೆಸಲಾಗುವುದು ಎಂದು ಎಚ್ಚರಿಸಿದರು.

ದಾಖಲೆ ನೀಡದೆ ವರ್ಷಗಟ್ಟಲೆ ಅಲೆದಾಡಿಸುವ ಅಧಿಕಾರಿಗಳು ಲಂಚ ಕೊಟ್ಟರೇ ಕೆಲವೇ ನಿಮಿಷಗಳಲ್ಲಿ ಕೆಲಸ ಮಾಡಿಕೊಡುತ್ತಾರೆ. ಸರ್ಕಾರಿ ಸರ್ವೆ ಕಚೇರಿಯನ್ನು ಇವರ ಸ್ವಂತ ವಾಣಿಜ್ಯ ವ್ಯಾಪಾರ ಮಳಿಗೆಯನ್ನಾಗಿ ಪರಿವರ್ತಿಸಿಕೊಂಡಿದ್ದಾರೆ ಎಂದು ದೂರಿದರು. ರೈತರ ದಾಖಲೆಗಳಿಗಾಗಿ ರೂ.1ರಿಂದ ರೂ.2 ಸಾವಿರ ಕೊಡಬೇಕು. ಹಣ ಕೊಡದಿದ್ದರೆ ತಿಂಗಳುಗಳು ಕಳೆದರೂ ನೀಡುವುದಿಲ್ಲ. ಕೆಲ ಸಿಬ್ಬಂದಿ ತಮಗೆ ಇಷ್ಟ ಬಂದ ಸಮಯಕ್ಕೆ ಕಚೇರಿಗೆ ಬರುತ್ತಾರೆ, ಹೋಗುತ್ತಾರೆ ಎಂದು ಆರೋಪಿಸಿದರು.

ತಾಲ್ಲೂಕು ಘಟಕದ ಅಧ್ಯಕ್ಷ ವಿ. ಕೃಷ್ಣರಾವ್, ಅನಸೂಯಮ್ಮ, ಲಿಂಗಪ್ಪ, ಅನಿತಮ್ಮ, ಸುನಿತಮ್ಮ, ತಿಪ್ಪೇಸ್ವಾಮಿ, ಹನುಮಂತರಾಯ, ಲಕ್ಷ್ಮಿದೇವಿ, ಪದ್ಮಜ, ಅನಿತಮ್ಮ ಉಪಸ್ಥಿತರಿದ್ದರು.

# ಹೊರಗಡೆ ಔಷಧಿ ಖರೀದಿಗೆ ಚೀಟಿ ಕೊಟ್ಟರೆ ಕ್ರಮ

• ಉದಯವಾಹಿನಿ ಕೋಲಾರ

ಸಾರ್ವಜನಿಕ ಆಸ್ಪತ್ರೆಗೆ ಬರುವ ರೋಗಿಗಳಿಗೆ ಅಗತ್ಯ ಚಿಕಿತ್ಸೆ ಒದಗಿಸುವುದರ ಜೊತೆಗೆ ಅಗತ್ಯವಾದ ಔಷಧಿಗಳ ವಿತರಣೆಗೆ ಕ್ರಮ ಕೈಗೊಳ್ಳಬೇಕು. ಹೊರಗೆ ಔಷಧಿ ಖರೀದಿಸಿ ಎಂದು ರೋಗಿಗಳಿಗೆ ಚೀಟಿ ಬರೆದು ಕೊಡುವುದು, ಹಣ ಕೇಳುವುದು ಕಂಡುಬಂದರೆ ನಿರ್ದಾಕ್ಷಿಣ್ಯ ಕ್ರಮಕ್ಕೆ ಶಿಫಾರಸು ಮಾಡುತ್ತೇನೆ ಎಂದು ಶಾಸಕ ಕೊತ್ತೂರು ಮಂಜುನಾಥ್, ವೈದ್ಯರಿಗೆ ಎಚ್ಚರಿಕೆ ನೀಡಿದರು.

ನಗರದ ಕ್ಲಾಕ್ ಟವರ್ ಬಳಿಯಿರುವ ದರ್ಗಾ ಮೊಹಲ್ ಆಸ್ಪತ್ರೆಗೆ ಭೇಟಿ ನೀಡಿ ಕುಂದುಕೊರತೆ ಆಲಿಸಿದರು. ಸರ್ಕಾರಿ ಆಸ್ಪತ್ರೆಗಳ ಬಗ್ಗೆ ನಂಬಿಕೆ ಬರುವಂತೆ ನಿಗಾ ವಹಿಸಬೇಕು. ಈ ಆಸ್ಪತ್ರೆ ಬಗ್ಗೆ ಜನರಿಗೆ ಮೆಚ್ಚುಗೆ ಇದೆ. ಆದರೆ ದುರುಪಯೋಗವಾಗಬಾರದು. ಸರ್ಕಾರಿ ಆಸ್ಪತ್ರೆಯಲ್ಲಿನ ಚಿಕಿತ್ಸೆ ಉಚಿತವಿದ್ದು.

ಹಣ ತೆಗೆದುಕೊಳ್ಳಬಾರದು. ಆಸ್ಪತ್ರೆಯಲ್ಲಿ ಇಲ್ಲದೇ ಇರುವ ಔಷಧಗಳನ್ನೂ ಖರೀದಿ ಮಾಡಿ ನೀಡಬೇಕು ಎಂದರು. ತಾಲ್ಲೂಕು ಆರೋಗ್ಯಾಧಿಕಾರಿ ಡಾ.ನಾರಾಯಣಸ್ವಾಮಿ, ಆಸ್ಪತ್ರೆಯಲ್ಲಿ ಲಿಫ್ಟ್, ಮೆಡಿಕಲ್ ಗ್ಯಾಸ್ ಲೈಫ್ ಲೈನ್, ನೀರು ಸೇರಿದಂತೆ ಸೌಲಭ್ಯಗಳ ಬಗ್ಗೆ ಶಾಸಕರಿಗೆ ಮನವರಿಕೆ ಮಾಡಿದರು.

ವಿಧಾನ ಪರಿಷತ್ ಸದಸ್ಯ ಎಂ.ಎಲ್.ಅನಿಲ್ ಕುಮಾರ್, ನಗರಸಭೆ ಅಧ್ಯಕ್ಷೆ ಲಕ್ಷ್ಮೀದೇವಮ್ಮ ರಮೇಶ್, ಉಪಾಧ್ಯಕ್ಷೆ ಸಂಗೀತಾ, ಜಿಲ್ಲಾ ಆರೋಗ್ಯಾಧಿಕಾರಿ ಡಾ. ಶ್ರೀನಿವಾಸ್, ನಗರಸಭೆ ಸದಸ್ಯರು, ಅಧಿಕಾರಿಗಳು ಹಾಗೂ ಕಾಂಗ್ರೆಸ್ ಮುಖಂಡರು ಇದ್ದರು.


ಉದಯವಾಹಿನಿ ಚಿತ್ರ

ಆಸ್ಪತ್ರೆಯಲ್ಲಿ ನೀರಿಗೆ ಅಭಾವ

**ನಗರಸಭೆ ಅಧಿಕಾರಿಗಳಿಗೆ ಸೂಚನೆ**

ಸರ್ಕಾರಿ ಆಸ್ಪತ್ರೆಗೆ ಬರುವ ರೋಗಿಗಳನ್ನು ಎಂ.ಆರ್. ಸ್ಕ್ಯಾನ್ ಮತ್ತು ಸಿಟಿ ಸ್ಕ್ಯಾನ್‌ಗೆ ಖಾಸಗಿ ಆಸ್ಪತ್ರೆಗಳಿಗೆ ಕಳುಹಿಸದಂತೆ ಎಚ್ಚರ ವಹಿಸಬೇಕು. ನಮ್ಮಲ್ಲಿರುವ ಎಸ್‌ಎನ್‌ಆರ್ ಜಿಲ್ಲಾ ಆಸ್ಪತ್ರೆಗೆ ಕಳಿಸಿ. ಮುಂದಿನ ದಿನಗಳಲ್ಲಿ ಇಲ್ಲಿಯೇ ಆ ವ್ಯವಸ್ಥೆ ಮಾಡಲಾಗುತ್ತದೆ. ರೋಗಿಗಳಿಗೆ ವೈದ್ಯರು, ಸಿಬ್ಬಂದಿ ಲಭ್ಯವಿರುವಂತೆ ನೋಡಿಕೊಳ್ಳಿ. ಆಸ್ಪತ್ರೆಯಲ್ಲಿ ಕೆಟ್ಟು ಹೋಗಿರುವ ಲಿಫ್ಟ್ ಅನ್ನು ನಾಳೆಯೇ ದುರಸ್ತಿ ಮಾಡಿ. ಆಸ್ಪತ್ರೆಯಲ್ಲಿ ನೀರಿಗೆ ಅಭಾವವಿದ್ದು, ಅವಶ್ಯವಿರುವ ಕೊಳವೆಬಾವಿ ದುರಸ್ತಿಗೆ ಕ್ರಮ ವಹಿಸಲು ನಗರಸಭೆ ಅಧಿಕಾರಿಗಳಿಗೆ ಸೂಚನೆ ನೀಡಿದರು

# ರಾಜ್ಯಕ್ಕೆ ಸುಮಾರು 15 ಸಾವಿರ ಕೋಟಿ ರೂ.ಗಳಷ್ಟು ನಷ್ಟ

## ಸರ್ಕಾರ ಸ್ವಾಗತಿಸುತ್ತಿದೆ, ಆದರೆ ಹಣಕಾಸಿನ ರಕ್ಷಣೆಯ ಅಗತ್ಯವನ್ನು ಸಿದ್ದರಾಮಯ್ಯ ಒತ್ತಿಸಿದ್ದಾರೆ

• ಉದಯವಾಹಿನಿ ಮೈಸೂರು

ಸರಕು ಮತ್ತು ಸೇವಾ ತೆರಿಗೆಯಲ್ಲಿ ಮಹತ್ವದ ಬದಲಾವಣೆಯನ್ನು ಮಾಡಲು ಕೇಂದ್ರ ಸರ್ಕಾರ ಚಿಂತನೆ ನಡೆಸಿದೆ. ಆದರೆ, ಕೇಂದ್ರ ಸರ್ಕಾರ ಜಿಎಸ್‌ಟಿ ಸ್ಲ್ಯಾಬ್‌ಗಳಲ್ಲಿ ಇಳಿಕೆ ಮಾಡುವುದರಿಂದ ರಾಜ್ಯ ಸರ್ಕಾರಕ್ಕೆ ವರ್ಷಕ್ಕೆ ಸುಮಾರು 15 ಸಾವಿರ ಕೋಟಿ ರೂ.ಗಳಷ್ಟು ನಷ್ಟವಾಗಲಿದೆ. ಈ ನಷ್ಟವನ್ನು ಕೇಂದ್ರ ಸರ್ಕಾರ ಭರಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರತಿಪಾದಿಸಿದ್ದಾರೆ.

### ಸೆ.4ರ ಜಿಎಸ್‌ಟಿ ಸಭೆಯಲ್ಲಿ ಪ್ರಸ್ತಾಪ

ಇದೇ ವೇಳೆ, 2017 ರಲ್ಲಿ ಜಿಎಸ್‌ಟಿ ಜಾರಿಯಾದಾಗ 5 ವರ್ಷ ಮಾತ್ರ ಪರಿಹಾರ ನೀಡುವುದಾಗಿ ಹೇಳಿದ್ದರು. ಈಗ ಸುಮಾರು 12% ತೆರಿಗೆ ಬೆಳವಣಿಗೆಯಾಗಿದೆ. ಲಕ್ಷುರಿ (ಸಿನ್ ಗೂಡ್ಸ್ ) ವಸ್ತುಗಳಾದ ಸಿಗರೇಟ್, ಗುಟ್ಕಾ, ಪಾನ್ ಮಸಾಲಾ ಬೆಂಜ್ ಕಾರುಗಳಲ್ಲಿ ಓಡಾಡುವವ ಮೇಲೆ ಸೆಸ್ ಹಾಕಿ ನಮಗೆ ಪರಿಹಾರ ಕೊಡಿ ಎಂದು ಸಲಹೆ ನೀಡಿದ್ದೇವೆ. ಸಚಿವ ಕೃಷ್ಣಬೈರೇಗೌಡ ಜಿಎಸ್‌ಟಿ ಮಂಡಳಿ ಸಭೆಯಲ್ಲಿ ಭಾಗವಹಿಸಲಿದ್ದಾರೆ. ಅವರೇ ಈಗ ಎಂಟು ರಾಜ್ಯಗಳ ಆರ್ಥಿಕ ಸಚಿವರೊಂದಿಗೆ ಸಭೆ ನಡೆಸಿದ್ದಾರೆ. ಸೆಪ್ಟೆಂಬರ್ 3 ಮತ್ತು 4 ರಂದು ನಡೆಯಲಿರುವ ಸಭೆಯಲ್ಲಿ ಇದನ್ನು ಪ್ರಸ್ತಾಪ ಮಾಡಲಿದ್ದಾರೆ ಎಂದು ಹೇಳಿದರು.

**ರಾಜ್ಯಕ್ಕೆ 15 ಸಾವಿರ ಕೋಟಿ ರೂ. ನಷ್ಟ:** ಮೈಸೂರಿನಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೇಂದ್ರ ಸರ್ಕಾರ



ಉದಯವಾಹಿನಿ ಚಿತ್ರ

ಜಿ.ಎಸ್.ಟಿ ಎರಡು ಸ್ಲ್ಯಾಬ್ ಮಾಡುವುದರಿಂದ ಪ್ರತಿ ವರ್ಷ 15 ಸಾವಿರ ಕೋಟಿ ನಷ್ಟವಾಗಬಹುದೆಂದು ಅಂದಾಜಿಸಲಾಗಿದೆ. ಜಿಎಸ್‌ಟಿ ಸ್ಲ್ಯಾಬ್‌ಗಳನ್ನು ತರ್ಕಬದ್ಧಗೊಳಿಸುವುದನ್ನು ಸ್ವಾಗತಿಸುತ್ತೇವೆ, ಆದರೆ ಹಣಕಾಸಿನ ರಕ್ಷಣೆಯಾಗಬೇಕೆನ್ನುವುದು ನಮ್ಮ ಉದ್ದೇಶ. ಅದಕ್ಕಾಗಿ ಎಂಟು ರಾಜ್ಯಗಳು ದೆಹಲಿಯಲ್ಲಿ ಚರ್ಚೆ ಮಾಡಿದ್ದು, 2.50 ಲಕ್ಷ ಕೋಟಿ ರೂ. ಇಡೀ ರಾಜ್ಯದಲ್ಲಿ ಸಂಗ್ರಹವಾಗುತ್ತದೆ. 15 ಸಾವಿರ ಕೋಟಿ ನಷ್ಟವಾಗುವುದು ದೊಡ್ಡ ಮೊತ್ತ ಎಂದು ಹೇಳಿದ್ದಾರೆ. ಜಿಎಸ್‌ಟಿ ವಿಚಾರವಾಗಿ ರಾಜ್ಯದ ಬಿಜೆಪಿಯ ಸಂಸದರು ಎಂದಿಗೂ ಕೇಂದ್ರವನ್ನು ಒತ್ತಾಯಿಸುವುದಿಲ್ಲ.

ಕರ್ನಾಟಕಕ್ಕೆ ರೂ.11,950 ಕೋಟಿಗಳು ನಷ್ಟವಾಯಿತು. ಬಿಜೆಪಿ ಸಂಸದರು ಈ ಬಗ್ಗೆ ಮಾತನಾಡಿಯೇ ಇಲ್ಲ. ಧರ್ಮಸ್ಥಳಕ್ಕೆ ಧರ್ಮಯಾತ್ರೆ ಕೈಗೊಂಡಿದ್ದಾರೆ. ರಾಜ್ಯಕ್ಕೆ ಅನ್ಯಾಯವಾಗಿರುವ ಬಗ್ಗೆ ಯಾವಾಗ ಮಾತನಾಡಿದ್ದಾರೆ ಧರ್ಮಸ್ಥಳದ ವಿಷಯವನ್ನು ರಾಜಕೀಯವಾಗಿ ಬಳಸಿಕೊಳ್ಳುತ್ತಿದ್ದಾರೆ.

**ಜಿಎಸ್‌ಟಿ ಸುಧಾರಣೆ**

ಕೇಂದ್ರ ಸರ್ಕಾರವು 2017ರಲ್ಲಿ ಪ್ರಾರಂಭವಾದ ಸರಕು ಮತ್ತು ಸೇವಾ ತೆರಿಗೆ (ಜಿ.ಎಸ್.ಟಿ.) ವ್ಯವಸ್ಥೆಯಲ್ಲಿನ ಅತ್ಯಂತ ಮಹತ್ವದ ಸುಧಾರಣೆಗಳಲ್ಲಿ ಒಂದಕ್ಕೆ ಸಿದ್ಧತೆ ನಡೆಸುತ್ತಿದೆ. ಮೂಲಗಳ ಪ್ರಕಾರ, ಕೇವಲ ಶೇಕಡಾ 5 ಮತ್ತು ಶೇಕಡಾ 18ರ ಸ್ಲ್ಯಾಬ್‌ಗಳನ್ನು ಮಾತ್ರ ಉಳಿಸಿಕೊಳ್ಳಲು ಚಿಂತಿಸಲಾಗಿದೆ. ಪ್ರಸ್ತುತ ಶೇಕಡಾ 12ರ ಸ್ಲ್ಯಾಬ್ನಲ್ಲಿರುವ ಶೇಕಡಾ 99ರಷ್ಟು ವಸ್ತುಗಳನ್ನು ಶೇಕಡಾ 5ರ ದರಕ್ಕೆ ಮತ್ತು ಶೇಕಡಾ 28ರ ಬ್ರ್ಯಾಕೆಟ್ ನಲ್ಲಿರುವ ಶೇಕಡಾ 90ರಷ್ಟು ಸರಕು ಮತ್ತು ಸೇವೆಗಳನ್ನು ಶೇಕಡಾ 18ಕ್ಕೆ ವರ್ಗಾಯಿಸಲಾಗುತ್ತದೆ; ಜಿ. ಎಸ್. ಟಿ. ದರಗಳ ಮೇಲೆ ಯಾವುದೇ ರೀತಿಯ ಸೆಸ್ ಇರುವುದಿಲ್ಲ.

ಕೇಂದ್ರ ಸರ್ಕಾರ ಚಿಂತನೆ

**ಇತರ ರಾಜ್ಯಗಳಲ್ಲೂ ಶೇ.2ರಷ್ಟು ಆಸ್ತಿ ತೆರಿಗೆ:** ಆಸ್ತಿ ನೋಂದಣಿ ಶುಲ್ಕ ಹೆಚ್ಚಳವಾಗಿರುವ ಬಗ್ಗೆ ಪ್ರತಿಕ್ರಿಯೆ ನೀಡಿ ದಕ್ಷಿಣ ಭಾರತದ ಇತರೆ ರಾಜ್ಯಗಳಿಗೆ ಸಮಾನವಾಗಿ ಶೇಕಡಾ ಒಂದರಷ್ಟನ್ನು ಹೆಚ್ಚಿಸಲಾಗಿದೆ ಎಂದು ಹೇಳಿದ್ದಾರೆ.

ಅಂತರಾಳದಿಂದ... EDITORIAL

# ದೇಶದ ರೈತರನ್ನು ಸಮಸ್ಯೆಯಾಗಿ ಕಾಡುತ್ತಿರುವ ನಕಲಿ ಗೋರಕ್ಷಕರು

ಗೋಹತ್ಯೆ, ಗೋಮಾಂಸ ಸೇವನೆಯ ಬಗ್ಗೆ ಬಿಜೆಪಿಯೊಳಗಿರುವ ಗೊಂದಲ, ದ್ವಂದ್ವಗಳು ಇಂದು ನಿನ್ನೆಯದಲ್ಲ. ರಾಜ್ಯದಿಂದ ರಾಜ್ಯಕ್ಕೆ ಗೋಮಾಂಸಾಹಾರದ ಬಗ್ಗೆ ಅದರ ನಿಲುವುಗಳು ಬದಲಾಗುತ್ತಾ ಹೋಗುತ್ತವೆ. ಕೇರಳ, ಗೋವಾ ಮತ್ತು ಈಶಾನ್ಯ ರಾಜ್ಯಗಳಲ್ಲಿ ಬಿಜೆಪಿ ನಾಯಕರು ಗೋಮಾಂಸವನ್ನು ಬಹಿರಂಗವಾಗಿ ಬೆಂಬಲಿಸುತ್ತಾರೆ. ದೇಶದ ಒಳಗೆ ಗೋ ಹತ್ಯೆಯ ಬಗ್ಗೆ ಅತ್ಯಂತ ಕಠಿಣವಾಗಿ ಮಾತನಾಡುವ, ಕಾನೂನುಗಳನ್ನು ಕೈಗೆತ್ತಿಕೊಳ್ಳುವ ಸಂಘಪರಿವಾರ ಗೂಂಡಾಗಳು ವಿದೇಶಗಳಿಗೆ ರಫ್ತಾಗುವ ಗೋಮಾಂಸದ ಬಗ್ಗೆ ಜಾಣ ಕುರುಡರೂ, ಕಿವುಡರೂ ಆಗಿದ್ದಾರೆ. ಒಂದು ವೇಳೆ ವಿದೇಶಕ್ಕೆ ರಫ್ತಾಗುವ ಗೋಮಾಂಸವನ್ನು ತಡೆಯಲು ಮುಂದಾದರೆ ಈ ನಕಲಿ ಗೋರಕ್ಷಕರ ವಿರುದ್ಧ ಕೇಂದ್ರ ಸರಕಾರವೇ ಖುದ್ದಾಗಿ ರಂಗಕ್ಕಿಳಿದು ಕಾರ್ಯಾಚರಣೆ ನಡೆಸುವ ಸಾಧ್ಯತೆಗಳಿವೆ. ಸದ್ಯಕ್ಕೆ ಸಂಘಪರಿವಾರ ಮತ್ತು ಬಿಜೆಪಿಯ ಗೋಹತ್ಯೆ ರಾಜಕೀಯದಿಂದ, ನೇರ ದುಷ್ಪರಿಣಾಮಗಳನ್ನು ಅನುಭವಿಸುತ್ತಿರುವುದು ದೇಶದೊಳಗಿರುವ ರೈತರು ಮತ್ತು ಇಲ್ಲಿನ ಸಣ್ಣ ವ್ಯಾಪಾರಿಗಳಾಗಿರುವುದರಿಂದ ಸರಕಾರ ತಲೆಕೆಡಿಸಿಕೊಳ್ಳುತ್ತಿಲ್ಲ. ರಾಜಕೀಯವಾಗಿ ಲಾಭದಾಯಕವಾಗುವ ರೀತಿಯಲ್ಲಿ ಗೋಮಾಂಸದ ವಿರುದ್ಧ ಸ್ಥಳಕ್ಕೆ ತಕ್ಕಂತೆ ಮಾತನಾಡುತ್ತಾ ಬಂದಿದೆ. ದೇಶದೊಳಗೆ ಗೋವುಗಳ ಮಾರಾಟ, ಸಾಗಾಟ ಇತ್ಯಾದಿಗಳಿಗೆ ಹತ್ತು ಹಲವು ತೊಡಕುಗಳು, ಆತಂಕಗಳು ಇರುವುದನ್ನು ಪರೋಕ್ಷವಾಗಿ ಈ ಬೃಹತ್ ಉದ್ಯಮಿಗಳು ತಮ್ಮದಾಗಿಸಿಕೊಳ್ಳುತ್ತಿದ್ದಾರೆ. ಇವರ ಮಾಂಸ ಸಂಸ್ಕರಣಾ ಘಟಕಗಳಿಗೆ ಅಗ್ಗದ ಬೆಲೆಯಲ್ಲಿ ಜಾನುವಾರುಗಳು ಪೂರೈಕೆಯಾಗುತ್ತವೆ. ಇದೇ ಸಂದರ್ಭದಲ್ಲಿ ಜಾನುವಾರುಗಳನ್ನು ಸಾಕಿದ ರೈತರಿಗೆ ಅನುಕೂಲವಾಗುವ ಬದಲು ನಷ್ಟವೇ ಹೆಚ್ಚು. ಗೋವುಗಳ ಜೊತೆಗೆ ಯಾವ ನಂಟೂ ಇಲ್ಲದ ನಕಲಿ ಗೋರಕ್ಷಕರೂ ರೈತರ ಅನುಪಯುಕ್ತ ಗೋವುಗಳಿಂದ ಲಾಭ ಮಾಡಿಕೊಳ್ಳುತ್ತಿದ್ದಾರೆ. ಒಂದೆಡೆ ಸರಕಾರ ಅನುಪಯುಕ್ತ ಗೋವುಗಳನ್ನು ಸಾಕುವ ಗೋಶಾಲೆಗಳಿಗೆ ವಾರ್ಷಿಕ ಸಾವಿರಾರು ಕೋಟಿ ರೂಪಾಯಿ ಅನುದಾನ ನೀಡುತ್ತಿದೆ. ಮಹಾರಾಷ್ಟ್ರ ಪ್ರಾಣಿ ಸಂರಕ್ಷಣಾ ಕಾಯ್ದೆಯ ಹೆಸರಿನಲ್ಲಿ ರೈತರಿಗೆ ನೀಡುತ್ತಿರುವ ಕಿರುಕುಳಗಳ ಬಗ್ಗೆ ಈ ಹಿಂದೆ ಹಲವು ಬಾರಿ ಧ್ವನಿಯೆತ್ತಿದ್ದ ಸದಾಶಿವ ಖೋತ್ ಅವರು, 'ಈ ಕಾನೂನು ಕೃಷಿ ಆರ್ಥಿಕತೆಗೆ ಅತಿ ದೊಡ್ಡ ಬೆದರಿಕೆಯಾಗಿದೆ. ಇದಕ್ಕೆ ತಿದ್ದುಪಡಿಗಳ ಅಗತ್ಯವಿದೆ' ಎಂದು ವಾದಿಸುತ್ತಾ ಬಂದವರು. 2016ರಲ್ಲಿ ಬಿಜೆಪಿ ಬೆಂಬಲದೊಂದಿಗೆ ಮೊದಲ ಬಾರಿ ಶಾಸಕರಾಗಿದ್ದ ಇವರು, ಫಡ್ನವೀಸ್ ಅವರ ಮೊದಲ ಅಧಿಕಾರಾವಧಿಯಲ್ಲಿ ಕೃಷಿ ಸಚಿವರೂ ಆಗಿದ್ದುದರಿಂದ ನಕಲಿ ಗೋರಕ್ಷಕರ ಬಗ್ಗೆ ಇವರ ಆಕ್ರೋಶಕ್ಕೆ ಮಹತ್ವ ಬಂದಿದೆ. ರಾಜ್ಯದ ಸಾಂಗ್ಲಿ ಜಿಲ್ಲೆಗೆ ಸೇರಿದ ಖೋತ್ ಕಳೆದ 30 ವರ್ಷಗಳಿಂದಲೂ ಕೃಷಿ ಸಮಸ್ಯೆಗಳ ಬಗ್ಗೆ ಮಾತನಾಡುತ್ತಾ ಬಂದಿದ್ದಾರೆ. ಇದೀಗ ಅವರು 'ಮಹಾರಾಷ್ಟ್ರದಲ್ಲಿ ನಕಲಿ ಗೋರಕ್ಷಕರ ಲಾಬಿಯು ರೈತರಿಗೆ ಕಿರುಕುಳ ನೀಡುತ್ತಿದೆ ಎಂದು ಸ್ಪಷ್ಟ ಧ್ವನಿಯಲ್ಲಿ ಆಕ್ರೋಶ ವ್ಯಕ್ತಪಡಿಸಿರುವುದು ಬಿಜೆಪಿಗೆ ಮುಜುಗರ ಉಂಟಾಗಿದೆ. ಖೋತ್ ಅವರ ಪ್ರಕಾರ, ಜಾನುವಾರುಗಳಿಗೆ ಮೇವು ಒದಗಿಸಲು ದಿನಕ್ಕೆ 300 ರೂ. ವೆಚ್ಚವಾಗುತ್ತದೆ. ಅವು ಹಾಲು ನೀಡಲು ಆರಂಭಿಸಿದ ಬಳಿಕ ಪ್ರತಿ ದಿನ 15 ಲೀ. ಹಾಲು ಉತ್ಪಾದನೆಯನ್ನು ಪರಿಗಣಿಸಿದರೆ ಪ್ರತಿ ಲೀ.ಗೆ 35 ರೂ. ದರದಲ್ಲಿ ಅವುಗಳಿಂದ ಪ್ರತಿದಿನ 450 ರೂ. ಆದಾಯ ಲಭಿಸುತ್ತದೆ. ಅದು ಹಾಲು ನೀಡುವುದನ್ನು ನಿಲ್ಲಿಸಿದ ಬಳಿಕ ಅದಕ್ಕಾಗಿ ಮಾಡುವ ವೆಚ್ಚವು ನಿಷ್ಕ್ರಿಯ ಹೂಡಿಕೆಯಾಗುತ್ತದೆ ಮತ್ತು ಯಾವುದೇ ಪ್ರತಿಫಲವನ್ನು ನೀಡುವುದಿಲ್ಲ. ಹೀಗಾಗಿ ಅವುಗಳನ್ನು ಮಾರುವುದು ಬಿಟ್ಟು ರೈತರಿಗೆ ಅನ್ಯ ಮಾರ್ಗವಿಲ್ಲ' ಎಂದು ಖೋತ್ ಅಭಿಪ್ರಾಯ ಪಡುತ್ತಾರೆ. ''ರೈತರು ಜಾನುವಾರನ್ನು ಸ್ಥಿರ ಠೇವಣಿಯಾಗಿ ಪರಿಗಣಿಸುತ್ತಾರೆ. ಅವು ಪ್ರೌಢ ವಯಸ್ಸಿಗೆ ಬಂದ ಬಳಿಕ ಮಾರಾಟ ಮಾಡಿ ತನ್ನ ಹೂಡಿಕೆಯ ಮೇಲೆ ಲಾಭ ಗಳಿಸುತ್ತಾರೆ ಅಥವಾ ಇತರ ಗೋವುಗಳ ಸಾಕಣೆಯ ವೆಚ್ಚಕ್ಕೆ ಅದನ್ನು ಬಳಸಿಕೊಳ್ಳುತ್ತಾರೆ. ಆದರೆ ನಕಲಿ ಗೋರಕ್ಷಕರಿಂದಾಗಿ ಇಂತಹ ಮಾರಾಟಕ್ಕೆ ಈಗ ಹೊಡೆತ ಬಿದ್ದಿದೆ ಎನ್ನುವುದು ಬಿಜೆಪಿಯ ಈ ನಾಯಕನ ಆಕ್ರೋಶವಾಗಿದೆ.ಸದ್ಯಕ್ಕೆ ಜಾನುವಾರು ರಕ್ಷಣಾ ಕಾಯ್ದೆಯಿಂದಾಗಿ ಲಾಭ ಮಾಡಿಕೊಳ್ಳುತ್ತಿರುವುದು ಗೋವುಗಳ ಸಾಕಣೆಯಲ್ಲಿ ಯಾವ ಪಾತ್ರವನ್ನು ನಿರ್ವಹಿಸದ ನಕಲಿ ಗೋರಕ್ಷಕರು. ಇವರು ರೈತರ ಗೋವುಗಳನ್ನು ಮಾರಾಟ ಮಾಡಲು ಮಧ್ಯವರ್ತಿಯಾಗುತ್ತಿದ್ದಾರೆ. ಮಾರಾಟ ಮಾಡುವ ರೈತರು ಇವರ ಮೂಲಕವೇ ವ್ಯಾಪಾರಿಗಳಿಗೆ, ಕಸಾಯಿಗಳಿಗೆ ಮಾರಬೇಕಾದ ಅನಿವಾರ್ಯ ಸ್ಥಿತಿ ನಿರ್ಮಾಣ ಮಾಡಿದ್ದಾರೆ. ತಮ್ಮ ಗೋವುಗಳನ್ನು ಮಾರಾಟ ಮಾಡಲು ರೈತರು ಸ್ವಯಂ ಮುಂದಾದರೆ ಅವರ ಮೇಲೆ ದಾಳಿ ನಡೆಸುತ್ತಾರೆ. ವ್ಯಾಪಾರಿಗಳೂ ರೈತರಿಂದ ಗೋವುಗಳನ್ನು ನೇರವಾಗಿ ಕೊಂಡುಕೊಳ್ಳಲು ಈ ಕಾರಣದಿಂದ ಅಂಜುತ್ತಾರೆ. ಕಸಾಯಿ ಖಾನೆಗಳಂತೂ ಈ ನಕಲಿ ಗೋರಕ್ಷಕರಿಗೆ ಹಫ್ತಾ ನೀಡುವುದು ಅನಿವಾರ್ಯವಾಗಿ ಬಿಟ್ಟಿದೆ. ಒಟ್ಟಿನಲ್ಲಿ ಗೋರಕ್ಷಕರ ವೇಷದಲ್ಲೇ ಇವರು ರೈತರು ಮತ್ತು ಕಸಾಯಿಗಳ ನಡುವಿನ ಮಧ್ಯವರ್ತಿಗಳಾಗಿ ದುಡ್ಡು ಮಾಡುತ್ತಿದ್ದಾರೆ.

> **ಇದೇ ಸಂದರ್ಭದಲ್ಲಿ ಗೋಶಾಲೆಗಳಲ್ಲಿ ಭಾರೀ ಅಕ್ರಮಗಳು ನಡೆಯುತ್ತಿದ್ದು ಇಲ್ಲಿಂದಲೇ ಮಾಂಸ ಸಂಸ್ಕರಣಾ ಘಟಕಗಳಿಗೆ ಗೋವುಗಳನ್ನು ಅಕ್ರಮವಾಗಿ ಸಾಗಿಸಲಾಗುತ್ತದೆ ಎಂಬ ಆರೋಪಗಳನ್ನು ಹಲವು ಬಿಜೆಪಿ ನಾಯಕರೇ ಮಾಡಿದ್ದಾರೆ. ಇಸ್ಕಾನ್ ಸಂಸ್ಥೆಯು ಗೋವುಗಳನ್ನು ಅಕ್ರಮವಾಗಿ ಕಸಾಯಿಖಾನೆಗಳಿಗೆ ಮಾರಾಟ ಮಾಡುತ್ತಿರುವ ಬಗ್ಗೆ ಈ ಹಿಂದೆ ಬಿಜೆಪಿ ನಾಯಕಿ ಮೇನಕಾ ಗಾಂಧಿ ಆರೋಪ ಮಾಡಿದ್ದರು. ಅವರ ವಿರುದ್ಧ ಇಸ್ಕಾನ್ ಮಾನನಷ್ಟ ಮೊಕದ್ದಮೆಯನ್ನು ಕೂಡ ಹೂಡಿತ್ತು.ಇದೀಗ ಮಹಾರಾಷ್ಟ್ರದಲ್ಲಿ ಇನ್ನೋರ್ವ ಬಿಜೆಪಿಯ ಹಿರಿಯ ನಾಯಕ, ಮಾಜಿ ಸಚಿವ ಸದಾಶಿವ ಖೋತ್ ನಕಲಿ ಗೋರಕ್ಷಕರಿಂದ ರೈತರಿಗೆ ಆಗುತ್ತಿರುವ ಅನ್ಯಾಯದ ಬಗ್ಗೆ ಧ್ವನಿಯೆತ್ತಿದ್ದಾರೆ.**



# ಈ ಬಿರಿಯಾನಿ ತಿಂದರೆ ನಾನ್ ವೆಜ್ ಪ್ರಿಯರೂ ಫಿದಾ!

ಈ ಬಿರಿಯಾನಿ ತಿಂದರೆ ನಾನ್‌ವೆಜ್ ಪ್ರಿಯರೂ ಫಿದಾ ಕೇವಲ 20 ನಿಮಿಷದಲ್ಲಿ ಮಾಡಿ ಸಾಬೂದಾನ ಬಿರಿಯಾನಿ. ಸಸ್ಯಾಹಾರಿಗಳಿಗೆ ಮಧ್ಯಾಹ್ನದ ಊಟಕ್ಕೆ ವೈವಿಧ್ಯಮಯ ಆಯ್ಕೆಗಳು ಕಡಿಮೆ ಎಂಬ ಭಾವನೆಯಿದೆ. ಆದರೆ, ಇದು ಖಂಡಿತ ನಿಜವಲ್ಲ. ಮನೆಯಲ್ಲಿ ಇರುವ ಕೆಲವೇ ಕೆಲವು ಸಾಮಗ್ರಿಗಳನ್ನು ಬಳಸಿ ಅತ್ಯಂತ ರುಚಿಕರವಾದ ಮತ್ತು ಆರೋಗ್ಯಕರವಾದ ಆಹಾರವನ್ನು ತಯಾರಿಸಬಹುದು. ಮಧ್ಯಾಹ್ನದ ಊಟಕ್ಕೆ ಆರೋಗ್ಯಕರ, ರುಚಿಕರ ಮತ್ತು ಹಗುರವಾದ ಆಯ್ಕೆಯನ್ನು ಹುಡುಕುತ್ತಿದ್ದರೆ, ಸಬ್ಬಕ್ಕಿ ಬಿರಿಯಾನಿ ಬೆಸ್ಟ್ ಆಯ್ಕೆಯಾಗಿದೆ. ಸಾಮಾನ್ಯವಾಗಿ ಸಬ್ಬಕ್ಕಿಯನ್ನು ಖಿಚಡಿ ಅಥವಾ ವಡೆಯ ರೂಪದಲ್ಲಿ ಮಾತ್ರ ನೋಡುತ್ತೇವೆ. ಆದರೆ, ಈ ಬಿರಿಯಾನಿಯ ರುಚಿ ಪ್ರತಿಯೊಬ್ಬರಿಗೂ ಆಶ್ಚರ್ಯ ತರುತ್ತದೆ.

ಮಾಂಸಾಹಾರ ಪ್ರಿಯರೂ ಸಹ ಈ ಬಿರಿಯಾನಿಯ ಅಭಿಮಾನಿಗಳಾಗುವುದು ಖಂಡಿತ. ಉಪವಾಸದ ದಿನಗಳಲ್ಲಿ ತಿನ್ನಲು ಏನು ವಿಶೇಷ ತಯಾರಿಸಬೇಕು ಎಂಬ ಪ್ರಶ್ನೆ ಎಲ್ಲರಿಗೂ ಬರುತ್ತದೆ. ಸಾಮಾನ್ಯವಾಗಿ ಜನರು ಉಪವಾಸದ ಸಮಯದಲ್ಲಿ ಸಬ್ಬಕ್ಕಿ ಖಿಚ್ಡಿ ಅಥವಾ ಸಬ್ಬಕ್ಕಿ ವಡೆ ಮಾಡುತ್ತಾರೆ. ಆದರೆ, ಇದೇ ಸಬ್ಬಕ್ಕಿಯಿಂದ ತಯಾರಿಸುವ ಸಾಬೂದಾನಾ ಬಿರಿಯಾನಿ ಆರೋಗ್ಯಕರವಾಗಿದ್ದು, ರುಚಿಯಲ್ಲಿ ಕೂಡ ಅಸಾಧಾರಣ. ಕೇವಲ ಉಪವಾಸಕ್ಕೆ ಮಾತ್ರವಲ್ಲದೆ, ಯಾವ ದಿನವಾದರೂ ಮಧ್ಯಾಹ್ನದ ಊಟಕ್ಕೆ ಇದನ್ನು ತಯಾರಿಸಬಹುದು. ಇದು ರುಚಿಕರವಾಗಿದ್ದು, ಜೀರ್ಣಿಸಿಕೊಳ್ಳಲು ಸುಲಭವಾಗಿದೆ. ಇದರಲ್ಲಿರುವ ಕಾರ್ಬೋಹೈಡ್ರೇಟ್‌ಗಳು ತ್ವರಿತ ಶಕ್ತಿಯನ್ನು ನೀಡುತ್ತವೆ. ಕಡಲೆಕಾಯಿ ಹಾಗೂ ತರಕಾರಿಗಳು ಇದನ್ನು ಪೌಷ್ಟಿಕವಾಗಿಸುತ್ತವೆ.

**ಸಬ್ಬಕ್ಕಿ ಬಿರಿಯಾನಿಗೆ ಬೇಕಾಗುವ ಸಾಮಗ್ರಿಗಳು**

- ಸಬ್ಬಕ್ಕಿ ಅಥವಾ ಸಾಬೂದಾನಾ
- ಆಲೂಗಡ್ಡೆ
- ಶೇಂಗ
- ಹಸಿ ಮೆಣಸಿನಕಾಯಿ
- ಕರಿಬೇವು
- ಜೀರಿಗೆ
- ಉಪ್ಪು (ಸೆಂದಹ ಉಪ್ಪು)
- ಕಪ್ಪು ಮೆಣಸು ಪುಡಿ
- ಏಲಕ್ಕಿ ಪುಡಿ
- ನಿಂಬೆ ರಸ
- ಕೇವಡಾ ವಾಟರ್ (ಕೇವ್ರಾ ನೀರು)
- ತುಪ್ಪ
- ಕೊತ್ತಂಬರಿ ಸೊಪ್ಪು

**ಸಬ್ಬಕ್ಕಿ ಬಿರಿಯಾನಿ ತಯಾರಿಸುವ ವಿಧಾನ :** ಮೊದಲು ಸಬ್ಬಕ್ಕಿಯನ್ನು ಚೆನ್ನಾಗಿ ತೊಳೆಯಿರಿ ಮತ್ತು 3 ರಿಂದ 4 ಗಂಟೆಗಳ ಕಾಲ ನೆನೆಸಿಡಿ. ಸಬ್ಬಕ್ಕಿ ಚೆನ್ನಾಗಿ ಉಬ್ಬಿದ ಮೇಲೆ, ಹೆಚ್ಚುವರಿ ನೀರನ್ನು ಬಿಟ್ಟುಬಿಡಿ. ಈಗ ಒಂದು ಕಡಾಯಿ ತೆಗೆದು ಅದರಲ್ಲಿ ತುಪ್ಪ ಬಿಸಿ ಮಾಡಿ. ಜೀರಿಗೆ, ಹಸಿ ಮೆಣಸಿನಕಾಯಿ, ಕರಿಬೇವು ಹಾಗೂ ಶೇಂಗ ಹಾಕಿ ಸ್ವಲ್ಪ ಹುರಿಯಿರಿ. ಈಗ ಬೇಯಿಸಿದ ಆಲೂಗಡ್ಡೆ ತುಂಡುಗಳನ್ನು ಸೇರಿಸಿ, ಸ್ವಲ್ಪ ಬೇಯಿಸಿ. ನಂತರ ನೆನೆಸಿದ ಸಬ್ಬಕ್ಕಿಯನ್ನು ಹಾಕಿ. ಸೆಂದಹ ಉಪ್ಪು, ಕಪ್ಪು ಮೆಣಸು ಪುಡಿ ಹಾಕಿ ಚೆನ್ನಾಗಿ ಮಿಕ್ಸ್ ಮಾಡಿ. ಕಡಿಮೆ ಉರಿಯಲ್ಲಿ 3 ರಿಂದ 4 ನಿಮಿಷ ಮುಚ್ಚಿ ಬೇಯಿಸಿ. ಸಬ್ಬಕ್ಕಿ ಹತ್ತಿರ ಹತ್ತಿರ ಅಂಟಿಕೊಳ್ಳದಂತೆ ಎಚ್ಚರಿಕೆ ವಹಿಸಿ. ಗ್ಯಾಸ್ ಆಫ್ ಮಾಡುವ ಮುನ್ನ ನಿಂಬೆ ರಸ, ಕೊತ್ತಂಬರಿ ಸೊಪ್ಪು ಸೇರಿಸಿ. ಸುವಾಸನೆಗಾಗಿ ಏಲಕ್ಕಿ ಪುಡಿ ಮತ್ತು ಕೇವಡಾ ವಾಟರ್ ಹಾಕಬಹುದು. ಎಲ್ಲಾ ಪದಾರ್ಥಗಳನ್ನು ಚೆನ್ನಾಗಿ ಮಿಕ್ಸ್ ಮಾಡಿದರೆ, ಈಗ ಬಿಸಿ ಬಿಸಿ ಸಬ್ಬಕ್ಕಿ ಬಿರಿಯಾನಿ ಸವಿಯಲು ಸಿದ್ಧ. ಈ ಸಬ್ಬಕ್ಕಿ ಬಿರಿಯಾನಿಯನ್ನು ಮೊಸರು ಅಥವಾ ರಾಯ್ತಾ ಜೊತೆ ಸೇವಿಸಿದರೆ ಅದರ ಮಜವೇ ಬೇರೆ. ಇದು ಅದ್ಭುತವಾಗಿ ಹೊಂದುತ್ತದೆ. ಉಪವಾಸದಲ್ಲೇ ಅಲ್ಲದೆ ಸಾಮಾನ್ಯ ದಿನಗಳ ಮಧ್ಯಾಹ್ನದ ಊಟಕ್ಕೂ ಇದು ಸೂಕ್ತವಾದ ಆಯ್ಕೆ. ಎಲ್ಲರ ಮೆಚ್ಚುಗೆ ಗಳಿಸುವುದು ಖಚಿತ. ಸಬ್ಬಕ್ಕಿ ಬಿರಿಯಾನಿ ಏಕೆ ವಿಶೇಷ ಸಬ್ಬಕ್ಕಿಯಲ್ಲಿ ಇರುವ ಕಾರ್ಬೋಹೈಡ್ರೇಟ್ ಶಕ್ತಿಯನ್ನು ತಕ್ಷಣ ನೀಡುತ್ತದೆ. ಶೇಂಗದಲ್ಲಿ ಪ್ರೋಟೀನ್ ಮತ್ತು ಉತ್ತಮ ಕೊಬ್ಬು ಇದ್ದು ದೇಹಕ್ಕೆ ಪೋಷಕಾಂಶ ಒದಗಿಸುತ್ತದೆ. ಹಸಿವು ಹೆಚ್ಚಿಸದೆ ಹಗುರವಾಗಿ ಜೀರ್ಣವಾಗುತ್ತದೆ. ಸಾಮಾನ್ಯ ಖಿಚ್ಡಿ ಅಥವಾ ವಡೆಗಿಂತ ಸಬ್ಬಕ್ಕಿ ಬಿರಿಯಾನಿಯ ಸವಿರುಚಿ ಹೊಸ ಅನುಭವ.

# ಮೃಗಾಲಯದಲ್ಲಿ 2 ಕರಡಿಗಳನ್ನು ದತ್ತು ಪಡೆದ ಒನ್ ವರ್ಲ್ಡ್ ಇಂಟರ್ನ್ಯಾಷನಲ್ ಶಾಲೆ ಸರ್ಜಾಪುರ

• ಉದಯವಾಹಿನಿ ಬೆಂಗಳೂರು

ಸರ್ಜಾಪುರದ ಒನ್ ವರ್ಲ್ಡ್ ಇಂಟರ್ನ್ಯಾಷನಲ್ ಶಾಲೆಯಲ್ಲಿ ಓಡಬ್ಲ್ಯೂಐಎಸ್ ಪ್ರತಿ ಉಪಕ್ರಮದ ಹೃದಯಭಾಗದಲ್ಲಿ ಕರುಣೆ ಮತ್ತು ಸಮುದಾಯ ಕಾಳಜಿ ಇರುತ್ತದೆ. ಈ ತತ್ವಶಾಸ್ತ್ರಕ್ಕೆ ಬದ್ಧರಾಗಿ, ಶಾಲೆಯು ತನ್ನ ವಾರ್ಷಿಕ ನಾಣ್ಯಗಳು ಒಂದು ಕಾರಣ ಉಪಕ್ರಮದ ಭಾಗವಾಗಿ ಬೆಂಗಳೂರಿನ ಬನ್ನೇರುಘಟ್ಟ ಜೈವಿಕ ಉದ್ಯಾನವನದಲ್ಲಿ ಎರಡು ಕರಡಿಗಳನ್ನು ದತ್ತು ತೆಗೆದುಕೊಂಡಿದೆ. ವಿದ್ಯಾರ್ಥಿಗಳ ಕೊಡುಗೆಗಳ ಮೂಲಕ ಹಣವನ್ನು ಪಡೆದ ದತ್ತು ಸ್ವೀಕಾರವು ಅರ್ಥಪೂರ್ಣ ಬದಲಾವಣೆಯನ್ನು ತರುವಲ್ಲಿ ಸಣ್ಣ, ಸಾಮೂಹಿಕ ಕ್ರಿಯೆಗಳ ಶಕ್ತಿಗೆ ಸಾಕ್ಷಿಯಾಗಿದೆ. ವನ್ಯಜೀವಿ ಸಂರಕ್ಷಣೆ ಜಾಗತಿಕ ಆದ್ಯತೆಯಾಗಿರುವ ಸಮಯದಲ್ಲಿ, ಈ ಹಂತವು ತನ್ನ ಕಲಿಯುವವರಲ್ಲಿ ಸಹಾನುಭೂತಿಯನ್ನು ಬೆಳೆಸುವ, ಪರಿಸರವನ್ನು ರಕ್ಷಿಸುವ ಮತ್ತು ಜವಾಬ್ದಾರಿಯ ಮೌಲ್ಯಗಳನ್ನು ತುಂಬುವ ಓಡಬ್ಲ್ಯೂಐಎಸ್ ಸರ್ಜಾಪುರದ ಬದ್ಧತೆಯನ್ನು ಎತ್ತಿ ತೋರಿಸುತ್ತದೆ.

ಈ ಉಪಕ್ರಮದ ಭಾಗವಾಗಿ, ಓಡಬ್ಲ್ಯೂಐಎಸ್ ಸರ್ಜಾಪುರದ ಪ್ರಾಂಶುಪಾಲೆ ಶ್ರೀಮತಿ ಅಪರ್ಣಾ ಅಚಂತ ಅವರು ವಿದ್ಯಾರ್ಥಿ ಮಂಡಳಿಯ 34 ಸದಸ್ಯರೊಂದಿಗೆ ದತ್ತು ಸ್ವೀಕಾರ ಪತ್ರಗಳಿಗೆ ಅಧಿಕೃತವಾಗಿ ಸಹಿ ಹಾಕಲು ಮತ್ತು ದತ್ತು ಪಡೆದ ಕರಡಿಗಳನ್ನು ಭೇಟಿ ಮಾಡಲು ಮೃಗಾಲಯಕ್ಕೆ ಭೇಟಿ ನೀಡಿದರು.

ಈ ಭೇಟಿ ವಿದ್ಯಾರ್ಥಿಗಳಿಗೆ ಒಂದು ಸ್ಫೂರ್ತಿದಾಯಕ ಅನುಭವವಾಗಿದ್ದು, ಸಾಮೂಹಿಕ ಕ್ರಿಯೆಯು ಹೇಗೆ ವ್ಯತ್ಯಾಸವನ್ನುಂಟು ಮಾಡುತ್ತದೆ ಎಂಬುದರ ಬಗ್ಗೆ ಅವರಿಗೆ ನೇರವಾಗಿ ತಿಳುವಳಿಕೆಯನ್ನು ನೀಡಿತು. ಸಾರ್ವಜನಿಕ ಸಂವಹನಕ್ಕೆ ಕರಡಿಗಳ ಮರಿಗಳು ಸಿದ್ಧವಾದ ನಂತರ ಅವುಗಳನ್ನು ದತ್ತು ತೆಗೆದುಕೊಳ್ಳುವ ಯೋಜನೆಯನ್ನು ಶಾಲೆಯು ಘೋಷಿಸಿತು, ಇದು ಈ ಉದ್ದೇಶಕ್ಕಾಗಿ ದೀರ್ಘಾವಧಿಯ ಬದ್ಧತೆಯ ಆರಂಭವನ್ನು ಸೂಚಿಸುತ್ತದೆ.



ಉದಯವಾಹಿನಿ ಚಿತ್ರ



# ಲಿವರ್, ಕಿಡ್ನಿ ಆರೋಗ್ಯದಿಂದಿರ ಬೇಕಾದರೆ ಪ್ರತಿದಿನ ಈ 5 ನಿಮಿಷದ ಹ್ಯಾಕ್ ಅಭ್ಯಾಸ ಮಾಡಿಕೊಳ್ಳಿ

ನಮ್ಮ ಯಕೃತ್ತು ಮತ್ತು ಮೂತ್ರಪಿಂಡಗಳನ್ನು ರಕ್ಷಿಸಲು ಒಬ್ಬರು ಮಾಡಬಹುದಾದ ಸುಲಭವಾದ ಕೆಲಸಗಳು ಯಾವುವು, ಇವನ್ನು ಅನುಸರಿಸಿದರೆ ಯಕೃತ್ತು, ಕಿಡ್ನಿ ಆರೋಗ್ಯದಿಂದಿರುತ್ತದೆ. ಯಕೃತ್ತು ಮತ್ತು ಮೂತ್ರಪಿಂಡಗಳು ದೇಹದ ಅಂತರ್ನಿರ್ಮಿತ ನಿರ್ವಿಶೀಕರಣ ಕಾರಕಗಳಾಗಿವೆ, ವಿಷವನ್ನು ಫಿಲ್ಟರ್ ಮಾಡಲು, ಪೋಷಕಾಂಶಗಳನ್ನು ಸಂಸ್ಕರಿಸಲು ಇವು ಸಹಾಯ ಮಾಡುತ್ತವೆ. ಆದರೆ ಒತ್ತಡ, ಸಂಸ್ಕರಿಸಿದ ಆಹಾರಗಳು, ನಿರ್ಜಲೀಕರಣ ಮತ್ತು ಅನಾರೋಗ್ಯಕರ ಅಭ್ಯಾಸಗಳು ಕಾಲಾನಂತರದಲ್ಲಿ ಅವುಗಳ ಮೇಲೆ ಪರಿಣಾಮ ಬೀರಬಹುದು.

ಸಮಸ್ಯೆಗಳು ಕಾಣಿಸಿಕೊಳ್ಳುವವರೆಗೆ ಕಾಯುವ ಬದಲು, ಸಣ್ಣ ದೈನಂದಿನ ಅಭ್ಯಾಸಗಳು ಈ ಅಂಗಗಳನ್ನು ಆರೋಗ್ಯಕರವಾಗಿಡುವಲ್ಲಿ ಸಹಕಾರಿಯಾಗಿವೆ.



**ಕಿಬ್ಬೊಟ್ಟೆಯ ಪ್ರದೇಶವನ್ನು ಮಸಾಜ್ ಮಾಡಿ** ಯಕೃತ್ತು ಮತ್ತು ಮೂತ್ರಪಿಂಡದ ಪ್ರದೇಶದ ಸುತ್ತಲೂ ಸರಳವಾದ ಸ್ವಯಂ ಮಸಾಜ್ ರಕ್ತದ ಹರಿವನ್ನು ಉತ್ತೇಜಿಸುತ್ತದೆ. ದುಗ್ಧರಸ ಒಳಚರಂಡಿಯನ್ನು ಸುಧಾರಿಸುತ್ತದೆ, ನಿರ್ವಿಶೀಕರಣವನ್ನು ಉತ್ತೇಜಿಸುತ್ತದೆ.



ಉದಯವಾಹಿನಿ ಚಿತ್ರ

**ಮಸಾಜ್ ಮಾಡುವುದು ಹೇಗೆ:** ಅಂಗೈಗಳನ್ನು ಹೊಟ್ಟೆಯ ಬಲಭಾಗದಲ್ಲಿ ಇರಿಸಿ, ಸುಮಾರು ಎರಡು ನಿಮಿಷಗಳ ಕಾಲ ಸೌಮ್ಯವಾದ, ವೃತ್ತಾಕಾರದ ಚಲನೆಗಳಲ್ಲಿ ಮಸಾಜ್ ಮಾಡಿ.

ಕೆಳ ಬೆನ್ನಿನ ಕಡೆಗೆ ಸರಿಸಿ ಮೂತ್ರಪಿಂಡದ ಪ್ರದೇಶದ ಸುತ್ತಲೂ ಲಘು ಒತ್ತಡವನ್ನು ಹಾಕಿ. ರಕ್ತ ಪರಿಚಲನೆ ಮತ್ತು ವಿಶ್ರಾಂತಿಯನ್ನು ಹೆಚ್ಚಿಸಲು ನಿಧಾನವಾಗಿ, ಆಳವಾದ ಉಸಿರನ್ನು ತೆಗೆದುಕೊಳ್ಳುವ ಪ್ರಕ್ರಿಯೆಯನ್ನು ಪುನರಾವರ್ತಿಸಿ. ಈ ತ್ವರಿತ ಅಭ್ಯಾಸವು ಈ ಅಂಗಗಳಲ್ಲಿನ ದಟ್ಟಣೆಯನ್ನು ಕಡಿಮೆ ಮಾಡಲು ಮತ್ತು ಕಾಲಾನಂತರದಲ್ಲಿ ಅದರ ಕಾರ್ಯವನ್ನು ಸುಧಾರಿಸಲು ಸಹಾಯ ಮಾಡುತ್ತದೆ.

**ಸೋಂಪು ಬೀಜಗಳನ್ನು ಅಗಿಯಿರಿ:** ಫೆನ್ನೆಲ್ ಬೀಜಗಳು ಜೀರ್ಣಕ್ರಿಯೆಗೆ ನೈಸರ್ಗಿಕ ಪರಿಹಾರವಾಗಿದೆ, ಆದರೆ ಅವು ಯಕೃತ್ತು ಮತ್ತು ಮೂತ್ರಪಿಂಡಗಳ ಮೇಲೆ ಪ್ರಬಲವಾದ ನಿರ್ವಿಶೀಕರಣ ಪರಿಣಾಮಗಳನ್ನು ಹೊಂದಿವೆ. ಈ ಸಣ್ಣ ಬೀಜಗಳು ಹೆಚ್ಚುವರಿ ದ್ರವಗಳನ್ನು ಹೊರಹಾಕಲು, ಹೊಟ್ಟೆ ಉಬ್ಬುವಿಕೆಯನ್ನು ಕಡಿಮೆ ಮಾಡಲು, ದೇಹದಲ್ಲಿ ವಿಷದ ಶೇಖರಣೆಯನ್ನು ತಡೆಯಲು ಸಹಾಯ ಮಾಡುತ್ತದೆ. ಊಟದ ನಂತರ ಅಥವಾ ಬೆಳಿಗ್ಗೆ ಮೊದಲ ಬಾರಿಗೆ ಅರ್ಧ ಟೀಚಮಚ ಸೋಂಪು ಬೀಜಗಳನ್ನು ಅಗಿಯುವುದು ಉತ್ತಮ ಯಕೃತ್ತಿನ ನಿರ್ವಿಶೀಕರಣಕ್ಕಾಗಿ ಪಿತ್ತರಸ ಉತ್ಪಾದನೆಯನ್ನು ಉತ್ತೇಜಿಸುತ್ತದೆ ಮೂತ್ರಪಿಂಡಗಳನ್ನು ಶುದ್ಧೀಕರಿಸಲು ನೈಸರ್ಗಿಕ ಮೂತ್ರವರ್ಧಕವಾಗಿ ಕಾರ್ಯನಿರ್ವಹಿಸುತ್ತದೆ ಎರಡೂ ಅಂಗಗಳ ಮೇಲೆ ಪರಿಣಾಮ ಬೀರುವ ಆಕ್ಸಿಡೇಟಿವ್ ಒತ್ತಡವನ್ನು ಕಡಿಮೆ ಮಾಡುತ್ತದೆ. ಫೆನ್ನೆಲ್ ಬೀಜಗಳನ್ನು ರಾತ್ರಿಯಿಡೀ ನೀರಿನಲ್ಲಿ ನೆನೆಸಿ ದಿನವಿಡೀ ಕುಡಿಯಬಹುದು, ಇದು ಜಲಸಂಚಯನ ಮತ್ತು ವಿಷವನ್ನು ತೆಗೆದುಹಾಕಲು ಸಹಾಯ ಮಾಡುತ್ತದೆ.

**ಆಕ್ಯುಪ್ರೆಶರ್ ಪಾಯಿಂಟ್‌ಗಳ ಮೇಲೆ ಟ್ಯಾಪ್ ಮಾಡಿ:** ಯಕೃತ್ತು ಮತ್ತು ಮೂತ್ರಪಿಂಡದ ಆರೋಗ್ಯಕ್ಕೆ ಸಂಬಂಧಿಸಿದ ಆಕ್ಯುಪ್ರೆಶರ್ ಪಾಯಿಂಟ್‌ಗಳನ್ನು ಪ್ರತಿದಿನ ಕೆಲವು ನಿಮಿಷಗಳ ಕಾಲ ನಿಧಾನವಾಗಿ ಒತ್ತಿ. ಇದು ಅಂಗಾಂಗ ಕಾರ್ಯ ಮತ್ತು ನಿರ್ವಿಶೀಕರಣವನ್ನು ಸುಧಾರಿಸಲು ರಿಫ್ಲೆಕ್ಸಾಲಜಿ ಮತ್ತು ಅಕ್ಯುಪಂಕ್ಚರ್‌ನಲ್ಲಿ ಈ ಅಭ್ಯಾಸವನ್ನು ಬಳಸಲಾಗುತ್ತದೆ.

**ಗುರಿಮಾಡಬೇಕಾದ ಪ್ರಮುಖ ಅಂಶಗಳು:** ಯಕೃತ್ತು 3 (LV3) – ಹೆಬ್ಬೆರಳು ಮತ್ತು ಎರಡನೇ ಕಾಲ್ಬೆರಳಿನ ನಡುವೆ ಇರುವ ಈ ಬಿಂದುವನ್ನು ಒತ್ತುವುದರಿಂದ ಯಕೃತ್ತಿನ ಶಕ್ತಿಯ ಹರಿವು ಮತ್ತು ಜೀರ್ಣಕ್ರಿಯೆಯನ್ನು ಸುಧಾರಿಸಲು ಸಹಾಯ ಮಾಡುತ್ತದೆ. ಕಿಡ್ನಿ 1 (KD1) – ಪಾದದ ಅಡಿಭಾಗದಲ್ಲಿ ಕಂಡುಬರುವ ಈ ಬಿಂದುವನ್ನು ಒತ್ತುವುದರಿಂದ ಮೂತ್ರಪಿಂಡದ ಕಾರ್ಯವು ಹೆಚ್ಚಾಗುತ್ತದೆ ಮತ್ತು ಆಯಾಸ ಕಡಿಮೆಯಾಗುತ್ತದೆ. ಪ್ರತಿ ದಿನ ಒಂದು ಅಥವಾ ಎರಡು ನಿಮಿಷಗಳ ಕಾಲ ಈ ಬಿಂದುಗಳನ್ನು ಮಸಾಜ್ ಮಾಡುವುದರಿಂದ ವಿಷದ ಮಿತಿಮೀರಿದ ಪ್ರಮಾಣವನ್ನು ಕಡಿಮೆ ಮಾಡಲು, ರಕ್ತ ಪರಿಚಲನೆ ಸುಧಾರಿಸಲು ಮತ್ತು ಶಕ್ತಿಯ ಮಟ್ಟವನ್ನು ಹೆಚ್ಚಿಸಲು ಸಹಾಯ ಮಾಡುತ್ತದೆ.

# ಪ್ರಯಾಣಿಕನಿಗೆ ಕಪಾಳಮೋಕ್ಷ ಮಾಡಿದ ಬಿಎಂಟಿಸಿ ಬಸ್ ಕಂಡೆಕ್ಟರ್

• ಉದಯವಾಹಿನಿ ಬೆಂಗಳೂರು


ಟಿಕೆಟ್ ಪಡೆಯದೇ ಬಿಎಂಟಿಸಿ ಬಸ್ ನಲ್ಲಿ ಪ್ರಯಾಣಿಸುತ್ತಿದ್ದ ಪ್ರಯಾಣಿಕನಿಗೆ ಕಂಡಕ್ಟರ್ ಕಪಾಳಮೋಕ್ಷ ಮಾಡಿದ ವಿಡಿಯೋ ವೈರಲ್ ಆಗಿದೆ.

ಬಿಎಂಟಿಸಿ ಬಸ್ನಲ್ಲಿ ದೇವನಹಳ್ಳಿಯಿಂದ ಮೆಜೆಸ್ಟಿಕ್‌ಗೆ ಈಶಾನ್ಯ ಭಾರತದ ಮೂಲದ ಯುವಕ ಟಿಕೆಟ್ ಪಡೆಯದೇ ಪ್ರಯಾಣಿಸುತ್ತಿದ್ದನು. ಇನ್ನು ಟಿಕೆಟ್ ತಪಾಸಣೆ ತಂಡ ಬಸ್ ನಿಲ್ಲಿಸಿ ಪ್ರಯಾಣಿಕರ ಟಿಕೆಟ್ ಪರಿಶೀಲಿಸಿದ್ದಾರೆ. ಆಗ ಯುವಕ ಸಿಕ್ಕಿಬಿದ್ದಿದ್ದು 420 ರೂಪಾಯಿ ದಂಡ ಸಹ ಕಟ್ಟಿದ್ದಾನೆ. ಇನ್ನು ಟಿಕೆಟ್ ಕೊಡದಿದ್ದಕ್ಕೆ ಬಸ್ ಕಂಡೆಕ್ಟರ್ ಗೂ ದಂಡ ವಿಧಿಸಿದ್ದಾರೆ. ಇದರಿಂದ ಕೋಪಗೊಂಡ ಕಂಡಕ್ಟರ್ ಪ್ರಯಾಣಿಕನಿಗೆ ಕಪಾಳಮೋಕ್ಷ ಮಾಡಿದ್ದಾನೆ.

ಈ ವಿಡಿಯೋ ಅಪ್ಲೋಡ್ ಮಾಡಿರುವ ಪ್ರಯಾಣಿಕ ಕಂಡಕ್ಟರ್ ಬಳಿ ಹೋಗಿ ನಾನೇ ಟಿಕೆಟ್ ಖರೀದಿಸಬೇಕು ಎಂದು ತಿಳಿದಿರಲಿಲ್ಲ. ಕಂಡೆಕ್ಟರ್ ಬರುತ್ತಾರೆ ಎಂದು ಕಾಯುತ್ತಿದೆ. ಅಷ್ಟರಲ್ಲೇ ತಪಾಸನೆ ತಂಡ ಬಸ್ ಗೆ ಕೈಹಾಕಿತ್ತು ಎಂದು ಬರೆದುಕೊಂಡಿದ್ದಾರೆ. ಈ ಸಂಬಂಧ ದೂರು ದಾಖಲಾಗಿದೆ ಎಂದು ಬಿಎಂಟಿಸಿ ಹೇಳಿದೆ. ಈ ಘಟನೆಯು ಸಾಮಾಜಿಕ ಮಾಧ್ಯಮದಲ್ಲಿ ವಿವಾದವನ್ನು ಹುಟ್ಟುಹಾಕಿದ್ದು ಪ್ರಯಾಣಿಕರು ದಾಳಿಯನ್ನು ಖಂಡಿಸಿದ್ದಾರೆ. ಅಲ್ಲದೆ ಕಂಡಕ್ಟರ್ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದ್ದಾರೆ.



ಉದಯವಾಹಿನಿ ಚಿತ್ರ



ರಾಮಾಯಣ

ಸೀತಾದೇವಿಯು ಶ್ರೀರಾಮನಿಗೆ ಅಹಿಂಸಾ ಧರ್ಮವನ್ನು ಹೇಳಿದ್ದು

• ಹಿಂದಿನ ಸಂಚಿಕೆಯಿಂದ

## 119 ನೆಯ ಅಧ್ಯಾಯ

ಖಡ್ಗಪಾಣಿಯಾಗಿರಲು ಒಂದೊಂದು ಸಮಯದಲ್ಲಿ ಕೋಪಹುಟ್ಟಿ ತಪಸ್ಸನ್ನು ಬಿಟ್ಟು ಕ್ರೂರಬುದ್ಧಿಯಿಂದಿರುತ್ತಿದ್ದನು. ಹಾಗೆ ಶಸ್ತ್ರಪಾಣಿಯಾದ್ದರಿಂದ ಕ್ರೂರಕರ್ಮಗಳನ್ನು ಮಾಡುತ್ತ ದಿನದಿನಕ್ಕೂ ಧರ್ಮವು ಕ್ಷಯವಾಗಿ ಕಡೆಯಲ್ಲಿ ಆತನು ನರಕವನ್ನೋದಿದನು. ಅಗ್ನಿಸಂಯೋಗದಂತೆ ಶಸ್ತ್ರಸಂಯೋಗವು ಕೋಪವನ್ನು ಹುಟ್ಟಿಸದೆ ಸುಮ್ಮನಿರದು.

ಈ ವಿಷಯವನ್ನು ನಾನು ನಿನಗೆ ಸ್ನೇಹಾತಿಶಯದಿಂದಲೂ ನಿನ್ನ ಮೇಲಿನ ಸಂಮಾನದಿಂದಲೂ ಅರಿಕೆಮಾಡಿದೆನಲ್ಲದೆ ಬುದ್ಧಿ ಹೇಳುವುದಕ್ಕಲ್ಲ. ಆದ್ದರಿಂದ ರಾಕ್ಷಸರನ್ನು ಕೊಲ್ಲಬೇಕೆಂದೆಣಿಸಬೇಡ. ಅಪರಾಧವಿಲ್ಲದೆ ಒಬ್ಬರನ್ನು ಕೊಲ್ಲುವ ಪ್ರಾಣಿಗಳಿಗೆ ಪುಣ್ಯಲೋಕಗಳಿಲ್ಲವೆಂಬ ಧರ್ಮಶಾಸ್ತ್ರವುಂಟು. ವನವಾಸವೆಂದರೇನು ಆಯುಧವೆಂದರೇನು ಪರಾಕ್ರಮವೆಂದರೇನು ತಪಸ್ಸೆಂದರೇನು! ನಾವು ದೇಶಕಾಲಗಳನ್ನು ವಿಚಾರಿಸಿ ನಡೆಯಬೇಕು. ಲೋಕದಲ್ಲಿ ಆಯುಧಪಾಣಿಯಾದವನಿಗೆ ಕ್ರೂರಬುದ್ಧಿಯ ಹುಟ್ಟುವುದೆಂಬುದು ಸತ್ಯ ನಾವು ಈ ವನವಾಸಮಿತಿಯನ್ನು ತೀರಿಸಿಕೊಂಡು ತಿರುಗಿ ಅಯೋಧ್ಯಾಪಟ್ಟಣಕ್ಕೆ ಹೋದ ಮೇಲೆ ಮಲೆತ ಶತ್ರುಗಳಮೇಲೆ ಕ್ಷತ್ರಿಯಧರ್ಮವನ್ನು ತೋರಿಸು. ನಾವು ಮುನಿವೇಷದಲ್ಲಿ ವನದಲ್ಲಿರುವಾಗ ಮುನಿಧರ್ಮವನ್ನೇ ಅನುಸರಿಸಿಕೊಂಡಿರಬೇಕು. ಧರ್ಮದಿಂದಲೇ ಅರ್ಥವು ಸಂಭವಿಸುವುದು. ಧರ್ಮದಿಂದಲೇ ಸುಖವುಂಟಾಗುವುದು. ಸಮಸ್ತ ಪ್ರಯೋಜನಗಳೂ ಧರ್ಮದಿಂದಲೇ ಸಾಧ್ಯವಾಗುವುವು. ಈ ಜಗತ್ತೆಲ್ಲವೂ ಧರ್ಮಾಧಾರವಾಗಿಯೇ ಇರುವುದು. ಮನುಷ್ಯನು ಪ್ರತೋಪವಾಸನಿಯಮಗಳಿಂದಲೂ ಮನೋನಿಗ್ರಹದಿಂದಲೂ ಧರ್ಮವನ್ನು ಸಂಪಾದಿಸಿದರೆ ಆ ಧರ್ಮದಿಂದ ಸುಖವುಂಟಾಗುವುದಲ್ಲದೆ ವಿಷಯಭೋಗದಿಂದ ಸುಖವುಂಟಾಗಲಾರದು. ಶ್ರೀರಾಮ ಲೋಕತ್ರಯದಲ್ಲೂ ನೀನರಿಯದ ವೃತ್ತಾಂತವಿಲ್ಲ. ನಾನು ಸ್ತ್ರೀಚಾಪಲ್ಯದಿಂದ ನಿನಗೆ ಬಿನ್ನಹಮಾಡಿದೆನಲ್ಲದೆ ನಿನಗೆ ಧರ್ಮರಹಸ್ಯವನ್ನು ತಿಳುಹಿಸುವುದಕ್ಕೆ ಸಮರ್ಥಳಲ್ಲ! ನಿನ್ನ ತಮ್ಮನಾದ ಲಕ್ಷ್ಮಣನೊಡನೆ ಯೋಚನೆಮಾಡಿ ನಿನ್ನ ಚಿತ್ರಕ್ಕೆ ಸರಿಬಂದಂತೆ ಕಾರ್ಯದಲ್ಲಿ ಪ್ರವರ್ತಿಸು ಎಂದು ಬಿನ್ನಹಮಾಡಿದಳು.

**ಶ್ರೀರಾಮನು ಸೀತಾದೇವಿಗೆ ತನ್ನ ಧರ್ಮವನ್ನು ತಿಳಿಸಿದ್ದು**

ಆಮೇಲೆ ಸಕಲ ರಹಸ್ಯಗಳನ್ನೂ ಬಲ್ಲವನಾದ ಶ್ರೀರಾಮನು ಧರ್ಮಪ್ರತಿಪಾದಕವಾದ ಸೀತಾದೇವಿಯ ಮಾತನ್ನು ಕೇಳಿ ಆಕೆಯನ್ನು ಕುರಿತು ಹೀಗೆ ಹೇಳಿದನು ಜಾನಕಿ, ನೀನು ನನಗೆ ಹಿತವಾಗಿ ಹೇಳಿದೆಯಲ್ಲದೆ ಮತ್ತೊಂದಲ್ಲ. ನೀನು ಉತ್ತಮವಂಶದಲ್ಲಿ ಹುಟ್ಟಿದವಳು. ಹೀಗೆ ನಿನ್ನಂತೆ ಯುಕ್ತವಾದ ಮಾತನ್ನು ಹೇಳುವವರಾರು ಹಾಗಾದರೂ ನನ್ನ ಮಾತನ್ನು ಕೇಳು ಲೋಕದಲ್ಲಿ ಕ್ಷತ್ರಿಯರು ತಾವಾಳುವ ರಾಜ್ಯದಲ್ಲಿ ಆರ್ತಧ್ವನಿಯು ಕೇಳಿಸಬಾರದೆಂದು ಬಿಲ್ಲುಬಾಣಗಳನ್ನು ಧರಿಸಿರುವರು. ದಂಡಕಾರಣ್ಯದಲ್ಲಿ ವ್ರತಸ್ಥರಾದ ಮುನಿಗಳು ರಾಕ್ಷಸರಿಂದ ಕಂಗೆಟ್ಟು ಮೊರೆಯಿಡುತ್ತ ನನ್ನ ಮರೆಹೊಕ್ಕರು.

ಮುಂದುವರಿಯುವುದು...

# ಟೀ ಕುಡಿದರೂ ಕ್ಯಾನ್ಸರ್ ಬರುತ್ತೆ!



ಟೀ ಕುಡಿದರೂ ಕ್ಯಾನ್ಸರ್ ಬರಬಹುದು! ಹೀಗೆ ಮಾಡಿದರೆ ಅಪಾಯ ಖಚಿತ. ನಮ್ಮ ದಿನಚರಿ ಬೆಳಗಿನ ಬಿಸಿ ಟೀ ಅಥವಾ ಕಾಫಿ ಇಲ್ಲದೆ ಪ್ರಾರಂಭವಾಗುವುದೇ ವಿರಳ. ಅನೇಕರಿಗೆ ನಿದ್ರೆಯಿಂದ ಎದ್ದ ಕೂಡಲೇ ಟೀ ಅಥವಾ ಕಾಫಿ ಕುಡಿಯುವ ಅಭ್ಯಾಸ ಇರುತ್ತದೆ. ಇದು ನಮ್ಮ ಜೀವನ ಶೈಲಿಯ ಅಂಗವಾಗಿ ಬೆಳೆದಿರುವ ಪದ್ಧತಿ. ನಿಜ ಹೇಳಬೇಕಾದರೆ, ಒಂದು ಕಪ್ ಟೀ ಬೆಳಗಿನ ಸುಸ್ತನ್ನು ದೂರ ಮಾಡಿ ತಾಜಾತನವನ್ನು ಕೊಡುತ್ತದೆ. ಆದರೆ, ಅದೇ ಟೀ ಅಥವಾ ಕಾಫಿಯನ್ನು ಖಾಲಿ ಹೊಟ್ಟೆಯಲ್ಲಿ, ಹೆಚ್ಚಾಗಿ ಬಿಸಿ ಬಿಸಿ ಆಗಿರುವಾಗ ಕುಡಿಯುವುದು ಆರೋಗ್ಯಕ್ಕೆ ದೊಡ್ಡ ಅಪಾಯ ತಂದುಕೊಡುತ್ತದೆ ಎಂದು ತಜ್ಞರು ಎಚ್ಚರಿಕೆ ನೀಡಿದ್ದಾರೆ.

**ಅಧ್ಯಯನ ಏನು ಹೇಳುತ್ತದೆ:** ಇತ್ತೀಚೆಗೆ ಯುಕೆ ಬಯೋಬ್ಯಾಂಕ್, ಅಮೇರಿಕಾದ ನ್ಯಾಷನಲ್ ಕ್ಯಾನ್ಸರ್ ಇನ್ಸ್ಟಿಟ್ಯೂಟ್ ಸಹಭಾಗಿತ್ವದಲ್ಲಿ ಒಂದು ಅಧ್ಯಯನ ನಡೆದಿದೆ. ಇದರಲ್ಲಿ ಸುಮಾರು 5 ಲಕ್ಷ ಮಂದಿಯ ಮೇಲೆ ಸಂಶೋಧನೆ ನಡೆಸಲಾಗಿದೆ. ಇದರ ಪ್ರಕಾರ, ದಿನಕ್ಕೆ 8 ರಿಂದ 10 ಕಪ್‌ಗಳಷ್ಟು ಬಿಸಿ ಟೀ ಕುಡಿಯುವವರಲ್ಲಿ ಅನ್ನನಾಳದ ಕ್ಯಾನ್ಸರ್ ಅಪಾಯ ಹೆಚ್ಚಿರುವುದು ಪತ್ತೆಯಾಗಿದೆ.

ವಿಶೇಷವಾಗಿ, ನೀವು ಸೇವಿಸುವ ಪಾನೀಯದ ತಾಪಮಾನ ಜಾಸ್ತಿಯಾದಂತೆ ಅಪಾಯವೂ ಹೆಚ್ಚಾಗುತ್ತದೆ ಎಂದು ವಿಜ್ಞಾನಿಗಳು ಹೇಳಿದ್ದಾರೆ.

> **ಸುಮಾರು 5 ಲಕ್ಷ ಮಂದಿಯ ಮೇಲೆ ಸಂಶೋಧನೆ**

ಆರಂಭಿಕ ಹಂತದಲ್ಲಿ ಈ ಸಮಸ್ಯೆ ಸಾಮಾನ್ಯ ಆಮ್ಲತೆ, ಹೃದಯದ ಹುರಿ, ಕೆಮ್ಮು ಎಂದು ತೋರಿಸಿಕೊಳ್ಳಬಹುದು. ಬಹುತೇಕ ಜನರು ಇದನ್ನು ನಿರ್ಲಕ್ಷ್ಯ ಮಾಡುತ್ತಾರೆ. ಆದರೆ ಮುಂದೆ ಅದು ಆಹಾರ ನುಂಗುವಲ್ಲಿ ತೊಂದರೆ, ಹೃದಯ ನೋವು, ಧ್ವನಿಯಲ್ಲಿ ಬದಲಾವಣೆ, ನಿರಂತರ ಕೆಮ್ಮು ಮುಂತಾದ ಲಕ್ಷಣಗಳಿಂದ ಸ್ಪಷ್ಟವಾಗುತ್ತದೆ. ಇಂತಹ ಲಕ್ಷಣಗಳು ಕಂಡುಬಂದಲ್ಲಿ ತಕ್ಷಣವೇ ವೈದ್ಯರನ್ನು ಸಂಪರ್ಕಿಸುವುದು ಅತ್ಯಂತ ಮುಖ್ಯ.

**ತಜ್ಞರ ಸಲಹೆಗಳು:** ಮುನ್ನೆಚ್ಚರಿಕೆ, ತಡೆಗಟ್ಟುವಿಕೆ

**ತಣ್ಣಗಾಗಿಸಿ ಕುಡಿಯಿರಿ:** ಬಿಸಿ ಪಾನೀಯ ಕುಡಿಯುವ ಮೊದಲು ಸ್ವಲ್ಪ ತಣ್ಣಗಾಗಲು ಬಿಡಿ. ಸೌಕರ್ಯವಾಗಿ ಕುಡಿಯಬಹುದಾದ ತಾಪಮಾನದಲ್ಲಿ' ಇರುವುದು ಮುಖ್ಯ.

**ಧೂಮಪಾನ, ಮದ್ಯಪಾನ ತ್ಯಜಿಸಿ:** ಧೂಮಪಾನ, ಮದ್ಯಪಾನ ಮತ್ತು ತಂಬಾಕು ಸೇವನೆ ಸಂಪೂರ್ಣವಾಗಿ ತಪ್ಪಿಸಬೇಕು.

**ಆಮ್ಲೀಯತೆಗೆ ಚಿಕಿತ್ಸೆ:** ನಿರಂತರ ಆಮ್ಲತೆ ಅಥವಾ ಹೊಟ್ಟೆಯ ಸಮಸ್ಯೆಗಳಿದ್ದರೆ ತಕ್ಷಣ ಚಿಕಿತ್ಸೆ ಪಡೆಯಬೇಕು.

**ಆರೋಗ್ಯಕರ ಜೀವನಶೈಲಿ:** ನಿಯಮಿತ ವ್ಯಾಯಾಮ ಮಾಡಿ, ಆರೋಗ್ಯಕರ ಆಹಾರ ಸೇವಿಸಿ, ತೂಕವನ್ನು ನಿಯಂತ್ರಣದಲ್ಲಿಡಬೇಕು.

**ಬಿಸಿ ಟೀ ಅಥವಾ ಕಾಫಿಯಿಂದ ಕ್ಯಾನ್ಸರ್ ಹೇಗೆ ಬರುತ್ತದೆ**

- ಅತಿಯಾಗಿ ಬಿಸಿ ಟೀ ಅಥವಾ ಕಾಫಿ ನಮ್ಮ ಆಹಾರ ನಾಳದಲ್ಲಿನ ಸೂಕ್ಷ್ಮ ಕಣಗಳನ್ನು ಸುಡುತ್ತದೆ.
- ಪ್ರಾರಂಭದಲ್ಲಿ ಅಲ್ಲಿ ಗಾಯ ಅಥವಾ ಉರಿಯೂತ ಉಂಟಾಗುತ್ತದೆ.
- ನಿಧಾನವಾಗಿ ಆ ಭಾಗದ ಕಣಗಳು ಹಾನಿಗೊಳಗಾಗಿ ಟಿಷ್ಯೂ ದೋಷಗಳು ಕಂಡುಬರುತ್ತವೆ.
- ಕಾಲಕ್ರಮೇಣ ಇವು ಕ್ಯಾನ್ಸರ್‌ಗಾಗಿ ಮಾರ್ಪಡಬಹುದಾದ ಸಾಧ್ಯತೆ ಇದೆ.

**ಮಿತವಾಗಿ ಸೇವಿಸಿ:** ದಿನಕ್ಕೆ ಹೆಚ್ಚಿನ ಪ್ರಮಾಣದ ಟೀ ಅಥವಾ ಕಾಫಿ ಕುಡಿಯುವುದನ್ನು ಬಿಟ್ಟು ಮಿತವಾಗಿ ಸೇವಿಸಬೇಕು.

ಒಟ್ಟಾರೆಯಾಗಿ, ಟೀ ಅಥವಾ ಕಾಫಿ ಸೇವನೆ ಬೇಡ ಎಂಬುವುದೇ ಸಮಸ್ಯೆಯಲ್ಲ. ನಿಜವಾದ ಅಪಾಯ ಅದು ಎಷ್ಟು ಬಿಸಿ ಇದೆ ಎನ್ನುವುದರಲ್ಲಿ ಅಡಗಿದೆ. ಅತಿಯಾಗಿ ಬಿಸಿ ಟೀ ಅಥವಾ ಕಾಫಿ ಕುಡಿಯುವುದರಿಂದ ಅನ್ನನಾಳದ ಆರೋಗ್ಯ ಹಾಳಾಗಿ, ಕ್ಯಾನ್ಸರ್ ಅಪಾಯವನ್ನು ಹೆಚ್ಚಿಸುತ್ತದೆ. ಆದ್ದರಿಂದ, ಇನ್ಮುಂದೆ ಬೆಳಗಿನ ಕಪ್ ಟೀ ಹಿಡಿದಾಗ, ಅದನ್ನು ಸ್ವಲ್ಪ ತಣ್ಣಗಾದ ಬಳಿಕವೇ ಕುಡಿಯಿರಿ. ಇದರಿಂದ ನಿಮ್ಮ ಆರೋಗ್ಯ, ಶಕ್ತಿ ಮತ್ತು ಆಯುಷ್ಯ ಕಾಪಾಡಿಕೊಳ್ಳಬಹುದು.

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಬೆಳಿಗ್ಗೆ | 07:30 ರಿಂದ 09:00 |
| ಗುಳಿಕ ಕಾಲ | ಮಧ್ಯಾಹ್ನ | 01:30 ರಿಂದ 03:00 |
| ಯಮಗಂಡ ಕಾಲ | ಬೆಳಿಗ್ಗೆ | 10:30 ರಿಂದ 12:00 |

**ಮೇಷ** ನಿಮ್ಮ ಕೆಟ್ಟ ಚಟಗಳು ನಿಮ್ಮನ್ನು ನಾಶಗೊಳಿಸುತ್ತವೆ. ಹಣದ ಚಲನೆ ದಿನವಿಡೀ ಮುಂದುವರಿಯುತ್ತದೆ, ದಿನದ ಅಂತ್ಯದ ನಂತರ ನೀವು ಉಳಿಸಲು ಸಾಧ್ಯವಾಗುತ್ತದೆ. ನೀವು ಮಕ್ಕಳು ಅಥವಾ ನಿಮಗಿಂತ ಕಡಿಮೆ ಅನುಭವಿಯಾಗಿರುವವರ ಜೊತೆ ತಾಳ್ಮೆಯಿಂದಿರಬೇಕು. ಪ್ರೀತಿಪಾತ್ರರಲ್ಲದೇ ನಿಮ್ಮ ಸಮಯ ಕೊಲ್ಲುವುದು ಕಷ್ಟ.

**ವೃಷಭ** ಹೊರಾಂಗಣ ಕ್ರೀಡೆ ನಿಮ್ಮನ್ನು ಸೆಳೆಯುತ್ತದೆ–ಧ್ಯಾನ, ಯೋಗ ಲಾಭ ತರುತ್ತವೆ. ಇಂದು ನೀವು ಯಾವುದೇ ಅಜ್ಞಾತ ಮೂಲಗಳಿಂದ ಹಣವನ್ನು ಪಡೆಯಬಹುದು, ಇದರಿಂದ ನಿಮ್ಮ ಅನೇಕ ಆರ್ಥಿಕ ಸಮಸ್ಯೆಗಳು ದೂರವಾಗುತ್ತವೆ. ನಿಮ್ಮ ಹಾಸ್ಯದ ಪ್ರಕೃತಿ ನಿಮ್ಮ ಸುತ್ತಮುತ್ತಲಿನ ಪರಿಸರವನ್ನು ಬೆಳಗಿಸುತ್ತದೆ.

**ಮಿಥುನ** ನಿಮ್ಮ ನಿರೀಕ್ಷೆಗಳನ್ನು ಪೂರೈಸಲು ವೈಯಕ್ತಿಕ ಸಂಬಂಧಗಳನ್ನು ದುರ್ಬಳಕೆ ಮಾಡುವುದು ನಿಮ್ಮ ಪತ್ನಿಗೆ ಕೋಪ ಬರಿಸುತ್ತದೆ. ನಿಮ್ಮ ತಾಯಿಯ ಬದಿಯಿಂದ ಇಂದು ಹಣಕಾಸಿನ ಲಾಭವನ್ನು ಪಡೆಯುವ ಪೂರ್ಣ ಸಾಧ್ಯತೆ ಇದೆ.ನಿಮ್ಮ ಮಾಮ ಅಥವಾ ತಾತ ನಿಮಗೆ ಆರ್ಥಿಕ ಬೆಂಬಲ ಮಾಡಬಹುದು.

**ಕರ್ಕಾಟಕ** ನಿಮ್ಮ ಚಿಂತನೆ ಮತ್ತು ಶಕ್ತಿಯನ್ನು ನೀವು ವಾಸ್ತವವಾಗಿ ಏನನ್ನು ನೋಡಬಯಸುತ್ತೀರೋ ಅದನ್ನು ಸಾಧಿಸುವಲ್ಲಿ ನಿರ್ದೇಶಿಸಿ. ಇದುವರೆಗೆ ನಿಮ್ಮ ಸಮಸ್ಯೆಯೆಂದರೆ ನೀವು ಪ್ರಯತ್ನಿಸದೇ ಕೇವಲ ಆಸೆಪಡುತ್ತೀರಿ. ನೀವು ನಿಮ್ಮ ಮನೆಯ ಯಾವುದೇ ಸದಸ್ಯರಿಂದ ಹಣವನ್ನು ಸಾಲ ತೆಗೆದುಕೊಂಡಿದ್ದರೆ ಅದನ್ನು ಇಂದು ಮರುಪಾವತಿಸಿ.

**ಸಿಂಹ** ಇದು ನಿಮ್ಮ ಆರೋಗ್ಯದ ಬಗ್ಗೆ ಚಿಂತಿಸಬೇಕಾಗಿಲ್ಲ. ನಿಮ್ಮ ಸುತ್ತಲಿನ ಜನರು ನಿಮ್ಮ ಸ್ಥೈರ್ಯ, ಚೈತನ್ಯಗಳನ್ನು ಹೆಚ್ಚಿಸುತ್ತಾರೆ. ನೀವು ವಿಪರೀತವಾಗಿ ಖರ್ಚು ಮಾಡುವುದನ್ನು ನಿಲ್ಲಿಸಿದಾಗ ಮಾತ್ರ ನಿಮ್ಮ ಹಣವು ನಿಮ್ಮ ಕೆಲಸಕ್ಕೆ ಬರುತ್ತದೆ, ಇಂದು ನೀವು ಈ ವಿಷಯವನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಬಹುದು.

**ಕನ್ಯಾ** ನಿಮ್ಮ ಒರಟು ವರ್ತನೆ ನಿಮ್ಮ ಪತ್ನಿಯೊಂದಿಗಿನ ಸಂಬಂಧವನ್ನು ಹಾಳು ಮಾಡಬಹುದು. ಏನಾದರೂ ಬಾಲಿಶವಾದದ್ದನ್ನು ಮಾಡುವ ಮೊದಲು ನಿಮ್ಮ ವರ್ತನೆಯ ಪರಿಣಾಮದ ಬಗ್ಗೆ ಆಲೋಚಿಸಿ. ಸಾಧ್ಯವಾದಲ್ಲಿ ದೂರ ಹೋಗಿ ನಿಮ್ಮ ಮನಸ್ಥಿತಿಯನ್ನು ಬದಲಾಯಿಸಿ. ಮನೆಯ ಸಣ್ಣ ವಸ್ತುಗಳ ಮೇಲೆ ನಿಮ್ಮ ಸಾಕಷ್ಟು ಹಣ ಹಾಳಾಗಬಹುದು,

**ತುಲಾ** ನಿಮ್ಮಲ್ಲಿ ಕೆಲವರು ಇದು ಇಂದು ಬಲವಂತವಾಗಿ ಪ್ರಮುಖ ನಿರ್ಧಾರಗಳನ್ನು ಕೈಗೊಳ್ಳಬೇಕಾಗಬಹುದು, ಇದು ನಿಮ್ಮನ್ನು ಉದ್ವೇಗಭರಿತರನ್ನಾಗಿಯೂ ಹಾಗೂ ಗಾಬರಿಯಿರುವವರನ್ನಾಗಿಯೂ ಮಾಡಬಹುದು. ಕೆಲವರಿಗೆ ಪ್ರಯಾಣದ ಗಡಿಬಿಡಿ ಮತ್ತು ಒತ್ತಡದಿಂದ ಕೂಡಿರುತ್ತವೆ.

**ವೃಶ್ಚಿಕ** ನಗು ನಿಮ್ಮ ಎಲ್ಲಾ ಸಮಸ್ಯೆಗಳಿಗೆ ಪರಿಹಾರವಾದ್ದರಿಂದ ನಕ್ಕುಬಿಡಿ. ಮನೆಯ ಅಗತ್ಯವಾದ ವಸ್ತುಗಾಲ ಮೇಲೆ ಹಣವನ್ನು ಖರ್ಚು ಮಾಡುವುದು ಖಂಡಿತವಾಗಿಯೂ ನಿಮಗೆ ಆರ್ಥಿಕ ತೊಂದರೆಗಳನ್ನು ನೀಡುತ್ತದೆ ಆದರೆ ಇದರಿಂದ ನೀವು ಭವಿಷ್ಯದ ಅನೇಕ ತೊಂದರೆಗಳಿಂದ ತಪ್ಪಿಸಿಕೊಳ್ಳಬಹುದು.

**ಧನಸ್ಸು** ಒತ್ತಡದ ದಿನದ ಹೊರತಾಗಿಯೂ ಆರೋಗ್ಯ ಪರಿಪೂರ್ಣವಾಗಿರುತ್ತದೆ. ನಿಧಿಗಳ ಹಠಾತ್ ಒಳಹರಿವು ನಿಮ್ಮ ಪಾವತಿಗಳು ಮತ್ತು ತಕ್ಷಣದ ವೆಚ್ಚಗಳನ್ನು ನೋಡಿಕೊಳ್ಳುತ್ತದೆ. ಸ್ನೇಹಿತರು ನಿಮಗೆ ಬೆಂಬಲ ನೀಡಿದರೂ –ಆದರೆ ಮಾತುಗಳ ಬಗ್ಗೆ ಎಚ್ಚರದಿಂದಿರಿ ನಿಮ್ಮ ಪ್ರೀತಿ ಅಸಮ್ಮತಿಯನ್ನು ಆಮಂತ್ರಿಸಬಹುದು.

**ಮಕರ** ಇಂದಿನ ಮನರಂಜನೆ ಕ್ರೀಡಾ ಚಟುವಟಿಕೆಗಳು, ಹೊರಾಂಗಣ ಕಾರ್ಯಕ್ರಮಗಳನ್ನು ಒಳಗೊಂಡಿರಬೇಕು. ಭೂಮಿ ಅಥವಾ ಯಾವುದೇ ಆಸ್ತಿಯಲ್ಲಿ ಹೂಡಿಕೆ ಮಾಡುವುದು ಇಂದು ನಿಮಗೆ ಮಾರಕವಾಗಬಹುದು, ಸಾಧ್ಯವಾದಷ್ಟು ಈ ವಿಷಯಗಳಲ್ಲಿ ಹೂಡಿಕೆ ಮಾಡುವುದನ್ನು ತಪ್ಪಿಸಿ.

**ಕುಂಭ** ಸ್ನೇಹಿತರೊಂದಿಗಿನ ಸಂಜೆ ಆಹ್ಲಾದಕರವಾಗಿದ್ದರೂ ಆದರೆ ವಿಪರೀತವಾಗಿ ತಿನ್ನುವುದು ನಿಮ್ಮ ಮರುದಿನದ ಮುಂಜಾನೆಗೆ ಅಸಮಾಧಾನವುಂಟುಮಾಡಬಹುದು. ಹೆಚ್ಚುವರಿ ಹಣವನ್ನು ರಿಯಲ್ ಎಸ್ಟೇಟ್‌ನಲ್ಲಿ ಹೂಡಿಕೆ ಮಾಡಬೇಕು. ನಿಮ್ಮ ಮನೆಯಲ್ಲಿ ಸ್ವಲ್ಪ ಸ್ವಚ್ಛತಾ ಕಾರ್ಯವನ್ನು ತಕ್ಷಣ ಕೈಗೊಳ್ಳಬೇಕು.

**ಮೀನ** ನಿಮ್ಮಲ್ಲಿ ಇಂದು ಚುರುಕುತನವನ್ನು ನೋಡಬಹುದು. ನಿಮ್ಮ ಆರೋಗ್ಯವು ಇಂದು ನಿಮ್ಮನ್ನು ಸಂಪೂರ್ಣವಾಗಿ ಬೆಂಬಲಿಸುತ್ತದೆ. ಕುಟುಂಬದ ಯಾವುದೇ ಸದಸ್ಯರ ಕಾಯಿಲೆ ಬೀಳುವ ಕಾರಣದಿಂದಾಗಿ ನೀವು ಆರ್ಥಿಕ ತೊಂದರೆಗೊಳಗಾಗಬಹುದು. ಈ ಸಮಯದಲ್ಲಿ ನೀವು ಹಣಕ್ಕಿಂತ ಹೆಚ್ಚಾಗಿ ಅವರ ಆರೋಗ್ಯದ ಬಗ್ಗೆ ಕಾಳಜಿ ವಹಿಸಬೇಕು.

# ರೆಡ್ಡಿ ಸಹಕಾರ ಬ್ಯಾಂಕ ಶಾಖೆಯ ನೂತನ ಕಟ್ಟಡ ಉದ್ಘಾಟನೆ

• ಉದಯವಾಹಿನಿ, ಮುದ್ದೇಬಿಹಾಳ


ಉದಯವಾಹಿನಿ ಚಿತ್ರ

ಸೋಮವಾರ ಮುದ್ದೇಬಿಹಾಳ ಮತಕ್ಷೇತ್ರದ ಹೊರವಲಯದ ಬಿದರಕುಂದಿಯ ವೃಕ್ಷೋದ್ಯಾನದಲ್ಲಿ ಸಾಲುಮರದ ತಿಮ್ಮಕ್ಕ ವೃಕ್ಷೋದ್ಯಾನ ಶಂಕುಸ್ಥಾಪನೆ ಜರುಗಲಿದ್ದು ಅಂತೆಯೇ ಮುದ್ದೇಬಿಹಾಳ ಪಟ್ಟಣದ ಎಪಿಎಂಸಿ ಯಾರ್ಡ್‌ನಲ್ಲಿ ಧಾರವಾಡದ ರೆಡ್ಡಿ ಸಹಕಾರ ಬ್ಯಾಂಕ್ ನಿಯಮಿತ ಮುದ್ದೇಬಿಹಾಳ ಶಾಖೆಯ ನೂತನ ಕಟ್ಟಡ ಉದ್ಘಾಟನಾ ಸಮಾರಂಭ ಜರುಗಲಿದೆ ಈ ಎರಡು ಕಾರ್ಯಕ್ರಮದಲ್ಲಿ ಬೃಹತ್, ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ ಪಾಟೀಲ್,ಅರಣ್ಯ ಪರಿಸರ ಸಚಿವ ಈಶ್ವರ ಖಂಡ್ರೆ, ಕೆಎಸ್‌ಡಿ ನಿಗಮ ಅಧ್ಯಕ್ಷ ಸಿ.ಎಸ್ ನಾಡಗೌಡ ಅಪ್ಪಾಜಿ, ಕಾನೂನು ಸಂಸದೀಯ ಸಚಿವ ಹೆಚ್ ಕೆ ಪಾಟೀಲ್, ಜವಳಿ, ಕೃಷಿಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ್, ಲೋಕಸಭಾ ಸದಸ್ಯ ರಮೇಶ ಜಿಗಜಿಣಗಿ ಸೇರಿದಂತೆ ಅನೇಕ ಗಣ್ಯಮಾನ್ಯರು ಭಾಗವಹಿಸಲಿದ್ದು ಈ ಕಾರ್ಯಕ್ರಮದಲ್ಲಿ ಮತಕ್ಷೇತ್ರದ ನಾಗರಿಕರು ಕಾಂಗ್ರೇಸ್ ಪಕ್ಷದ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಬ್ಲಾಕ್ ಕಾಂಗ್ರೇಸ್ ಅಧ್ಯಕ್ಷ ಗುರು ತಾರನಾಳ, ಮುದ್ದೇಬಿಹಾಳ ರೆಡ್ಡಿ ಬ್ಯಾಂಕಿನ ಸಲಹಾ ಸಮಿತಿಯ ಅಧ್ಯಕ್ಷ ರಾಯನಗೌಡ ಚಿತ್ತಾಪುರ ( ತಾತರೆಡ್ಡಿ) ಹೇಳಿದರು ರವಿವಾರ ಎಪಿಎಂಸಿ ಯಾರ್ಡನ ರೆಡ್ಡಿ ಸಹಕಾರ ಬ್ಯಾಂಕ್ ನೂತನ ಕಟ್ಟಡದಲ್ಲಿ ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿದರು. ಬೆಳಗ್ಗೆ 11 ಗಂಟೆಗೆ ಬ್ಯಾಂಕ್ ನ ನೂತನ ಕಟ್ಟಡ ಉದ್ಘಾಟಿಸಿ, ಬಿದರಕುಂದಿಯ ವೃಕ್ಷೋದ್ಯಾನ ಶಂಕುಸ್ಥಾಪನೆ ನಂತರ ಆಲಮಟ್ಟಿ ರಸ್ತೆಯ ಮದರಿ ಕಲ್ಯಾಣ ಮಂಟಪದಲ್ಲಿ ಸಾರ್ವಜನಿಕ ಕಾರ್ಯಕ್ರಮ ಜರಗಲಿದೆ ನಂತರ ಸಚಿವ ಎಚ್ ಕೆ ಪಾಟೀಲ್ ಹಾಗೂ ಶಾಸಕ ಸಿ.ಎಸ್ ನಾಡಗೌಡರು ತಾಲ್ಲೂಕಿನ ಕೋಳೂರು, ಬಸರಕೋಡ ಯಲಗೂರು ಗ್ರಾಮಗಳಲ್ಲಿ ಪುರಾತನ ದೇವಾಲಯಗಳಿಗೆ ಭೇಟಿ ನೀಡಲಿದ್ದಾರೆಂದು ಗುರು ತಾರನಾಳ ತಿಳಿಸಿದರು. ಪತ್ರಿಕಾಗೋಷ್ಠಿಯಲ್ಲಿ ಸತೀಶ್ ಕುಮಾರ್ ಓಸ್ವಾಲ್ ,ಬಿ.ಕೆ ಬಿರಾದಾರ ಪುರಸಭೆ ಅಧ್ಯಕ್ಷ ಮಹಿಬೂಬ ಗೊಳಸಂಗಿ, ಪ್ರಭುದೇವ ಕಲಬುರಗಿ, ಜಿಟಿಸಿ ಸಂಗನಗೌಡ ಬಿರಾದಾರ, ಡಾ.ವೀರಣ್ಣಸಿ ಇಟಗಿ,ಸುರೇಶಗೌಡ ಪಾಟೀಲ್, ಗೋಪಿ ಮಡಿವಾಳರ,ರಾಜೇಂದ್ರಗೌಡ ರಾಯಗೊಂಡ ನಿಂಗರೆಡ್ಡಿ ಮಂಗ್ಯಾಳ, ಸಿದ್ದರಾಮರೆಡ್ಡಿ ಜಮ್ಮಲದಿನ್ನಿ( ದೇವದುರ್ಗ) ವ್ಯವಸ್ಥಾಪಕ ಎಸ್ ಎಸ್ ಮದರಿಮಠ ಸೇರಿದಂತೆ ಬ್ಯಾಂಕನ ಸಿಬ್ಬಂದಿ ಉಪಸ್ಥಿತರಿದ್ದರು.

**ಸಾಲುಮರದ ತಿಮ್ಮಕ್ಕ ವೃಕ್ಷೋದ್ಯಾನ ಶಂಕುಸ್ಥಾಪನೆ**

> 1966 ರಲ್ಲಿ ಧಾರವಾಡ ರೆಡ್ಡಿ ಸಹಕಾರ ಬ್ಯಾಂಕ್ ನಿಯಮಿತ ಮುದ್ದೇಬಿಹಾಳ ಶಾಖೆಯ ಆರಂಭವಾಗಿ ಇಲ್ಲಿಯವರೆಗೆ ಬಾಡಿಗೆ ಕಟ್ಟಡದಲ್ಲಿ ಇತ್ತು ಇದೀಗ ನೂತನ ಕಟ್ಟಡವನ್ನು ಹೊಂದಿ ಸೆ1 ರಂದು ಲೋಕಾರ್ಪಣೆಗೊಳ್ಳಲಿದೆ ಮುದ್ದೇಬಿಹಾಳ ಶಾಖೆಯಲ್ಲಿ 1163 ಸದಸ್ಯರಿದ್ದು ,44.00 ಲಕ್ಷ ಶೇರು ಬಂಡವಾಳ, 7.94 .00 ಕೋಟಿ ಠೇವುಗಳು ಹಾಗೂ ಸಾಲ 4.47.00 ಕೋಟಿ ಇರುತ್ತದೆ.
>
> – ರಾಯನಗೌಡ ತಾತರೆಡ್ಡಿ, ಸಲಹಾ ಸಮಿತಿಯ ಅಧ್ಯಕ್ಷರು

# ಮಕ್ಕಳು ಪಠ್ಯ ಪುಸ್ತಕಕ್ಕೆ ಮಾತ್ರ ಸೀಮಿತವಾಗದಿರಲಿ

## ತಂದೆ ತಾಯಿಗಳಿಗೆ ಮಗು ಪುಸ್ತಕಗಳ ಜೊತೆಗೆ ಕಾಲ ಕಳೆಯುವ ಕ್ಷಣ ನೋಡುವ ಸೌಭಾಗ್ಯ

• ಉದಯವಾಹಿನಿ ಗದಗ


ಉದಯವಾಹಿನಿ ಚಿತ್ರ

ಮಕ್ಕಳು ಕೇವಲ ಪಠ್ಯಪುಸ್ತಕಕ್ಕೆ ಮಾತ್ರ ಸೀಮಿತವಾಗಿರದೆ ಮಸ್ತಕಕ್ಕೆ ಪುಸ್ತಕ ಮಿತ್ರ ಆಗುವ ಹಾಗೆ ಪ್ರತಿದಿನ ಓದುವ ವಾತಾವರಣವನ್ನು ಗ್ರಂಥಾಲಯಗಳು ಬೆಳೆಸಲಿವೆ ಮಗು ಶಾಲೆಯಿಂದ ಬಂದ ನಂತರ ಮೊಬೈಲ್‌ಗೆ ಅಂಟಿಕೊಳ್ಳದೆ ಪುಸ್ತಕ ತೆರೆದು ನೋಡಿ ಓದುವ ಹವ್ಯಾಸವನ್ನು ಬೆಳೆಸಬೇಕು ತಂದೆ ತಾಯಿಗಳಿಗೆ ಮಗು ಪುಸ್ತಕಗಳ ಜೊತೆಗೆ ಕಾಲ ಕಳೆಯುವ ಕ್ಷಣ ನೋಡುವ ಸೌಭಾಗ್ಯ ಸಿಗುವಂತೆ ಗ್ರಂಥಾಲಯ ಮಾಡುತ್ತಿದೆ. ಎಂದು ಕ್ಷೇತ್ರ ಶಿಕ್ಷಣಾಧಿಕಾರಿಗಳು ಗಂಗಾಧರ್ ಎಸ್ ಅಣ್ಣಿಗೇರಿ ಹೇಳಿದರು. ಗದಗ ಜಿಲ್ಲೆಯ ಮುಂಡರಗಿ ತಾಲ್ಲೂಕಿನ ಮಲ್ಲಿಕಾರ್ಜುನಪುರ ಗ್ರಾಮದದಲ್ಲಿ ಮಗುವಿಗೊಂದು ಗ್ರಂಥಾಲಯವನ್ನು ಶಾಲಾ ವಿದ್ಯಾರ್ಥಿನಿ ಕುಮಾರಿ ದಿಕ್ಷ ರಾಘವೇಂದ್ರ ದೊಡ್ಡಮನಿ ಅವರ ಮನೆಯಲ್ಲಿ ಉದ್ಘಾಟನೆ ಮಾಡಿ ಮಾತನಾಡಿದ ಅವರು ಓದುವ ಹವ್ಯಾಸಕ್ಕಾಗಿ ಮಗುವಿಗಾಗಿಯೇ ಒಂದು ಗ್ರಂಥಾಲಯ ಹೊಂದುವಂತೆ ಮಾಡಲು ಪಾಲಕ ಪೋಷಕರ ಮನವೊಲಿಸಿ, ಮಕ್ಕಳಿಗಾಗಿ ಆಸ್ತಿ ಮಾಡದೆ ಮಕ್ಕಳಿಗಾಗಿ ಪುಸ್ತಕ ಕರಗಿಸಿ ನೀಡುವಂತೆ ಪ್ರೋತ್ಸಾಹಿಸಿದ ಶಾಲಾ ಮುಖ್ಯ ಗುರುಗಳಾದ ಶರಣಪ್ಪ ಕಲಾಲ್ ಹಾಗೂ ಶಿಕ್ಷಕ ಬಳಗದ ಕಾರ್ಯ ನಿಜಕ್ಕೂ ಶ್ಲಾಘನೀಯ ಮತ್ತು ಮಕ್ಕಳ ಕಲಿಕಾ ವಾತಾವರಣ ಪ್ರತಿ ಮನೆ ಮನೆಯಲ್ಲೂ ಇದು ಹೊರಹೊಮ್ಮಲಿ ಎಂದರು. ಕ್ಷೇತ್ರ ಸಂಪನ್ಮೂಲ ಅಧಿಕಾರಿಗಳಾದ ಎಂ.ಸಿ. ಮರಡೂರಮಠ್‌ರವರು ಪ್ರಸ್ತಾವಿಕ ಮಾತನಾಡುತ್ತಾ ಗ್ರಾಮದಲ್ಲಿ ಈ ರೀತಿಯ ವಿನೂತನ ಕಾರ್ಯಕ್ರಮವಾದ ಮಗುವಿಗೊಂದು ಗ್ರಂಥಾಲಯ ಅನುಷ್ಠಾನ ಮಾಡುತ್ತಿರುವುದು ನಮ್ಮ ಜಿಲ್ಲೆ ತಾಲ್ಲೂಕು ಮತ್ತು ರಾಜ್ಯಕ್ಕೆ ಮಾತ್ರವಾಗಿದ್ದು ಇದು ಕೇವಲ ಬಾಲ ಮಕ್ಕಳಿಗೆ ಮಾತ್ರವಲ್ಲ ಸ್ಪರ್ಧಾತ್ಮಕ ಪರೀಕ್ಷೆ ತಯಾರು ಮಾಡುತ್ತಿರುವ ಕಾಲೇಜು ವಿದ್ಯಾರ್ಥಿಗಳು ಅನುಸರಿಸುವಂತೆ ಆಗಲಿ, ಪಾಲಕರು ಕೂಡ ತೊಡಗಿಸಿಕೊಳ್ಳಲು ಸಲಹೆ ನೀಡಿದರು.

ಈ ವಿಶಿಷ್ಟ ಕಾರ್ಯಕ್ರಮದ ಉದ್ಘಾಟನೆ ಕಾರ್ಯಕ್ರಮದಲ್ಲಿ ಎಸ್‌ಡಿಎಂಸಿ ಅಧ್ಯಕ್ಷರಾದ ಶ್ರೀಮತಿ ಯಶೋಧ ಮಲ್ಲಪ್ಪ ರಾಮಣ್ಣವರ. ಉಪಾಧ್ಯಕ್ಷರಾದ ಹಾಲೇಶ್ ಕೊಡ್ಲಿ. ಆನಂದರಾಮಣ್ಣವರ. ಸದಸ್ಯರಾದ ಹನುಮಂತಗೌಡ ಶಿವನಗೌಡ. ಸಂತೋಷ್‌ಶಿವನಗೌಡ. ಹಾಲೇಶ. ಗಂಗಾಧರ್ಬಂಡಿ ವಡ್ಡರ. ಶೇಖರಗೌಡ ಪಾಟೀಲ. ಸಿದ್ದರಡ್ಡಿ ತಂಟ್ರಿ. ಲಕ್ಷ್ಮಣ ಬಡ್ನಿ. ಬಸವರಾಜ್ ಬಡ್ನಿ. ಸಿದ್ದಪ್ಪ ವಾಲಿಕಾರ. ಶೇಖಪ್ಪ ಹರಿಜನ. ಶ್ರೀಮತಿ ಲಕ್ಷ್ಮಿ ಈ ಬಡಿಗೆ. ಲಲಿತಾ ಬನ್ನಿ. ಮೀನಾಕ್ಷಿ ದೊಡ್ಡಮನಿ. ಯಶೋಧರ. ರೇಣುಕಾ ಪ್ರಕಾಶ್ ಕೊಡ್ಲಿ. ಹಿರಿಯರಾದ ನಾಗಪ್ಪ ವಡ್ಡರ. ಫಕೀರ್ ಗೌಡ ಮಲ್ಲಿಕಾರ್ಜುನ್ ಪಾಟಲ. ಬಸವರಾಜ್ ದಮ್ಮಲ. ಶ್ರೀಮತಿ ದೇವಮ್ಮ ಪಾಟೀಲ. ಲಲಿತಾ ಬನ್ನಿ. ಚಂದ್ರಶೇಖರ ಬಂಡಿವಡ್ಡರ. ಶಂಕರಗೌಡ ಮ್ಯಾಗೇರಿ. ಶಿಕ್ಷಕರಾದ ನಿಂಗಪ್ಪ ಪೂಜಾರ. ತಸ್ಲಿಂ ಬೇಗಂ ನದಾಫ್ ಇತರರು ಉಪಸ್ಥಿತರಿದ್ದರು.

**ಪ್ರತಿದಿನ ಓದುವ ವಾತಾವರಣ**

> ಮಗುವಿಗೊಂದು ಗ್ರಂಥಾಲಯದ ಕಲ್ಪನೆ ಶ್ರೇಷ್ಠವಾಗಿದ್ದು ಇದರ ಅನುಷ್ಠಾನ ಕಂಡು ಸಂತೋಷವಾಗಿದೆ ಶಾಲೆ ಜೊತೆಗೆ ನಿಮ್ಮ ಕಾಳಜಿ ಮತ್ತು ಸಹಕಾರದ ಪ್ರತಿಫಲವಾಗಿ ಗ್ರಾಮದ ಮಕ್ಕಳಿಗೆ ಮುಂದಿನ ಭವಿಷ್ಯವನ್ನು ಕಟ್ಟಿಕೊಳ್ಳಲು ಇದು ನೆರವಾಗಲಿದೆ, ಮಕ್ಕಳ ಈ ಗ್ರಂಥಾಲಯಕ್ಕೆ ಪುಸ್ತಕ ನೀಡುವ ನಿಮ್ಮ ಪ್ರಯತ್ನ ಸದಾ ಹೀಗೆ ಮುಂದುವರೆಯಲಿ.
>
> – ಹನುಮರೆಡ್ಡಿ ಇಟಗಿ ತಾಲ್ಲೂಕ ಕ್ಷೇತ್ರ ಸಂಪನ್ಮೂಲ ಅಧಿಕಾರಿ

# ಮಳೆಗೆ ಕೊಟ್ಟಿಗೆಯ ಗೋಡೆ ಕುಸಿದು 18 ಮೇಕೆಗಳು ಸಾವು

• ಉದಯವಾಹಿನಿ, ಚಿತ್ತಾಪುರ

ಕಳೆದ ಕೆಲವು ದಿನಗಳಿಂದ ನಿರಂತವಾಗಿ ಸುರಿಯುತ್ತಿರುವ ಮಳೆಗೆ ಚಿತ್ತಾಪುರ ತಾಲ್ಲೂಕಿನ ಭಂಕಲಗಾ ಗ್ರಾಮದಲ್ಲಿ ಕೊಟ್ಟಿಗೆಯ ಗೋಡೆ ಕುಸಿದು 18 ಮೇಕೆಗಳು ಮೃತಪಟ್ಟಿರುವ ಘಟನೆ ನಡೆದಿದೆ. ಭಂಕಲಗಾ ಗ್ರಾಮದ ಮಾಳಪ್ಪ ಧೂಳಪ್ಪ ಪೂಜಾರಿ ಅವರಿಗೆ ಸೇರಿದ ಮೇಕೆಗಳಾಗಿವೆ. ಮೇಕೆಗಳನ್ನು ಮೇಯಿಸಿ ಸಂಜೆ ವೇಳೆ ಕೊಟ್ಟಿಗೆಯೊಳಗೆ ಹಾಕಿದ್ದಾರೆ. ನಿರಂತರವಾಗಿ ಸುರಿಯುತ್ತಿದ್ದ ಮಳೆಗೆ ಕೊಟ್ಟಿಗೆಯ ಗೋಡೆಯು ಶಿಥಿಲಗೊಂಡು ರಾತ್ರಿ 7.30ಗಂಟೆ ಸುಮಾರಿಗೆ ಕೊಟ್ಟಿಗೆಯ ಗೋಡೆ ಮೇಕೆಗಳ ಮೇಲೆ ಕುಸಿದು ಬಿದ್ದ ಕಾರಣ ಮೇಕೆಗಳು ಸಾವನ್ನಪ್ಪಿದೆ. ಸ್ಥಳಕ್ಕೆ ತಹಶೀಲ್ದಾರ್ ನಾಗಯ್ಯ ಹಿರೇಮಠ, ಪಶು ಇಲಾಖೆಯ ಸಹಾಯಕ ನಿರ್ದೇಶಕ ಶಂಕರ ಕಣ್ಣಿ ಪಿಎಸ್‌ಐ ಶ್ರೀಶೈಲ್ ಅಂಬಾಟಿ, ಸಿಬ್ಬಂದಿಗಳಾದ ಯಟ್ಬಾಲ್ ಪಾಶಾ, ಸಿದ್ದು ಅವರು ಭೇಟಿ ನೀಡಿ ಪರಿಶೀಲನೆ ನಡೆಸಿದರು. ಈ ಕುರಿತು ಚಿತ್ತಾಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಮಳೆಗೆ ಬೆಳೆ ಹಾನಿ: ಎಕರೆಗೆ 25 ಸಾವಿರ ನೀಡಲು ಮನವಿ

• ಉದಯವಾಹಿನಿ, ಚಿತ್ತಾಪೂರ

ತಾಲ್ಲೂಕಿನಾದ್ಯಂತ ಧಾರಾಕಾರವಾಗಿ ಸುರಿಯುತ್ತಿರುವ ಮಹಾ ಮಳೆಯಿಂದ ಬೆಳೆಗಳು ಹಾನಿಯಾದ ರೈತರಿಗೆ ಸರಕಾರದಿಂದ ಒಂದು ಎಕರೆಗೆ 25 ಸಾವಿರ ರೂಪಾಯಿಗಳು ಪರಿಹಾರ ನೀಡಬೇಕು ಎಂದು ಕರ್ನಾಟಕ ರಕ್ಷಣಾ ವೇದಿಕೆಯಿಂದ ಮನವಿ ಪತ್ರ ಸಲ್ಲಿಸಿದರು. ಜುಲೈ, ಅಗಸ್ಟ್, ತಿಂಗಳ 2025ನೇ ಸಾಲಿನಲ್ಲಿ ಸತತವಾಗಿ ಸುರಿದ ಮಳೆಯಿಂದಾಗಿ ಮುಂಗಾರು ಬೆಳೆಗಳಾದ ಹೆಸರು ಉದ್ದು ಸೇರಿದಂತೆ ಅನೇಕ ಬೆಳೆಗಳು ಸಂಪೂರ್ಣ ನಾಶವಾಗಿ ರೈತರು ಬಹಳ ಸಂಕಷ್ಟ ಎದುರಿಸುತ್ತಿದ್ದಾರೆ. ಅತಿವೃಷ್ಟಿಯಿಂದ ಹಾನಿಯಾಗಿದ್ದು ಸಮೀಕ್ಷೆ ಮಾಡಿ ಎಲ್ಲಾ ರೈತರಿಗೆ ಸರಕಾರದಿಂದ ಪ್ರತಿ ಎಕರೆಗೆ ರೂ. 25,000/– ಸಾವಿರ ರೂಪಾಯಿಗಳು ಪರಿಹಾರ ಕೊಡಬೇಕು. ರೈತರು ಬೆಳೆದ ಮುಂಗಾರು ಬೆಳೆ ಹೆಸರು, ಉದ್ದು, ಸರಕಾರದಿಂದ ಕೇಂದ್ರಗಳನ್ನು ರಚಿಸಿ ಯೋಗ್ಯ ಬೆಲೆಯಲ್ಲಿ ಖರೀದಿಸಬೇಕೆಂದು ಒತ್ತಾಯಿಸಿ ಕರ್ನಾಟಕ ರಕ್ಷಣಾ ವೇದಿಕೆ ಚಿತ್ತಾಪೂರ ಘಟಕದ ವತಿಯಿಂದ ತಹಶೀಲ್ದಾರರಿಗೆ ಮನವಿ ಪತ್ರ ಸಲ್ಲಿಸಿದರು.

# ಮಳೆಯಿಂದ ಹಾನಿಯಾದ ಸ್ಥಳಕ್ಕೆ ಶಾಸಕ ಪಾಟೀಲ್ ಭೇಟಿ

• ಉದಯವಾಹಿನಿ, ಹುಮನಾಬಾದ


ಉದಯವಾಹಿನಿ ಚಿತ್ರ

ಇತ್ತೀಚಿಗೆ ಸುರಿದ ಮಳೆಯಿಂದ ಹಾನಿಗಿಡಾದ ಸ್ಥಳಗಳಿಗೆ ಶಾಸಕ ಡಾ.ಸಿದ್ದು ಪಾಟೀಲ ತಾಲ್ಲೂಕು ಅಧಿಕಾರಿಗಳ ತಂಡದೊಂದಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ತಾಲ್ಲೂಕಿನ ಒತಗಿ, ಚಂದನಹಳ್ಳಿ ಹಾಗೂ ಸೋನಕೇರಾ ಗ್ರಾಮಗಳಲ್ಲಿನ ತೀವ್ರ ಹಾನಿಗೊಳಗಾದ ರೈತರ ಹೊಲಗಳಿಗೆ, ಮನೆ ಕುಸಿತ ಸ್ಥಳಗಳಿಗೆ ಭೇಟಿ ನೀಡಿ ಪರಿಶೀಲನೆ ಮಾಡಿ ಹಾನಿ ಕುರಿತು ವರದಿ ತಯ್ಯಾರಿಸಲು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಬಳಿಕ ಮಾತನಾಡಿ ಶಾಸಕರು, ತಾಲ್ಲೂಕಿನಲ್ಲಿ ಸತತವಾಗಿ ಮೂರು ದಿನಗಳ ಕಾಲ ಸುರಿದ ಮಳೆಗೆ ಅನೇಕ ರೀತಿಯ ಸಮಸ್ಯೆಗಳು ಸೃಷ್ಟಿಸಿವೆ. ಹಾನಿಗಿಡಾದ ಮನೆಗಳಿಗೆ ಪರಿಹಾರ ನೀಡಲಾಗುತ್ತಿದೆ. ಬೆಳೆಗಳ ಹಾನಿ ಬಗ್ಗೆ ಈಗಾಗಲೇ ಕೃಷಿ ಮತ್ತು ತೋಟಗಾರಿಕೆ ಇಲಾಖೆಯ ಅಧಿಕಾರಿಗಳಿಗೆ ಸಂಪೂರ್ಣ ಪರಿಶೀಲನೆ ಮಾಡಿ ವರದಿ ನೀಡಲು ಸೂಚನೆ ನೀಡಲಾಗಿದೆ.

ಹೀಗಾಗಿ ಬೆಳೆ ಹಾನಿಗಿಡಾದ ರೈತರು ಹಾಗೂ ಕುಸಿದ ಮನೆಯ ಯಜಮಾನರು ಧೈರ್ಯವಾಗಿರಬೇಕು, ಸರ್ಕಾರದಿಂದ ಸೂಕ್ತ ಪರಿಹಾರ ಕೊಡಿಸಲು ಪ್ರಾಮಾಣಿಕ ಪ್ರಯತ್ನ ಮಾಡಲಾಗುತ್ತದೆ ಎಂದು ಹೇಳಿದರು.

# ವರದಾ ನದಿಗೆ ಅಡ್ಡಲಾಗಿ ನಿರ್ಮಿಸಿದ್ದ ಬ್ರಿಡ್ಜ್ ಕಂ ಬ್ಯಾರೇಜ್‌ನ 98 ಗೇಟ್ ಕದ್ದ ಖದೀಮರು

• ಉದಯವಾಹಿನಿ, ಹಾವೇರಿ


ಉದಯವಾಹಿನಿ ಚಿತ್ರ

ವರದಾ ನದಿಗೆ ಅಡ್ಡಲಾಗಿ ನಿರ್ಮಿಸಿದ್ದ ಸುಮಾರು 14ಕ್ಕೂ ಅಧಿಕ ಬ್ರಿಡ್ಜ್ ಕಂ ಬ್ಯಾರೇಜ್‌ನ 98 ಗೇಟ್‌ಗಳನ್ನು ಕಳ್ಳರು ಕಳ್ಳತನ ಮಾಡಿರುವ ಘಟನೆ ಹಾವೇರಿ ತಾಲೂಕಿನ ಕೋಳೂರು ಗ್ರಾಮದಲ್ಲಿ ನಡೆದಿದೆ. ವರದಾ ನದಿಗೆ ಅಡ್ಡಲಾಗಿ ಸುಮಾರು 14ಕ್ಕೂ ಅಧಿಕ ಬ್ರಿಡ್ಜ್ ಕಂ ಬ್ಯಾರೇಜ್‌ಗಳನ್ನು ನಿರ್ಮಾಣ ಮಾಡಲಾಗಿತ್ತು. ಕಳೆದ 6 ತಿಂಗಳಿನಿಂದ ನಿರಂತರವಾಗಿ ಬ್ರಿಡ್ಜ್ ಕಂ ಬ್ಯಾರೇಜ್ ಗೇಟ್‌ಗಳನ್ನು ಖದೀಮರು ಕಳ್ಳತನ ಮಾಡುತ್ತಿದ್ದಾರೆ. ಈ ಬಾರಿ ಸುಮಾರು ಒಂದುವರೆ ಲಕ್ಷ ಮೌಲ್ಯದ ಗೇಟ್‌ಗಳನ್ನ ಕಳ್ಳತನ ಮಾಡಿದ್ದಾರೆ.

ಆರೇಳು ತಿಂಗಳಿನಲ್ಲಿ ಹಾವೇರಿ ಜಿಲ್ಲೆಯಲ್ಲಿಯೇ ಮೂರು ಕಡೆ ಬ್ಯಾರೇಜ್ ಗೇಟ್ ಕಳ್ಳತನ ಆಗಿವೆ. ಕೂಸನೂರು, ಶೇಷಗಿರಿ ಸೇರಿದಂತೆ ಹಲವು ಕಡೆಯ ಬ್ರಿಡ್ಜ್ ಕಂ ಬ್ಯಾರೇಜ್ ಗೇಟ್‌ಗಳನ್ನ ಖದೀಮರು ಕಳ್ಳತನ ಮಾಡಿದ್ದಾರೆ. ಸಣ್ಣನೀರಾವರಿ ಇಲಾಖೆಯ ಅಧಿಕಾರಿಗಳ ನಿರ್ಲಕ್ಷ್ಯವೇ ಕಾರಣ.

ಗೋದಾಮನ್ನು ಕಾಯುಲು ಯಾರನ್ನಾದರು ನೇಮಕ ಮಾಡಬೇಕು. ಅಲ್ಲದೇ ಕೂಡಲೇ ಪೊಲೀಸರು ಖದೀಮರನ್ನ ಪತ್ತೆ ಹಚ್ಚಬೇಕು. ಇಲ್ಲಾವಾದರೆ ಬೇಸಿಗೆಯಲ್ಲಿ ರೈತರಿಗೆ ಸಮಸ್ಯೆಯಾಗುತ್ತದೆ ಎಂದು ಆಕ್ರೋಶ ಹೊರಹಾಕಿದ್ದಾರೆ.

**ಒಂದುವರೆ ಲಕ್ಷರೂ. ಗೇಟ್**

ಮಳೆಗಾಲ ಪ್ರಾರಂಭವಾಗುತ್ತಿದ್ದಂತೆ ಸಣ್ಣ ನೀರಾವರಿ ಇಲಾಖೆಯ ಅಧಿಕಾರಿಗಳು ಬ್ರಿಡ್ಜ್ ಕಂ ಬ್ಯಾರೇಜ್‌ಗೆ ಅಳವಡಿಸಿದ್ದ ಗೇಟ್‌ಗಳನ್ನ ಗೋದಾಮಿನಲ್ಲಿ ಇಡುತ್ತಿದ್ದರು. ಈ ಬಾರಿಯೂ ಇದೇ ರೀತಿ ಇಟ್ಟಿದ್ದರು. ಆದರೆ ಈಗ ಖದೀಮರ ಗ್ಯಾಂಗೊಂದು ರಾತ್ರೋರಾತ್ರಿ ಗೋದಾಮಿನಲ್ಲಿದ್ದ ಒಂದುವರೆ ಲಕ್ಷ ಮೌಲ್ಯದ 98 ಗೇಟ್‌ಗಳನ್ನು ಕದ್ದು ಪರಾರಿಯಾಗಿದೆ.

# ಕುಡಿದ ಅಮಲಿನಲ್ಲಿ ಹೊಡೆದಾಡಿಕೊಂಡ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು

• ಉದಯವಾಹಿನಿ, ಚನ್ನರಾಯಪಟ್ಟಣ

ಕುಡಿದ ಅಮಲಿನಲ್ಲಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಬ್ಬರು ಪರಸ್ಪರ ಹೊಡೆದಾಡಿಕೊಂಡಿರುವ ಘಟನೆ ಇಲ್ಲಿ ನಡೆದಿದೆ. ತಾಲ್ಲೂಕಿನ ಗೋವಿನಕೆರೆ ಗ್ರಾಮದ ಗ್ರಾಪಂ ಸದಸ್ಯರೊಬ್ಬರ ಮನೆಯಲ್ಲಿ ಈ ಘಟನೆ ನಡೆದಿದ್ದು, ತಡವಾಗಿ ಬೆಳಕಿಗೆ ಬಂದಿದೆ. ಹಿರೀಸಾವೆ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಸತೀಶ ಹಾಗೂ ಎಂ. ಶಿವರ ಗ್ರಾ.ಪಂ. ಪಿಡಿಒ ರಾಮಸ್ವಾಮಿ ನಡುವೆ ಜಗಳ ನಡೆದಿದೆ. ಸತೀಶ ಅವರ ತಲೆಗೆ ಮದ್ಯದ ಬಾಟಲಿಯಿಂದ ರಾಮಸ್ವಾಮಿ ಹೊಡೆದಿದ್ದಾರೆ. ಸತೀಶ ಅವರಿಗೆ ಗಂಭೀರ ಪೆಟ್ಟಾಗಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

**ಘಟನೆ ವಿವರ:** ಎಂ. ಶಿವರ ಗ್ರಾ.ಪಂ. ಸದಸ್ಯ ಗೋವಿನಕೆರೆ ಗ್ರಾಮದ ರಾಮು ಅವರ ಮನೆಗೆ ಗಣೇಶ ಹಬ್ಬದ ನಿಮಿತ್ತ ಊಟಕ್ಕೆಂದು ಸತೀಶ ಬಂದಿದ್ದರು. ರಾಮು, ರಘು ಅವರು ಮದ್ಯ ಸೇವನೆ ಮಾಡುತ್ತಾ ಕುಳಿತಿದ್ದಾಗ ಆಹ್ವಾನದ ಮೇರೆಗೆ ರಾಮಸ್ವಾಮಿ ಸಹ ಬಂದಿದ್ದರು. ತಾಲ್ಲೂಕು ಸರ್ಕಾರಿ ನೌಕರರ ಸಂಘದ ಚುನಾವಣೆ ವಿಚಾರವಾಗಿ ಅಧಿಕಾರಿಗಳಿಬ್ಬರ ನಡುವೆ ವೈಮನಸ್ಸು ಉಂಟಾಗಿ ಮಾತನಾಡುತ್ತಿರಲಿಲ್ಲ. ಮದ್ಯ ಸೇವನೆ ಮಾಡುತ್ತಾ ಕುಳಿತಿದ್ದಾಗ ರಾಮು, ಶಿವರಾಜ್ ಅವರು ಜಗಳ ಬಿಟ್ಟು ಇಬ್ಬರು ಮಾತನಾಡಿಕೊಂಡಿರಿ ಎಂದು ಸಲಹೆ ನೀಡಿದ್ದಾರೆ. ಅದಕ್ಕೆ ಸತೀಶ್, ಅದರ ಬಗ್ಗೆ ಈಗ ಮಾತನಾಡುವುದು ಬೇಡ ಸುಮನಿರಿ ಎಂದಿದ್ದಾರೆ.

ಅಷ್ಟಕ್ಕೆ ಆಕ್ರೋಶಗೊಂಡ ರಾಮಸ್ವಾಮಿ ಅವಾಚ್ಯ ಶಬ್ದಗಳಿಂದ ನಿಂದಿಸುತ್ತಾ ಎದುರಿಗೆ ಇದ್ದ ಮದ್ಯದ ಬಾಟಲಿಯಿಂದ ತಲೆಗೆ ಹೊಡೆದಿದ್ದಾರೆ. ಗಾಜಿನ ಚೂರು ಮುಖಕ್ಕೆ ಬಿದ್ದು ಏಟಾಗಿದೆ. ಜೊತೆಗಿದ್ದವರೂ ಜಗಳ ಬಿಡಿಸಿ ಇಬ್ಬರನ್ನೂ ಅಲ್ಲಿಂದ ಕಳುಹಿಸಿದ್ದಾರೆ. ಗ್ರಾಮಾಂತರ ಠಾಣೆಯಲ್ಲಿ ದೂರು, ಪ್ರತಿ ದೂರು ದಾಖಲಾಗಿದೆ.

# ಡಿಕೆಶಿ ಮನಸ್ಸಿನ ಇಚ್ಛೆ ಫಲಿಸಲಿ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಉಡುಪಿ

ಡಿ.ಕೆ ಶಿವಕುಮಾರ್ ಓಪನ್ ಆಗಿ ಭಗವದ್ಗೀತೆ ಪಠಿಸುವ ಏಕೈಕ ರಾಜಕಾರಣಿ. ರಾಕ್ ಸ್ಟಾರ್ ರಾಜಕಾರಣಿ. ರಾಜ್ಯಕ್ಕೆ ದೇಶಕ್ಕೆ ಅವರ ಸೇವೆ ದೊರಕಲಿ. ಭಗವದ್ಗೀತೆ ಪುಸ್ತಕ ಪಡೆದಿದ್ದಾರೆ, ಅವರ ಮನಸ್ಸಿನ ಇಚ್ಛೆ ಫಲಿಸಲಿ ಎಂದು ಉಡುಪಿಯ ಪುತ್ತಿಗೆ ಮಠದ ಶ್ರೀ ಸುಗುಣೇಂದ್ರ ತೀರ್ಥ ಸ್ವಾಮೀಜಿ ಆಶೀರ್ವಾದ ಮಾಡಿದ್ದಾರೆಶ್ರೀ ಮಧ್ವಾಚಾರ್ಯರ ಭಾವಚಿತ್ರವಿರುವ ಅಂಚೆ ಚೀಟಿ ಬಿಡುಗಡೆ ಮಾಡಿದ್ದು, ಶ್ರೀ ಮಧ್ವಾಚಾರ್ಯರಿಗೆ ಬಂಡೆಕಲ್ಲು ಇಷ್ಟ.ಅವರು ಹನುಮನ ಅಪರಾವತಾರ. ಡಿಕೆಶಿ ಕನಕಪುರದ ಬಂಡೆ. ಅವರು ರಾಕ್ ಸ್ಟಾರ್ ರಾಜಕಾರಣಿ. ಮಠದಲ್ಲಿ ಕೋಟಿ ಗೀತಾ ಲೇಖನ ಪುಸ್ತಕ ಪಡೆದಿದ್ದಾರೆ. ಅವರು ಪುಸ್ತಕ ಬರೆದು ಮುಗಿಸುವುದರೊಳಗೆ ಅವರ ಮನಸ್ಸಿನ ಇಚ್ಛೆ ಫಲಿಸಲಿ ಎಂದು ಡಿಕೆಶಿ ಮುಖ್ಯಮಂತ್ರಿ ಆಗಲಿ ಎಂದು ಪುತ್ತಿಗೆ ಸ್ವಾಮೀಜಿ ಆಶೀರ್ವದಿಸಿದರು. ರಾಜಕಾರಣಿಗಳು ಆಸ್ತಿಕರಾಗುವುದು ಬಹಳ ಮುಖ್ಯ. ರಾಜಕಾರಣಿಗಳು ಆಸ್ತಿಕರಾದರೆ ಮಾತ್ರ ಜಗತ್ತು ಕ್ಷೇಮವಾಗಿರಲು ಸಾಧ್ಯ ಎಂದರು

> ಡಿಕೆಶಿ ಜೊತೆ ಪುತ್ತಿಗೆ ಮಠಕ್ಕೆ 35 ವರ್ಷದ ಸಂಬಂಧವಿದೆ. ಡಿಕೆ ಜೈಲ್ ಮಂತ್ರಿ ಆಗಿದ್ದರು, ಕೃಷ್ಣ ಹುಟ್ಟಿದ್ದು ಜೈಲಿನಲ್ಲೇ. ಅವರು ಶ್ರೀಕೃಷ್ಣನ ದೊಡ್ಡ ಭಕ್ತ, ಭಗವದ್ಗೀತೆಯನ್ನು ಬಹಳ ಅನುಸರಿಸುತ್ತಾರೆ ಎಂದು ಮಠದ ರಾಜಾಂಗಣದಲ್ಲಿ ನಡೆದ ತಮ್ಮ ಜನ್ಮ ನಕ್ಷತ್ರ ಕಾರ್ಯಕ್ರಮದಲ್ಲಿ ಡಿ.ಕೆ ಶಿವಕುಮಾರ್ ಮುಂದೆಯೇ ಮಾತನಾಡಿದರು.

# 100 ಕೋಟಿ ರೂ. ವಿಶೇಷ ಪರಿಹಾರಕ್ಕೆ ಸಿಎಂಗೆ ಮನವಿ

• ಉದಯವಾಹಿನಿ, ಬೀದರ

ಬೀದರ್ ಜಿಲ್ಲೆಯಾದ್ಯಂತ ಆಗಸ್ಟ್ ತಿಂಗಳಲ್ಲಿ ಧಾರಾಕಾರ ಮಳೆಯಾಗಿ ಬೆಳೆ, ಮನೆ, ಮೂಲಸೌಕರ್ಯಕ್ಕೆ ಹಾನಿ ಆಗಿದ್ದು, 100 ಕೋಟಿ ರೂ. ವಿಶೇಷ ಪರಿಹಾರ ನೀಡುವಂತೆ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಮಾಡಿದ್ದಾರೆ.

ಭಾನುವಾರವಾರ ಸಂಜೆ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿದ ಸಚಿವರು, ಸಾವಿರಾರು ಎಕರೆಯಲ್ಲಿ ಬೆಳೆದು ನಿಂತಿದ್ದ ಸೋಯಾ, ತೊಗರಿ ಸೇರಿದಂತೆ ಹಲವು ಬೆಳೆ ನಾಶವಾಗಿದ್ದು, ನೂರಾರು ಮನೆಗಳು ಹಾನಿಗೊಳಗಾಗಿವೆ, ತಗ್ಗು ಪ್ರದೇಶದ ಮನೆಗಳಿಗೆ ನೀರು ನುಗ್ಗಿ ದವಸ ಧಾನ್ಯವೂ ನೀರು ಪಾಲಾಗಿದೆ, ಜೊತೆಗೆ ಕೆಲವು ಸಂಪರ್ಕ ಸೇತುವೆಗಳು ಕೊಚ್ಚಿಹೋಗಿದ್ದು, ರಸ್ತೆ ಸಂಪರ್ಕ, ವಿದ್ಯುತ್ ಸಂಪರ್ಕ ಕಡಿತವಾಗಿದೆ ಎಂದು ತಿಳಿಸಿದ್ದಾರೆ.

ಜಿಲ್ಲಾಡಳಿತದ ಎನ್.ಡಿ.ಆರ್.ಎಫ್, ಎಸ್.ಡಿ.ಆರ್.ಎಫ್. ನಿಯಮಾವಳಿಯಂತೆ ಸಮೀಕ್ಷೆ ನಡೆಸಿದ್ದು, ಪ್ರಾಥಮಿಕ ಅಂದಾಜಿನಂತೆ ಸುಮಾರು 500 ಕೋಟಿ ರೂಪಾಯಿ ನಷ್ಟ ಸಂಭವಿಸಿದೆ. ಮೊದಲೇ ಹಿಂದುಳಿದಿರುವ ಬೀದರ್ ಜಿಲ್ಲೆ ಈ ಅನಾಹುತಕಾರಿ ಮಳೆಯಿಂದ ಮತ್ತಷ್ಟು ಸಂಕಷ್ಟಕ್ಕೆ ಸಿಲುಕಿದ್ದು, ಜಿಲ್ಲೆಯ ರೈತರು, ಬಡಜನರು, ಕೂಲಿಕಾರ್ಮಿಕರು ಆಂತಕದಲ್ಲಿ ಕಾಲ ಕಳೆಯುವಂತಾಗಿದೆ. ಈ ಹಿನ್ನೆಲೆಯಲ್ಲಿ ತತ್ ಕ್ಷಣವೇ ನೊಂದ ಜನರ ನೆರವಿಗೆ ಬರುವಂತೆ ಈಶ್ವರ ಖಂಡ್ರೆ ಮುಖ್ಯಮಂತ್ರಿಗಳಿಗೆ ಮನವಿ ಮಾಡಿದ್ದಾರೆ.

## ಶರಣ ಸಾಹಿತ್ಯ ಪರಿಷತ್ತು ಸಂಸ್ಥಾಪಕರ ದಿನಾಚರಣೆ, ವಚನ ಸಾಹಿತ್ಯದಲ್ಲಿ ವೈಜ್ಞಾನಿಕ, ಧಾರ್ಮಿಕ, ಸಾಮಾಜಿಕ ಮೌಲ್ಯಗಳು ವಚನಗಳಲ್ಲಿ ಅಡಗಿವೆ

# ಇಂದಿನ ಮಕ್ಕಳು ವಚನಗಳ ಅಧ್ಯಯನಕ್ಕೆ ಮುಂದಾಗಬೇಕಿದೆ: ಕವಯಿತ್ರಿ

• ಉದಯವಾಹಿನಿ, ಬಸವನಬಾಗೇವಾಡಿ



ಉದಯವಾಹಿನಿ ಚಿತ್ರ

ತಾಲ್ಲೂಕಾ ಶರಣ ಸಾಹಿತ್ಯ ಪರಿಷತ್ತು ವತಿಯಿಂದ ತಾಲ್ಲೂಕಿನ ಹುಣಶ್ಯಾಳ ಪಿ ಬಿ ಗ್ರಾಮದ ಎಸ್ ಪಿ ಆಲೂರ ಪ್ರೌಢಶಾಲೆಯಲ್ಲಿ ಶರಣ ಸಾಹಿತ್ಯ ಪರಿಷತ್ತಿನ ಸಂಸ್ಥಾಪಕರ ದಿನಾಚರಣೆ, ಲಿಂ ಬಸವರಾಜ ಪರಪ್ಪ ಆಲೂರ, ಲಿಂ ಸಿದ್ದಲಿಂಗವ್ವ, ಲಿಂ ಬಸಲಿಂಗಯ್ಯ ಹಿರೇಮಠ, ಲಿಂ ಶ್ರೀಶೈಲಪ್ಪ ಬಾಪೂರಾಯ ಧನಶೆಟ್ಟಿ ಸ್ಮರಣಾರ್ಥ ಹಮ್ಮಿಕೊಂಡ ಅನುಭಾವ ಕಾರ್ಯಕ್ರಮವನ್ನು ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಎಸ್. ಎಸ್ ಆಲೂರು ಉದ್ಘಾಟಿದರು. ಶರಣ ಸಾಹಿತ್ಯ ಪರಿಷತ್ತಿನ ಸಂಸ್ಥಾಪಕ ಅಧ್ಯಕ್ಷರಾದ ಡಾ.ಲಿಂ ರಾಜೇಂದ್ರ ಮಹಾಸ್ವಾಮಿಗಳ ಕುರಿತು ನಿವೃತ್ತ ಶಿಕ್ಷಕ ಆರ್ ಜಿ ಅಳ್ಳಗಿ ಅವರು ಮಾತನಾಡಿ, ಬಡವರ ದೀನ ದಲಿತರ ನಿರಾಶ್ರಿತರ ಅಭಿವೃದ್ಧಿಗಾಗಿ ಅಕ್ಷರ ದಾಸೋಹದ ಜೊತೆ ಅನ್ನದಾಸೋಹ, ಬಡ ಮಕ್ಕಳ ಸಲುವಾಗಿ ಉಚಿತ ಪ್ರಸಾದ ನಿಲಯವನ್ನು ಪ್ರಾರಂಭಿಸಿದರು.

ಶ್ರೀಗಳ ಬದುಕು ವ್ಯಕ್ತಿತ್ವ ಸಾಧನೆ ನಾಡು–ನುಡಿಗೆ ತಮ್ಮ ಅನನ್ಯ ಸೇವೆಯನ್ನು ಸಮಾಜಕ್ಕಾಗಿ ಮುಡುಪಾಗಿಸಿದರು. ಶ್ರೀಗಳು ತಮ್ಮ ಮೈಮೇಲೆ ಧರಿಸಿರುವ ಚಿನ್ನದ ಕರಡಿಗೆಯನ್ನ ಮಾರಿ ಬಡ ಮಕ್ಕಳಿಗೆ ಅನ್ನ ನೀಡಿದ ಅನ್ನ ಬ್ರಹ್ಮರು ಎನ್ನಿಸಿಕೊಂಡ ಅವರನ್ನು ದಾಸೋಹ ಗಾರುಡಿಗ ಎಂದು ಕರೆಯಲಾಗಿದೆ. ವಚನ ಸಾಹಿತ್ಯ ಕುರಿತು ಕವಯಿತ್ರಿ ಶಾಂತಾ ಬಿರಾದಾರ ಮಾತನಾಡುತ್ತಾ, ವಚನ ಸಾಹಿತ್ಯದಲ್ಲಿ ವೈಜ್ಞಾನಿಕ, ಧಾರ್ಮಿಕ, ಸಾಮಾಜಿಕ ಮೌಲ್ಯಗಳು ವಚನಗಳಲ್ಲಿ ಅಡಗಿವೆ. ವಚನಗಳನ್ನು ಮುಂದಿನ ಯುವ ಜನಾಂಗಕ್ಕೆ ಉಳಿಸಿ ಬೆಳೆಸುವ ಅವಶ್ಯಕತೆಯನ್ನು ಅಂದಿನ 12ನೇ ಶತಮಾನದ ಬಸವೇಶ್ವರರು ಸಮಾಜಕ್ಕಾಗಿ ತಮ್ಮ ಕಾಯಕದ ಮೂಲಕ ದಾಸೋಹದ ಮೂಲಕ ಅನುಭವದ ಮೂಲಕ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು. 12ನೇ ಶತಮಾನದಲ್ಲಿ ಬಸವಾದಿ ಶರಣರಿಂದ ಕೂಡಿದ ಅನುಭವ ಮಂಟಪವು ಯಾವುದೇ ಜಾತಿ ಧರ್ಮ ಜನಾಂಗಕ್ಕೆ ಸೀಮಿತವಾಗದೇ ಎಲ್ಲರೂ ಸಮಾಜದಲ್ಲಿ ಸರಿ ಸಮಾನರು ಅನ್ನುತ್ತಾ ವಿಶೇಷವಾಗಿ ಮಹಿಳೆಯರಿಗೆ ಸ್ವಾತಂತ್ರ್ಯವನ್ನು ಕಲ್ಪಿಸುವ ಕೊಡುವಲ್ಲಿ ಮಹತ್ವದ ಹೆಜ್ಜೆಯನ್ನಿಟ್ಟು ಮಹಿಳೆಯರಿಗೆ ಅವಕಾಶ ಮಾಡಿಕೊಟ್ಟಿದ್ದರು. ಸಮಾಜದಲ್ಲಿ ಹೆಣ್ಣು ಮಕ್ಕಳ ಮೇಲೆ ಇರುವ ಮೌಢ್ಯಗಳನ್ನ ಅಂಧಕಾರಗಳನ್ನು ಹೊಡೆದೊಡಿಸಿ ಮಹಿಳೆಯೂ ಪುರುಷರಂತೆ ಸರಿ ಸಮಾನರು ಅನ್ನೋದನ್ನ ವಚನ ಸಾಹಿತ್ಯದ ಮೂಲಕ ಬಿಂಬಿಸಿದರು. ಇವತ್ತು ಪಾಲಕರ ನಾವುಗಳು ಮಕ್ಕಳಲ್ಲಿ ವಚನಗಳ ಮೂಲಕ ಮಾನವೀಯ ಮೌಲ್ಯಗಳನ್ನು ಉಳಿಸಿ ಬೆಳೆಸುವಲ್ಲಿ ಪ್ರಯತ್ನಿಸಬೇಕು ಎಂದು ವಚನಗಳ ಮೂಲಕ ದೃಷ್ಟಾಂತಗಳನ್ನು ನೀಡಿದರು.

**ಉಳಿಸಿ ಬೆಳೆಸಿಕೊಂಡು ಹೋಗಬೇಕು**

> ಇವತ್ತು ಮಕ್ಕಳು ಮಾನವೀಯ ಮೌಲ್ಯಗಳನ್ನು ಬೆಳೆಸಿಕೊಳ್ಳಬೇಕು. ವಚನಗಳನ್ನು ಅರ್ಥೈಸಿಕೊಂಡು ಗುರು ಹಿರಿಯರಿಗೆ ತಂದೆ ತಾಯಿಗಳ ಹೇಳಿದಂತೆ ಕೇಳಿ ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳಬೇಕು. ಶರಣ ಸಾಹಿತ್ಯ ಪರಿಷತ್ತು ನಿರಂತರವಾಗಿ ಶರಣರ ವಿಚಾರಧಾರೆಗಳನ್ನು ಇವತ್ತಿನ ಸಮಾಜಕ್ಕೆ ಪ್ರಸ್ತುತಪಡಿಸುವಲ್ಲಿ ತನ್ನ ಸಾರ್ಥಕತೆಯನ್ನು ಮೆರೆದಿದೆ.
>
> – ವೀರಣ್ಣ. ಬಿ. ಮರ್ತೂರ, ತಾಲ್ಲೂಕಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ

ಸಾಹಿತ್ಯ, ಧರ್ಮದಲ್ಲಿ ಕಾಣೋ ಅಂತ ವಿಷಯಗಳನ್ನು ವಚನಗಳಲ್ಲಿ ಕಾಣುತ್ತೇವೆ. ಅವುಗಳನ್ನ ಉಳಿಸಿ ಬೆಳೆಸಿಕೊಂಡು ಹೋಗಬೇಕು ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು. ಶಿಕ್ಷಕ ಸುಭಾಷ್ಚಂದ್ರ ಐ ಮನಗೂಳಿ ಶರಣ ಸಾಹಿತ್ಯ ಪರಿಷತ್ತು ನಡೆದು ಬಂದ ದಾರಿ ಹಾಗೂ ದತ್ತಿಗಳ ಕುರಿತು ಪ್ರಾಸ್ತಾವಿಕವಾಗಿ ಮಾತನಾಡಿದರು. ಮುಖ್ಯ ಗುರು ಜಿಎಸ್ ಕೂಡಿ ಸ್ವಾಗತಿಸಿದರು. ಶಿಕ್ಷಕ ಬಿರಾದಾರ ನಿರೂಪಿಸಿ ವಂದಿಸಿದರು.

ವೇದಿಕೆಯ ಮೇಲೆ ವೀರೇಶ ಕುಂಟೋಜಿ, ಚಂದ್ರಕಾಂತ ಅಳಗುಂಡಗಿ ಎಫ್ ಡಿ ಮೇಟಿ, ಮಹಾದೇವಿ ಬಿರಾದಾರ, ಸಾವಿತ್ರಿ ಕಲ್ಯಾಣಶೆಟ್ಟಿ ಹಾಗೂ ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.

# 15 ವರ್ಷದ ಬಾಲಕಿಯನ್ನು ಮದುವೆಯಾದ ಅಧ್ಯಕ್ಷ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಚಿಕ್ಕೋಡಿ

ಹುಕ್ಕೇರಿ ತಾಲ್ಲೂಕಿನ ಬಸ್ಸಾಪುರ ಗ್ರಾಮದಲ್ಲಿ ಗ್ರಾಮ ಪಂಚಾಯ್ತಿ ಅಧ್ಯಕ್ಷನೊಬ್ಬ 15 ವರ್ಷದ ಬಾಲಕಿಯನ್ನು ಮದುವೆಯಾಗಿರುವ ಘಟನೆ ತಡವಾಗಿ ಬೆಳಕಿಗೆ ಬಂದಿದೆ. ಸಚಿವರ ತವರೂರಲ್ಲಿ ಈ ಅಮಾನವೀಯ ಘಟನೆ ನಡೆದಿದ್ದು, ಸಾರ್ವಜನಿಕ ವಲಯದಲ್ಲಿ ಭಾರಿ ಚರ್ಚೆ ಗ್ರಾಸವಾಗಿದೆ. ಯಮಕನಮರಡಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಬರುವ ಬಸ್ಸಾಪುರ ಗ್ರಾಮ ಪಂಚಾಯ್ತಿ ಅಧ್ಯಕ್ಷ ಭೀಮೇಶಿ ಕಾಲಿಮಣಿ ಎಂಬಾತ ಬಾಲ್ಯವಿವಾಹವಾಗಿದ್ದು, ಈ ಸಂಬಂಧ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ದೂರು ದಾಖಲಾಗುತ್ತಿದ್ದಂತೆ ಆರೋಪಿ ಪರಾರಿಯಾಗಿದ್ದು, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಡಾ. ಪ್ರವೀಣ ನೇತೃತ್ವದಲ್ಲಿ ಪೊಲೀಸರು ಆತನ ಪತ್ತೆಗೆ ವಿಶೇಷ ತಂಡ ರಚಿಸಿದ್ದಾರೆ.

## ಬಿಗ್ ಬಾಸ್ ಪ್ರಾರಂಭ ದಿನಾಂಕವನ್ನ ರಿವೀಲ್ ಮಾಡಿದ ಕಿಚ್ಚ



ಕಿಚ್ಚ ಸುದೀಪ್ ನಿರೂಪಣೆಯ ಬಿಗ್ ಬಾಸ್ ಕನ್ನಡ ಸೀಸನ್ 12' ರಿಯಾಲಿಟಿ ಶೋಗೆ ದಿನಗಣನೆ ಶುರುವಾಗಿದೆ. ಈ ಸೀಸನ್ ಅಭಿಮಾನಿಗಳಲ್ಲಿ ಅಪಾರ ಕುತೂಹಲವನ್ನ ಹುಟ್ಟುಹಾಕಿದೆ. ಹೊಸ ಥೀಮ್‌ಗಳು, ರೋಚಕ ಸ್ಪರ್ಧಿಗಳು ಮತ್ತು ಟ್ವಿಸ್ಟ್‌ಗಳೊಂದಿಗೆ ಪ್ರೇಕ್ಷಕರಿಗೆ ಮನರಂಜನೆಯ ರಸದೌತಣವನ್ನ ನೀಡುವ ನಿರೀಕ್ಷೆಯಿದೆ. ಇದೀಗ ಖಾಸಗಿ ಕಾರ್ಯಕ್ರಮವೊಂದರಲ್ಲಿ ಈ ಸೀಸನ್‌ನ ಪ್ರಸಾರ ದಿನಾಂಕವನ್ನ ಕಿಚ್ಚ ಸುದೀಪ್ ಘೋಷಿಸಿದ್ದಾರೆ.

ನಿರ್ಮಾಪಕ ಸಂದೇಶ್ ನಾಗರಾಜ್ ಹುಟ್ಟುಹಬ್ಬ ಕಾರ್ಯಕ್ರಮವನ್ನ ಆಯೋಜಿಸಲಾಗಿತ್ತು. ಮೈಸೂರಿನಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಕಿಚ್ಚ ಸುದೀಪ್ ಗೆಸ್ಟ್ ಆಗಿ ಭಾಗಿಯಾಗಿದ್ದರು. ಕಿಚ್ಚ ವೇದಿಕೆ ಮೇಲೆ ಬರುತ್ತಿದ್ದಂತೆ ಅಭಿಮಾನಿಗಳಲ್ಲಿ ಖುಷಿಯೋ ಖುಷಿ. ಇದೇ ವೇಳೆ, ''ಅತೀ ಶೀಘ್ರದಲ್ಲೇ ಪರದೆ ಮೇಲೆ ಸಿಕ್ತೇನೆ. ಸೆಪ್ಟೆಂಬರ್ 28ರಿಂದ ನಿಮಗೆ ಟಿವಿಯಲ್ಲಿ ಸಿಗುತ್ತೇನೆ. ನಿಮ್ಮ ಪ್ರೀತಿಗೆ ಥ್ಯಾಂಕ್ಯೂ, ಲವ್ ಯೂ ಆಲ್'' ಎಂದು ಕಿಚ್ಚ ಸುದೀಪ್ ಬಿಗ್ ಬಾಸ್ ಕನ್ನಡ ಸೀಸನ್ 12'ರ ಪ್ರಾರಂಭ ದಿನಾಂಕವನ್ನ ರಿವೀಲ್ ಮಾಡಿದ್ದಾರೆ.

ಕನ್ನಡ ಕಿರುತೆರೆಯ ಬಹುನಿರೀಕ್ಷಿತ ರಿಯಾಲಿಟಿ ಶೋ ಬಿಗ್ ಬಾಸ್ ತನ್ನ 12ನೇ ಸೀಸನ್‌ಗೆ ಸಿದ್ಧವಾಗಿದೆ. ಸೆಪ್ಟೆಂಬರ್ 28ರಿಂದ ಕಲರ್ಸ್ ಕನ್ನಡ ವಾಹಿನಿಯಲ್ಲಿ ಪ್ರಾರಂಭವಾಗಲಿರುವ ಈ ಶೋಗೆ ಕಿಚ್ಚ ಸುದೀಪ್ ಅವರೇ ನಿರೂಪಕರಾಗಿ ಮುಂದುವರೆಯುತ್ತಿದ್ದಾರೆ. ಸೆಪ್ಟೆಂಬರ್ 28ರಿಂದ ಬರಲಿದ್ದೇನೆ ಎಂದು ಘೋಷಿಸಿದ್ದು, ಸುದೀಪ್ ಅಭಿಮಾನಿಗಳಲ್ಲಿ ಉತ್ಸಾಹವನ್ನ ತುಂಬಿದೆ.

## ಜನ್ಯ ಬದುಕು ಬದಲಿಸಿದ ಓಂ ಶಕ್ತಿ ದರ್ಶನ



ನಟ ಶಿವರಾಜ್‌ಕುಮಾರ್, ಉಪೇಂದ್ರ, ಹಾಗೂ ರಾಜ್ ಬಿ ಶೆಟ್ಟಿ ನಟನೆಯ 45 ಚಿತ್ರವು ಕನ್ನಡ ಚಿತ್ರರಂಗದಲ್ಲಿ ಒಂದು ಅಪರೂಪದ ಫ್ಯಾಂಟಸಿ ಸಿನಿಮಾವಾಗಿದ್ದು, ಡಿಸೆಂಬರ್ 25ರಂದು ಈ ಸಿನಿಮಾ ತೆರೆ ಕಾಣಲಿದೆ. ಈ ಮಲ್ಟಿಸ್ಟಾರರ್ ಸಿನಿಮಾಗೆ ಆಕ್ಷನ್ ಕಟ್ ಹೇಳುವುದರ ಮೂಲಕ ಸಂಗೀತ ನಿರ್ದೇಶಕ ಅರ್ಜುನ್ ಜನ್ಯ ಅವರು ನಿರ್ದೇಶಕರ ಸಾಲಿಗೆ ಸೇರ್ಪಡೆಗೊಳ್ಳುತ್ತಿದ್ದಾರೆ. ಅರ್ಜುನ್ ಜನ್ಯರ ಜೀವನದಲ್ಲಿ ಆಧ್ಯಾತ್ಮಿಕ ಶಕ್ತಿಯ ನಂಬಿಕೆ ಸಾಕಷ್ಟು ಬದಲಾವಣೆಗಳನ್ನ ಮಾಡಿದೆಯಂತೆ. ನಾನು ನನ್ನ ಎಕ್ಸ್‌ಪೀರಿಯನ್ಸ್ ಮಾತ್ರ ಹೇಳಬಲ್ಲೆ. ನಾನು ತುಂಬಾ ಕನಸು ಕಂಡು ಲೈಫ್‌ನಲ್ಲಿ ಏನಾದರೂ ಮಾಡಬೇಕು ಅಂತ ಹೋರಾಟ, ದಿಕ್ಕು-ದೆಸೆ ಏನೂ ಇಲ್ಲದೇ, ಲೈಫ್‌ನಲ್ಲಿ ಬರೀ ಕನಸುಗಳೇ ಇದ್ದಾಗ, 2005ರಲ್ಲಿ ಒಂದು ದಿನ ಅಮ್ಮ ಆದಿಪರಾಶಕ್ತಿ ದೇವಸ್ಥಾನಕ್ಕೆ ಹೋಗುವಂತಹ ಅವಕಾಶ ಸಿಕ್ಕಿತು. ನಾನು ಮೊದಲು ಆ ದೇವಸ್ಥಾನದ ಮಣ್ಣಲ್ಲಿ ಕಾಲಿಟ್ಟೆ. ಅಲ್ಲಿ ಗುರುಗಳಿದ್ದಾರೆ, ಅವರನ್ನ ನೋಡೋದೆ ಬಹಳ ಅಪರೂಪ. ಅವರನ್ನ ನೋಡಲು ಜನ ಕ್ಯೂನಲ್ಲಿ ನಿಲ್ಲುತ್ತಾರೆ. ಅಥವಾ ತುಂಬಾ ದೂರದಿಂದ ಕೈ ಮುಗಿಯುತ್ತಾರೆ. ಅದು ಏನು ಅಂತ ಗೊತ್ತಿಲ್ಲ, ಅವತ್ತು ನಾನು ನನ್ನ ಪಾಡಿಗೆ ದೇವಸ್ಥಾನದ ಬಳಿ ನಡೆದುಕೊಂಡು ಹೋಗುತ್ತಿದ್ದೆ. ಅವರು ಸಾಮಾನ್ಯ ಮನುಷ್ಯರಂತೆ ನನ್ನ ಎದುರುಗಡೆ ನಡೆದುಕೊಂಡು ಬರುತ್ತಿದ್ದರು. ಆಗ ಅವರೇ ಅದು ಅಂತಲೂ ನನಗೆ ಗೊತ್ತಿರಲಿಲ್ಲ. ಅವರು ತುಳಿದ ಮಣ್ಣನ್ನ ತೆಗೆದುಕೊಂಡು ಅಲ್ಲಿದ್ದ ಜನ ಹಣೆಗೆ ಇಟ್ಟುಕೊಂಡರು. ಅದೇ ಮೊದಲು ನನಗೆ ಗುರುಗಳು ಎದುರುಗಡೆ ಸಿಕ್ಕಿದ್ದು'' ಎಂದು ಇತ್ತೀಚೆಗೆ ನೀಡಿದ ಸಂದರ್ಶನವೊಂದರಲ್ಲಿ ಅರ್ಜುನ್ ಜನ್ಯ ಹೇಳಿಕೊಂಡಿದ್ದಾರೆ.

**ಕುಡಿದು ದೇವಸ್ಥಾನಕ್ಕೆ ಹೋದಾಗ..!:** ''ಅಲ್ಲಿಂದ ಅಮ್ಮನವರ ದರ್ಶನ ಮಾಡಲು ಹೋದೆ. ದರ್ಶನ ಮಾಡಿದ ಕ್ಷಣ ನನ್ನ ದೇಹದಲ್ಲಿನ ಜೀವಕೋಶಗಳು ಎಲ್ಲವೂ ಅಳುವುದಕ್ಕೆ ಶುರು ಮಾಡಿತ್ತು. ಅಮ್ಮನವರನ್ನ ನೋಡಿ ಸುಮ್ಮನೆ ಅಳುತ್ತಿದ್ದೆ. ಆ ದಿವ್ಯಶಕ್ತಿ ನನಗೆ ಏನು ಹೇಳುತ್ತಿತ್ತು ಅನ್ನೋದು ನನಗೆ ಗೊತ್ತಿಲ್ಲ. ನೇರವಾಗಿ ನಾನು ಹೇಳುವುದೇನೆಂದರೆ, ನಾನು ತುಂಬಾ ಕುಡಿಯುತ್ತಿದ್ದೆ. ನಾನು ಆರ್ಕೆಸ್ಟ್ರಾದಲ್ಲಿ ಕೆಲಸ ಮಾಡುತ್ತಿದ್ದಾಗ, ಅಲ್ಲಿನ ಲೈಫ್ ಬೇರೆ ಇತ್ತು. ದೇವಸ್ಥಾನಕ್ಕೆ ಹೋಗುವ ಹಿಂದಿನ ದಿನವೂ ನಾನು ಮನೆಯಲ್ಲಿ ಕುಡಿದಿದ್ದೆ. ಅಮ್ಮನವರ ಎದುರುಗಡೆ ಹೋಗಿ ನಿಂತುಕೊಂಡ ತಕ್ಷಣ, ಕುಡಿದುಬಿಟ್ಟು ದೇವಸ್ಥಾನಕ್ಕೆ ಬರುವಷ್ಟು ಧೈರ್ಯನಾ? ಅನ್ನೋ ತರಹ ಅಮ್ಮ ನನಗೆ ಪ್ರಶ್ನೆ ಮಾಡಿದಂತೆ ಆಯ್ತು. ನನ್ನಲ್ಲಿ ತಪ್ಪಿತಸ್ಥ ಭಾವನೆ ಇತ್ತು. ಆ ಕ್ಷಣ ನಾನು ಇನ್ನು ಮುಂದೆ ಕುಡಿಯುವುದಿಲ್ಲ ಅಂತ ಅಂದುಕೊಂಡೆ'' ಎಂದರು ಅರ್ಜುನ್ ಜನ್ಯ.

## ಮತ್ತೊಂದು ಹಾರರ್ ಸಿನಿಮಾನಲ್ಲಿ ರಶ್ಮಿಕಾ



ರಶ್ಮಿಕಾ ಮಂದಣ್ಣ ಈಗ ಪ್ಯಾನ್ ಇಂಡಿಯಾ ಸ್ಟಾರ್ ನಟಿ. ಅವರನ್ನು ನಾಯಕಿಯಾಗಿ ಹಾಕಿಕೊಳ್ಳಲು ದೊಡ್ಡ-ದೊಡ್ಡ ಸ್ಟಾರ್ ನಟರು ತುದಿ ಗಾಲಲ್ಲಿ ನಿಂತಿದ್ದಾರೆ. ಸೂಪರ್ ಸ್ಟಾರ್‌ಗಳಾದ ರಣ್‌ಬೀರ್ ಕಪೂರ್, ಸಲ್ಮಾನ್ ಖಾನ್, ಅಲ್ಲು ಅರ್ಜುನ್ ಇನ್ನೂ ಹಲವರ ಜೊತೆಗೆ ತೆರೆ ಹಂಚಿಕೊಂಡಿದ್ದಾರೆ ರಶ್ಮಿಕಾ. ಇದೀಗ ತಮಿಳಿನ ರಾಘವ್ ಲಾರೆನ್ಸ್ ಜೊತೆ ಹೊಸ ಸಿನಿಮಾನಲ್ಲಿ ನಟಿಸಲು ರೆಡಿಯಾಗಿದ್ದಾರೆ. ಆ ಮೂಲಕ ತಮಗೆ ಕತೆಯಷ್ಟೆ ಮುಖ್ಯ ಎಂಬುದನ್ನು ಈ ಮೂಲಕ ಸಾಬೀತು ಮಾಡಿದ್ದಾರೆ ನಟಿ. ರಾಘವ್ ಲಾರೆನ್ಸ್ ತಮಿಳಿನ ಜನಪ್ರಿಯ ನಟರಾದರೂ ಸಹ ಎ ಸಾಲಿನ ಸ್ಟಾರ್ ನಟರಲ್ಲ. ಜೊತೆಗೆ ಹಾರರ್ ಥ್ರಿಲ್ಲರ್ ಸಿನಿಮಾಗಳ ಮೂಲಕವೇ ಅವರು ಪ್ರೇಕ್ಷಕರನ್ನು ಸೆಳೆಯುತ್ತಾ ಬಂದಿದ್ದಾರೆ. ಎ ಲಿಸ್ಟೆಡ್ ನಟಿಯರು ರಾಘವ್ ಜೊತೆಗೆ ನಟಿಸಿದ್ದಿಲ್ಲ. ಆದರೆ ರಶ್ಮಿಕಾ ಅದ್ಯಾವುದರ ಬಗ್ಗೆಯೂ ತಲೆ ಕೆಡಿಸಿಕೊಳ್ಳದೆ ರಾಘವ್ ಜೊತೆಗೆ ನಟಿಸಲು ಒಪ್ಪಿದ್ದಾರೆ. ರಾಘವ್ ಅವರ ಜನಪ್ರಿಯ ಹಾರರ್ ಸಿನಿಮಾ ಸರಣಿಯಾದ 'ಕಾಂಚನಾ'ದ ಮುಂದಿನ ಭಾಗದಲ್ಲಿ ರಶ್ಮಿಕಾ ಸಹ ನಟಿಸಲಿದ್ದಾರೆ. ಈ ಮೊದಲು 'ಕಾಂಚನಾ 4' ಸಿನಿಮಾನಲ್ಲಿ ಪೂಜಾ ಹೆಗ್ಡೆ ನಟಿಸಲಿದ್ದಾರೆ ಎನ್ನಲಾಗಿತ್ತು. ಈ ಬಗ್ಗೆ ಕೆಲ ವಾರಗಳ ಮುಂಚೆ ಸುದ್ದಿಗಳು ಹರಿದಾಡಿದ್ದವು.

ಆದರೆ ಇದೀಗ ಪೂಜಾ ಹೆಗ್ಡೆ ಬದಲಿಗೆ ರಶ್ಮಿಕಾ ಮಂದಣ್ಣ ಹೆಸರು ಕೇಳಿ ಬರುತ್ತಿದೆ. ಸಿನಿಮಾನಲ್ಲಿ ರಾಘವ್ ಲಾರೆನ್ಸ್ ಎದುರು ದೆವ್ವದ ಪಾತ್ರದಲ್ಲಿ ರಶ್ಮಿಕಾ ಮಂದಣ್ಣ ನಟಿಸಲಿದ್ದಾರಂತೆ. ಸಿನಿಮಾದ ಬಗ್ಗೆ ಮಾತುಕತೆ ಸಂಪೂರ್ಣವಾಗಿದ್ದು ಕೆಲವೇ ತಿಂಗಳಲ್ಲಿ ಸಿನಿಮಾದ ಚಿತ್ರೀಕರಣ ಪ್ರಾರಂಭವಾಗಲಿದೆ. 'ಕಾಂಚನಾ 4' ಸಿನಿಮಾವನ್ನು ಅದ್ಧೂರಿಯಾಗಿ ನಿರ್ಮಾಣ ಮಾಡಲು ರಾಘವ್ ಲಾರೆನ್ಸ್ ಮುಂದಾಗಿದ್ದಾರೆ. ಈ ಹಿಂದಿನ 'ಕಾಂಚನಾ' ಸಿನಿಮಾಗಳಲ್ಲಿ ರಾಘವ್ ಅವರೇ ದೆವ್ವದ ಪಾತ್ರದಲ್ಲಿ ನಟಿಸಿದ್ದರು. ಆದರೆ 'ಕಾಂಚನಾ 4' ಸಿನಿಮಾನಲ್ಲಿ ರಾಘವ್ ಜೊತೆಗೆ ರಶ್ಮಿಕಾ ಸಹ ದೆವ್ವವಾಗಿ ಕಾಣಿಸಿಕೊಳ್ಳಲಿದ್ದಾರೆ. ಅಂದಹಾಗೆ ರಶ್ಮಿಕಾ ಒಂದರ ಹಿಂದೊಂದರಂತೆ ಹಾರರ್ ಸಿನಿಮಾನಲ್ಲಿ ನಟಿಸುತ್ತಿದ್ದಾರೆ.


## ಕನ್ನಡದ ನಟನ ಸಾಧನೆಗೆ ಟೆಕ್ಸಾಸ್‌ನಲ್ಲಿ ಸನ್ಮಾನ



ಅಮೆರಿಕದ ಟೆಕ್ಸಾಸ್‌ನ ಆಸ್ಟಿನ್‌ನಲ್ಲಿ 2025ರ ಆಗಸ್ಟ್ 23ರಂದು ನಡೆದ ಡೇ ಆಫ್ ಗ್ರಾಟಿಟ್ಯೂಡ್ 2025 ಸಮಾರಂಭದಲ್ಲಿ ಕನ್ನಡ ಚಿತ್ರರಂಗದ ನಟ, ನಿರ್ದೇಶಕ ರಮೇಶ್‌ಅರವಿಂದ್ ಅವರಿಗೆ ರಮೇಶ್ ಅರವಿಂದ್ ಡೇ ಆಚರಿಸಿ ವಿಶೇಷ ಗೌರವ ಸಲ್ಲಿಸಲಾಯಿತು.


ಅಮೆರಿಕದ ಟೆಕ್ಸಾಸ್, ಆಸ್ಟಿನ್ ನಗರದಲ್ಲಿ ನಡೆದ ಡೇ ಆಫ್ ಗ್ರಾಟಿಟ್ಯೂಡ್ 2025 ಕಾರ್ಯಕ್ರಮದಲ್ಲಿ ರಮೇಶ್ ಅರವಿಂದ್ ಅವರಿಗೆ ರಮೇಶ್ ಅರವಿಂದ್ ಡೇ ಆಚರಿಸಿ, ಅವರನ್ನ ಗೌರವಿಸಲಾಯಿತು. ಆಸ್ಟಿನ್ ನಗರದ ಪ್ರೋಕ್ಲಮೇಷನ್ ಡೇ ದಿನದಂದು ಅಲ್ಲಿನ ಮೇಯರ್, ಪ್ರೊಟೆಮ್ ವನೀಸಾ ಇವರು ಟೆಕ್ಸನ್ ಗವರ್ನರ್ ಗ್ರೆಗ್ ಅಬೌಟ್ ಅವರ ಸಂದೇಶದ ಸನ್ಮಾನ ಪತ್ರವನ್ನು ನೀಡಿ ಗೌರವಿಸಿದರು. ಗ್ರಾಟಿಟ್ಯೂಟ್ ಡೇ ಸಂಸ್ಥಾಪಕ ಎಂಜೆ ಚಾರ್ಮನಿ ಇವರ ಸ್ವಾಗತದೊಂದಿಗೆ ಆಗಸ್ಟ್ 23 ರಂದು ಸಾವಿರಾರು ಗಣ್ಯರ ಸಮ್ಮುಖದಲ್ಲಿ ಈ ಸನ್ಮಾನ ಕಾರ್ಯಕ್ರಮ ನಡೆಯಿತು. ಆಸ್ಟಿನ್ ನಗರದ ಚೀಫ್ ಲರ್ನಿಂಗ್ ಆಫೀಸರ್, ಮೀಚಲೇ ಲಾ ಟೋರನ್ ಈ ವೇಳೆ ಉಪಸ್ಥಿತರಿದ್ದರು.

## ಪ್ರವಾಹ ಪೀಡಿತರಿಗಾಗಿ ಮಿಡಿದ ಬಾಲಯ್ಯನ ಮನ: 50 ಲಕ್ಷ ದೇಣಿಗೆ



ನಂದಮೂರಿ ಬಾಲಕೃಷ್ಣ, ತೆಲುಗು ಚಿತ್ರರಂಗದ ಸ್ಟಾರ್ ನಟ ಜೊತೆಗೆ ಸಕ್ರಿಯ ರಾಜಕಾರಣಿ. ಬಾಲಯ್ಯ ತಮ್ಮ ಪವರ್‌ಫುಲ್ ಆಕ್ಷನ್ ಸಿನಿಮಾಗಳಿಂದ ಜನಪ್ರಿಯರು. ಅವರ ಡೈಲಾಗ್‌ಗಳಿಗೆ ಜನ ಹುಚ್ಚೆದ್ದು ಕುಣಿಯುತ್ತಾರೆ. ಸಿನಿಮಾಗಳಲ್ಲಿ ಮಾತ್ರವಲ್ಲದೆ ಬಹಿರಂಗ ಕಾರ್ಯಕ್ರಮಗಳಲ್ಲಿಯೂ ಸಹ ಅವರು ತಮ್ಮ ಮ್ಯಾನರಿಸಂಗಳಿಂದ, ನೇರಾ-ನೇರ ಖಡಕ್ ಮಾತುಗಳಿಂದ ಜನರನ್ನು ರಂಜಿಸುತ್ತಾರೆ. ಜೊತೆಗೆ ಮಹಾ ಕೋಪಿಷ್ಟರು ಸಹ. ಆದರೆ ಅವರ ಆಪ್ತರು ಹೇಳುವಂತೆ ಬಾಲಯ್ಯ ಬಹಳ ಮೃದು ಮನಸ್ಸಿನವರು, ಪರರ ಕಷ್ಟಕ್ಕೆ ಬೇಗನೆ ಕರಗುವವರು. ಇದೀಗ ಬಾಲಯ್ಯನ ಮಾನವೀಯ ಮುಖ ಮತ್ತೊಮ್ಮೆ ಬೆಳಕಿಗೆ ಬಂದಿದೆ. ಬಾಲಕೃಷ್ಣ, ಆಂಧ್ರ ಪ್ರದೇಶದ ಹಿಂದೂಪುರದ ಹಾಲಿ ಶಾಸಕ. ಈ ಬಾರಿ ಅವರಿಗೆ ಸರ್ಕಾರದಲ್ಲಿ ಸಚಿವ ಸ್ಥಾನ ದೊರೆತಿಲ್ಲ. ಇದೀಗ ಆಂಧ್ರದ ನೆರೆಯ ರಾಜ್ಯವಾಗಿರುವ ತೆಲಂಗಾಣದಲ್ಲಿ ಭಾರಿ ಮಳೆಗೆ ಪ್ರವಾಹ ಪರಿಸ್ಥಿತಿ ಉಂಟಾಗಿದೆ. ತೆಲುಗು ರಾಜ್ಯದ ಜನರ ಕಷ್ಟಕ್ಕೆ ಮರುಗಿರುವ ಬಾಲಯ್ಯ, ಪಕ್ಷ ಭೇದ ಮರೆತು ನೆರೆ ಸಂತ್ರಸ್ತರ ಸಹಾಯಕ್ಕೆ ಧಾವಿಸಿದ್ದಾರೆ. ನೆರೆ ಪರಿಹಾರಕ್ಕೆ ಬರೋಬ್ಬರಿ 50 ಲಕ್ಷ ರೂಪಾಯಿ ಹಣವನ್ನು ದೇಣಿಗೆ ನೀಡಿದ್ದಾರೆ. ತೆಲಂಗಾಣದ ಮುಖ್ಯಮಂತ್ರಿ ಪರಿಹಾರ ನಿಧಿಗೆ 50 ಲಕ್ಷ ರೂಪಾಯಿ ಹಣವನ್ನು ನಂದಮೂರಿ ಬಾಲಕೃಷ್ಣ ದೇಣಿಗೆಯಾಗಿ ನೀಡಿದ್ದಾರೆ. ಇತ್ತೀಚೆಗಷ್ಟೆ ಬಾಲಕೃಷ್ಣ ಅವರ ಸಿನಿಮಾ ಮತ್ತು ಸಮಾಜ ಸೇವೆಯನ್ನು ಗುರುತಿಸಿ ಅವರಿಗೆ ವರ್ಲ್ಡ್ ಬುಕ್ ಆಫ್ ರೆಕಾರ್ಡ್ಸ್ ಲಂಡನ್‌ನವರು ಸನ್ಮಾನಿಸಿದ್ದಾರೆ. ಇದೇ ಕಾರಣಕ್ಕೆ ಇತ್ತೀಚೆಗೆ ಬಾಲಯ್ಯ ಅವರಿಗೆ ಅಭಿನಂದನೆ ಸಲ್ಲಿಸಲಾಯ್ತು. ಕಾರ್ಯಕ್ರಮದಲ್ಲಿ ಮಾತನಾಡಿದ ಬಾಲಯ್ಯ, 'ತೆಲಂಗಾಣ ಪ್ರವಾಹ ಪೀಡಿತರ ಸಹಾಯಾರ್ಥವಾಗಿ 50 ಲಕ್ಷ ರೂಪಾಯಿ ದನರಾಶಿಯನ್ನು ಸಿಎಂ ಪರಿಹಾರ ನಿಧಿಗೆ ನೀಡಲಿದ್ದೇನೆ' ಎಂದರು.

## ವೈಡ್ ಬಾಲಗೆ ಔಟಾದ ಹೋಪ್



ಕೆರಿಬಿಯನ್ ಪ್ರೀಮಿಯರ್ ಲೀಗ್‌ನ 17ನೇ ಪಂದ್ಯದ ವಿಡಿಯೋವೊಂದು ಸೋಷಿಯಲ್ ಮೀಡಿಯಾದಲ್ಲಿ ವೈರಲ್ ಆಗಿದೆ. ಈ ವಿಡಿಯೋ ವೈರಲ್ ಆಗಲು ಮುಖ್ಯ ಕಾರಣ ಗಯಾನಾ ಅಮೆಝಾನ್ ವಾರಿಯರ್ಸ್ ತಂಡದ ಆಟಗಾರ ಶಾಯ್ ಹೋಪ್ ವೈಡ್ ಬಾಲ್‌ಗೆ ಔಟಾಗಿರುವುದು. ಅದು ಸಹ ವಿಚಿತ್ರವಾಗಿ ಎಂಬುದು ವಿಶೇಷ. ಟ್ರಿನ್‌ಬಾಗೊ ನೈಟ್ ರೈಡರ್ಸ್ ವಿರುದ್ಧದ ಈ ಪಂದ್ಯದ 14ನೇ ಓವರ್‌ನ ಕೊನೆಯ ಎಸೆತದಲ್ಲಿ ಟೆರೆನ್ಸ್ ಹಿಂಡ್ಸ್ ವೈಡ್ ಎಸೆದಿದ್ದರು. ಈ ವೈಡ್ ಎಸೆತಕ್ಕೆ ಸ್ವಿಚ್ ಹಿಟ್ ಶಾಟ್ ಬಾರಿಸಲು ಯತ್ನಿಸಿ ಶಾಯ್ ಹೋಪ್ ಹಿಟ್ ವಿಕೆಟ್ ಆಗಿದ್ದಾರೆ. ಇದೀಗ ವೈಡ್ ಎಸೆತದಲ್ಲಿ ವಿಕೆಟ್ ಕೈಚೆಲ್ಲಿರುವ ಶಾಯ್ ಹೋಪ್ ಅವರ ವಿಡಿಯೋ ಸೋಷಿಯಲ್ ಮೀಡಿಯಾದಲ್ಲಿ ವೈರಲ್ ಆಗಿದೆ. ಇನ್ನು ಈ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಗಯಾನಾ ಅಮೆಝಾನ್ ವಾರಿಯರ್ಸ್ ತಂಡವು 20 ಓವರ್‌ಗಳಲ್ಲಿ 9 ವಿಕೆಟ್ ಕಳೆದುಕೊಂಡು 163 ರನ್ ಕಲೆಹಾಕಿತು. ಈ ಗುರಿಯನ್ನು ಬೆನ್ನತ್ತಿದ ಟ್ರಿನ್ ಬಾಗೊ ನೈಟ್ ರೈಡರ್ಸ್ ಪರ ಅಲೆಕ್ಸ್ ಹೇಲ್ಸ್ 74 ರನ್ ಬಾರಿಸಿದರೆ, ಕಾಲಿನ್ ಮನ್ರೊ 52 ರನ್ ಸಿಡಿಸಿದರು. ಈ ಅರ್ಧಶತಕಗಳ ನೆರವಿನೊಂದಿಗೆ ಟ್ರಿನ್‌ಬಾಗೊ ನೈಟ್ ರೈಡರ್ಸ್ ತಂಡವು 17.2 ಓವರ್‌ಗಳಲ್ಲಿ 169 ರನ್ ಬಾರಿಸಿ 6 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿದೆ.

## ವಿಶ್ವ ದಾಖಲೆ ಬರೆದ ಕೀರನ್ ಪೊಲಾರ್ಡ್



ಟಿ20 ಕ್ರಿಕೆಟ್ ಇತಿಹಾಸದಲ್ಲಿ ಯಾರಿಂದಲೂ ಸಾಧ್ಯವಾಗದ ವಿಶೇಷ ವಿಶ್ವ ದಾಖಲೆ ಬರೆದಿದ್ದಾರೆ ವೆಸ್ಟ್ ಇಂಡೀಸ್‌ನ ಕೀರನ್ ಪೊಲಾರ್ಡ್. ಕೆರಿಬಿಯನ್ ಪ್ರೀಮಿಯರ್ ಲೀಗ್‌ನಲ್ಲಿ ನಡೆದ ಬಾರ್ಬೊಡೋಸ್ ರಾಯಲ್ಸ್ ವಿರುದ್ಧದ ಪಂದ್ಯದಲ್ಲಿ ಪೊಲಾರ್ಡ್ 19 ರನ್ ಬಾರಿಸಿದ್ದರು. ಈ 19 ರನ್‌ಗಗಳೊಂದಿಗೆ ಟಿ20 ಕ್ರಿಕೆಟ್ ಇತಿಹಾಸದಲ್ಲಿ 14 ಸಾವಿರ ರನ್ ಕಲೆಹಾಕಿದ 2ನೇ ಬ್ಯಾಟರ್ ಎಂಬ ಹೆಗ್ಗಳಿಕೆಯನ್ನು ಕೀರನ್ ಪೊಲಾರ್ಡ್ ತಮ್ಮದಾಗಿಸಿಕೊಂಡಿದ್ದಾರೆ. ಇದರ ಜೊತೆಗೆ ಟಿ20 ಕ್ರಿಕೆಟ್ ಇತಿಹಾಸದಲ್ಲಿ 14 ಸಾವಿರ ರನ್ ಹಾಗೂ 300 ವಿಕೆಟ್ ಕಬಳಿಸಿದ ವಿಶ್ವ ಏಕೈಕ ಆಟಗಾರ ಎಂಬ ವಿಶ್ವ ದಾಖಲೆಯನ್ನು ಕೀರನ್ ಪೊಲಾರ್ಡ್ ನಿರ್ಮಿಸಿದ್ದಾರೆ. ಅಂದರೆ ಟಿ20 ಕ್ರಿಕೆಟ್‌ನಲ್ಲಿ 9 ಬ್ಯಾಟರ್‌ಗಳು 12 ಸಾವಿರಕ್ಕೂ ಅಧಿಕ ರನ್ ಕಲೆಹಾಕಿದ್ದಾರೆ. ಹಾಗೆಯೇ 30 ಬೌಲರ್‌ಗಳು 300ಕ್ಕೂ ಹೆಚ್ಚು ವಿಕೆಟ್ ಕಬಳಿಸಿದ್ದಾರೆ.

ಆದರೆ 14 ಸಾವಿರ ರನ್‌ಗಳ ಜೊತೆ 300 ವಿಕೆಟ್ ಕಬಳಿಸಿರುವುದು ಕೀರನ್ ಪೊಲಾರ್ಡ್ ಮಾತ್ರ. ಈ ಮೂಲಕ ಚುಟುಕು ಕ್ರಿಕೆಟ್ ಇತಿಹಾಸದಲ್ಲೇ ಯಾರಿಂದಲೂ ಸಾಧ್ಯವಾಗದ ಅಪರೂಪದ ವರ್ಲ್ಡ್ ರೆಕಾರ್ಡ್ ಬರೆಯುವಲ್ಲಿ ಪೊಲಾರ್ಡ್ ಯಶಸ್ವಿಯಾಗಿದ್ದಾರೆ. ಇನ್ನು ಟಿ20 ಕ್ರಿಕೆಟ್‌ನಲ್ಲಿ ಅತ್ಯಧಿಕ ರನ್ ಗಳಿಸಿರುವುದ ವೆಸ್ಟ್ ಇಂಡೀಸ್‌ನ ಸ್ಫೋಟಕ ದಾಂಡಿಗ ಕ್ರಿಸ್ ಗೇಲ್. ಟಿ20 ಕ್ರಿಕೆಟ್‌ನಲ್ಲಿ 455 ಇನಿಂಗ್ಸ್ ಆಡಿರುವ ಗೇಲ್ 10060 ಎಸೆತಗಳನ್ನು ಎದುರಿಸಿ ಒಟ್ಟು 14562 ರನ್ ಕಲೆಹಾಕಿದ್ದಾರೆ. ಈ ಮೂಲಕ ಟಿ20 ಕ್ರಿಕೆಟ್ ಇತಿಹಾಸದ ರನ್ ಸರದಾರ ಎಂಬ ವಿಶ್ವ ದಾಖಲೆಯನ್ನು ನಿರ್ಮಿಸಿದ್ದಾರೆ.

ಹಾಗೆಯೇ ಟಿ20 ಕ್ರಿಕೆಟ್ ಇತಿಹಾಸದಲ್ಲೇ ಅತ್ಯಧಿಕ ವಿಕೆಟ್ ಕಬಳಿಸಿದ ವಿಶ್ವ ದಾಖಲೆ ಅಫ್ಘಾನಿಸ್ತಾನದ ರಶೀದ್ ಖಾನ್ ಹೆಸರಿನಲ್ಲಿದೆ. 483 ಟಿ20 ಇನಿಂಗ್ಸ್‌ಗಳಲ್ಲಿ ಬೌಲಿಂಗ್ ಮಾಡಿರುವ ರಶೀದ್ ಖಾನ್ ಈವರೆಗೆ 660 ವಿಕೆಟ್‌ಗಳನ್ನು ಕಬಳಿಸಿದ್ದಾರೆ. ಈ ಮೂಲಕ ಟಿ20 ಇತಿಹಾಸದಲ್ಲೇ 650+ ವಿಕೆಟ್ ಪಡೆದ ಏಕೈಕ ಬೌಲರ್ ಎಂಬ ವಿಶ್ವ ದಾಖಲೆಯನ್ನು ನಿರ್ಮಿಸಿದ್ದಾರೆ. ಟಿ20 ರನ್ ಸರದಾರರ ಪಟ್ಟಿಯಲ್ಲೂ ಅಗ್ರಸ್ಥಾನಕ್ಕೇರಲಿದ್ದಾರೆ.

## ಆಸಿಫ್ ಖಾನ್ ಸಿಡಿಲಬ್ಬರಕ್ಕೆ ನಡುಗಿದ ಪಾಕ್ ಬೌಲರ್‌ಗಳು



ಶಾರ್ಜಾ ಕ್ರಿಕೆಟ್ ಸ್ಟೇಡಿಯಂನಲ್ಲಿ ನಡೆದ ತ್ರಿಕೋನ ಸರಣಿಯ 2ನೇ ಪಂದ್ಯದಲ್ಲೂ ಪಾಕಿಸ್ತಾನ್ ತಂಡ ಜಯ ಸಾಧಿಸಿದೆ. ಯುಎಇ ವಿರುದ್ಧದ ಈ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟ್ ಮಾಡಿದ ಪಾಕ್ ಪರ ಆರಂಭಿಕ ದಾಂಡಿಗ ಸೈಮ್ ಅಯ್ಯೂಬ್ (69) ಅರ್ಧಶತಕ ಬಾರಿಸಿದರು. ಇನ್ನು ಮಧ್ಯಮ ಕ್ರಮಾಂಕದಲ್ಲಿ ಬ್ಯಾಟ್ ಬೀಸಿದ ಹಸನ್ ನವಾಝ್ 56 ರನ್‌ಗಳಿಸಿದರು. ಈ ಮೂಲಕ ಪಾಕಿಸ್ತಾನ್ ತಂಡವು 20 ಓವರ್‌ಗಳಲ್ಲಿ 207 ರನ್ ಕಲೆಹಾಕಿತು. 208 ರನ್‌ಗಳ ಕಠಿಣ ಗುರಿ ಬೆನ್ನತ್ತಿದ ಯುಎಇ ತಂಡವು ನಿರೀಕ್ಷಿತ ಆರಂಭ ಪಡೆದಿರಲಿಲ್ಲ. ಕೇವಲ 76 ರನ್‌ಗಳಿಸುವಷ್ಟರಲ್ಲಿ ಪ್ರಮುಖ 5 ವಿಕೆಟ್ ಕಳೆದುಕೊಂಡು ಸೋಲಿನತ್ತ ಮುಖ ಮಾಡಿತ್ತು. ಆದರೆ ಈ ಹಂತದಲ್ಲಿ ಕಣಕ್ಕಿಳಿದ ಆಸಿಫ್ ಖಾನ್ ಸಿಡಿಲಬ್ಬರದ ಬ್ಯಾಟಿಂಗ್ ಪ್ರದರ್ಶಿಸಿದರು. ಕೇವಲ 35 ಎಸೆತಗಳನ್ನು ಎದುರಿಸಿದ ಆಸಿಫ್ ಖಾನ್ 6 ಭರ್ಜರಿ ಸಿಕ್ಸ್ ಹಾಗೂ 6 ಫೋರ್‌ಗಳೊಂದಿಗೆ ಪಾಕ್ ಬೌಲರ್‌ಗಳ ಬೆಂಡೆತ್ತಿದರು. ಈ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಆಸಿಫ್ ಯುಎಇ ತಂಡಕ್ಕೆ ಗೆಲುವಿನ ಭರವಸೆ ಮೂಡಿಸಿದ್ದರು.

## ಅಲೆಕ್ಸ್ ಅಬ್ಬರಕ್ಕೆ ಕ್ರಿಸ್ ಗೇಲ್ ವಿಶ್ವ ದಾಖಲೆಯೇ ಶೇಕಿಂಗ್



ಟಿ20 ಕ್ರಿಕೆಟ್‌ನಲ್ಲಿ ಇಂಗ್ಲೆಂಡ್ ದಾಂಡಿಗ ಅಲೆಕ್ಸ್ ಹೇಲ್ಸ್ ಅಬ್ಬರ ಮುಂದುವರೆದಿದೆ. ಪ್ರಸ್ತುತ ನಡೆಯುತ್ತಿರುವ ಕೆರಿಬಿಯನ್ ಪ್ರೀಮಿಯರ್ ಲೀಗ್‌ನಲ್ಲಿ ಟ್ರಿನ್‌ಬಾಗೊ ನೈಟ್ ರೈಡರ್ಸ್ ಪರ ಪರ ಕಣಕ್ಕಿಳಿಯುತ್ತಿರುವ ಹೇಲ್ಸ್, ಗಯಾನಾ ಅಮೆಝಾನ್ ವಾರಿಯರ್ಸ್ ವಿರುದ್ಧದ ಪಂದ್ಯದಲ್ಲಿ 43 ಎಸೆತಗಳಲ್ಲಿ 74 ರನ್ ಸಿಡಿಸಿದ್ದಾರೆ. ಈ ಅರ್ಧಶತಕದೊಂದಿಗೆ ಅಲೆಕ್ಸ್ ಹೇಲ್ಸ್ ಟಿ20 ಕ್ರಿಕೆಟ್‌ನಲ್ಲಿ 14 ಸಾವಿರ ರನ್ ಪೂರೈಸಿದ್ದಾರೆ.

ಈ ಮೂಲಕ ಟಿ20 ಇತಿಹಾಸದಲ್ಲಿ 14000 ರನ್ ಕಲೆಹಾಕಿದ ಇಂಗ್ಲೆಂಡ್‌ನ ಮೊದಲ ಬ್ಯಾಟರ್ ಎನಿಸಿಕೊಂಡಿದ್ದಾರೆ. ಹಾಗೆಯೇ ಈ ಸಾಧನೆ ಮಾಡಿದ ವಿಶ್ವದ 3ನೇ ಬ್ಯಾಟರ್ ಎಂಬ ಹೆಗ್ಗಳಿಕೆಗೂ ಪಾತ್ರರಾಗಿದ್ದಾರೆ.

ಟಿ20 ಕ್ರಿಕೆಟ್‌ನಲ್ಲಿ ಅತ್ಯಧಿಕ ರನ್ ಕಲೆಹಾಕಿದ ವಿಶ್ವ ದಾಖಲೆ ವೆಸ್ಟ್ ಇಂಡೀಸ್ ಕ್ರಿಕೆಟಿಗ ಕ್ರಿಸ್ ಗೇಲ್ ಹೆಸರಿನಲ್ಲಿದೆ. 2005 ರಿಂದ 2022 ರವರೆಗೆ ವೆಸ್ಟ್ ಇಂಡೀಸ್ ಸೇರಿದಂತೆ ವಿವಿಧ ತಂಡಗಳ ಪರ ಕಣಕ್ಕಿಳಿದಿರುವ ಕ್ರಿಸ್ ಗೇಲ್ 455 ಇನಿಂಗ್ಸ್‌ಗಳಿಂದ ಒಟ್ಟು 14562 ರನ್ ಕಲೆಹಾಕಿದ್ದಾರೆ. ಈ ಮೂಲಕ ಟಿ20 ಕ್ರಿಕೆಟ್‌ನಲ್ಲಿ ಅತೀ ಹೆಚ್ಚು ರನ್ ಬಾರಿಸಿದ ಬ್ಯಾಟರ್ ಎನಿಸಿಕೊಂಡಿದ್ದಾರೆ. ಕ್ರಿಸ್ ಗೇಲ್ ಬಳಿಕ ಕೀರನ್ ಪೊಲಾರ್ಡ್ 14 ಸಾವಿರ ರನ್‌ಗಳ ಸಾಧನೆ ಮಾಡಿದ್ದರು. ಪೊಲಾರ್ಡ್ ಟಿ20 ಕ್ರಿಕೆಟ್‌ನಲ್ಲಿ ಈವರೆಗೆ 634 ಇನಿಂಗ್ಸ್ ಆಡಿದ್ದಾರೆ. ಈ ವೇಳೆ 9287 ಎಸೆತಗಳನ್ನು ಎದುರಿಸಿರುವ ಅವರು ಬರೋಬ್ಬರಿ 14012 ರನ್ ಕಲೆಹಾಕಿದ್ದಾರೆ. ಇದೀಗ ಪೊಲಾರ್ಡ್ ಅವರನ್ನು ಹಿಂದಿಕ್ಕುವಲ್ಲಿ ಅಲೆಕ್ಸ್ ಹೇಲ್ಸ್ ಯಶಸ್ವಿಯಾಗಿದ್ದಾರೆ. ಟಿ20 ಕ್ರಿಕೆಟ್‌ನಲ್ಲಿ ಈವರೆಗೆ 505 ಇನಿಂಗ್ಸ್ ಆಡಿರುವ ಅಲೆಕ್ಸ್ ಹೇಲ್ಸ್ 9642 ಎಸೆತಗಳನ್ನು ಎದುರಿಸಿ 14024 ರನ್ ಕಲೆಹಾಕಿದ್ದಾರೆ. ಈ ಮೂಲಕ ಟಿ20 ಕ್ರಿಕೆಟ್‌ನಲ್ಲಿ ಅತ್ಯಧಿಕ ರನ್‌ಗಳಿಸಿದ ವಿಶ್ವದ 2ನೇ ಬ್ಯಾಟರ್ ಎನಿಸಿಕೊಂಡಿದ್ದಾರೆ. ಅಲ್ಲದೆ ಅಲೆಕ್ಸ್ ಬ್ಯಾಟ್‌ನಿಂದ ಇನ್ನು 539 ರನ್‌ಗಳು ಮೂಡಿಬಂದರೆ ಹೊಸ ಇತಿಹಾಸ ನಿರ್ಮಾಣವಾಗಲಿದೆ.

ಅಂದರೆ ಟಿ20 ಕ್ರಿಕೆಟ್‌ನಲ್ಲಿ ಅತ್ಯಧಿಕ ರನ್ ಕಲೆಹಾಕಿದ ಕ್ರಿಸ್ ಗೇಲ್ ಅವರ ವಿಶ್ವ ದಾಖಲೆ ಮುರಿಯಲು ಅಲೆಕ್ಸ್ ಹೇಲ್ಸ್‌ಗೆ ಬೇಕಿರುವುದು ಕೇವಲ 539 ರನ್‌ಗಳು ಮಾತ್ರ. ಹೀಗಾಗಿ ಮುಂಬರುವ ಟಿ20 ಲೀಗ್‌ಗಳ ಮೂಲಕ ಇಂಗ್ಲೆಂಡ್ ದಾಂಡಿಗ ಹೊಸ ವಿಶ್ವ ದಾಖಲೆ ಬರೆಯುವುದನ್ನು ಎದುರು ನೋಡಬಹುದು.

## ತಂಡವೊಂದು ಮೂರು ಬಾಗಿಲಾದ ರಾಜಸ್ಥಾನ್ ರಾಯಲ್ಸ್



ರಾಜಸ್ಥಾನ್ ರಾಯಲ್ಸ್ ತಂಡದಲ್ಲಿ ಎಲ್ಲವೂ ಸರಿಯಿಲ್ಲ ಎಂಬುದು ಕಳೆದ ಸೀಸನ್ ಐಪಿಎಲ್‌ನಲ್ಲೇ ಜಗಜ್ಜಾಹೀರಾಗಿತ್ತು. ಈ ಜಾಹೀರಾಗುವಿಕೆಯನ್ನು ಪುಷ್ಟೀಕರಿಸುವಂತೆ ಇದೀಗ ಒಂದಷ್ಟು ವಿಚಾರಗಳು ಹೊರಬೀಳುತ್ತಿದೆ. ಅದರಲ್ಲೂ ಮುಖ್ಯ ಕೋಚ್ ಹುದ್ದೆಯಿಂದ ರಾಹುಲ್ ದ್ರಾವಿಡ್ ಹೊರ ನಡೆದ ಬೆನ್ನಲ್ಲೇ ತಂಡದ ಇನ್ ಸೈಡ್ ವಿಷಯವೊಂದು ಹೊರಬಿದ್ದಿದೆ.

ರಾಜಸ್ಥಾನ್ ರಾಯಲ್ಸ್ ಮೂಲಗಳ ಮಾಹಿತಿ ಪ್ರಕಾರ, ನಾಯಕತ್ವದ ವಿಷಯದಲ್ಲಿ ಫ್ರಾಂಚೈಸಿಯಲ್ಲೇ ಗೊಂದಲ ಏರ್ಪಟ್ಟಿದೆ. ಅಂದರೆ ಮುಂದಿನ ಸೀಸನ್‌ನಲ್ಲಿ ಯಾರನ್ನು ನಾಯಕರನ್ನಾಗಿ ಸಬೇಕೆಂಬ ವಿಚಾರದಲ್ಲಿ ಭಿನ್ನಾಭಿಪ್ರಾಯಗಳಿವೆ. ಈ ಭಿನ್ನಾಭಿಪ್ರಾಯಗಳನ್ನು ಹೊಂದಿರುವವರು ಒಬ್ಬೊಬ್ಬರನ್ನು ನಾಯಕರನ್ನಾಗಿ ಮಾಡಬೇಕೆಂದು ಪಟ್ಟು ಹಿಡಿದಿರುವುದೇ ಸಮಸ್ಯೆ.

ರಾಜಸ್ಥಾನ್ ರಾಯಲ್ಸ್ ಫ್ರಾಂಚೈಸಿಯ ಒಂದು ಗುಂಪು ಪ್ರಸ್ತುತ ತಂಡದ ಕ್ಯಾಪ್ಟನ್ ಸಂಜು ಸ್ಯಾಮ್ಸನ್ ಅವರನ್ನೇ ನಾಯಕನಾಗಿ ಮುಂದುವರೆಸಬೇಕೆಂದು ಆಗ್ರಹಿಸುತ್ತಿದ್ದಾರೆ. ಆದರೆ ಇದಕ್ಕೆ ಫ್ರಾಂಚೈಸಿಯ ಕೆಲವರಿಂದ ಆಕ್ಷೇಪಣೆಯಿದೆ ಎಂದು ವರದಿಯಾಗಿದೆ. ಮತ್ತೊಂದೆಡೆ ಫ್ರಾಂಚೈಸಿಯ ಒಂದು ಗ್ರೂಪ್ ರಿಯಾನ್ ಪರಾಗ್ ಅವರನ್ನು ನಾಯಕನಾಗಿ ಆಯ್ಕೆ ಮಾಡಬೇಕೆಂಬ ಬೇಡಿಕೆಯನ್ನು ಮುಂದಿಟ್ಟಿದ್ದಾರೆ. ಪರಾಗ್ ಆಲ್ ರೌಂಡರ್ ಆಟಗಾರ, ಭವಿಷ್ಯದ ದೃಷ್ಟಿಯಲ್ಲಿ ಈಗಾಲೇ ನಾಯಕತ್ವ ನೀಡುವುದು ಉತ್ತಮ ಎಂಬ ಅಭಿಪ್ರಾಯವನ್ನು ಅವರು ಮುಂದಿಡುತ್ತಿದ್ದಾರೆ.

ಆರ್‌ಆರ್ ಫ್ರಾಂಚೈಸಿಯ ಇನ್ನೊಂದು ಗ್ರೂಪ್ ಯಶಸ್ವಿ ಜೈಸ್ವಾಲ್ ಅವರಿಗೆ ನಾಯಕತ್ವ ನೀಡಬೇಕೆಂದು ಆಗ್ರಹಿಸಿದ್ದಾರೆ. ಜೈಸ್ವಾಲ್ ಕಳೆದ ಕೆಲ ವರ್ಷಗಳಿಂದ ರಾಜಸ್ಥಾನ್ ರಾಯಲ್ಸ್ ತಂಡದ ಭಾಗವಾಗಿದ್ದಾರೆ. ಅಲ್ಲದೆ ಸ್ಥಿರ ಪ್ರದರ್ಶನ ನೀಡುತ್ತಾ ಬಂದಿದ್ದಾರೆ. ಭವಿಷ್ಯ ದೃಷ್ಟಿಯಿಂದ ಜೈಸ್ವಾಲ್‌ಗೆ ಕ್ಯಾಪ್ಟನ್ ಪಟ್ಟ ನೀಡುವುದು ಉತ್ತಮ ಎಂದು ಅಭಿಪ್ರಾಯಪಡುತ್ತಿದ್ದಾರೆ.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news

ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966